ಜನಶಕ್ತಿ



ಕನ್ನಡ ವಾರಪತ್ರಿಕೆ
Blog: janashakthi.wordpress.com e-mail : js_weekly@yahoo.com
ಸಂಪುಟ 6 ಸಂಚಿಕೆ 36
ಸೆಪ್ಟೆಂಬರ್ 02, 2012
ಪುಟ 16 ರೂ. 5/-

1.86 ಲಕ್ಷ ಕೋಟಿ ಕಲ್ಲಿದ್ದಲು ಹಗರಣ....



ದೇಶದ ಬೊಕ್ಕಸಕ್ಕೆ ಬಾರಿ ದೋಖಾ



ತಂಡ ಕಟ್ಟಿಕೊಂಡು ದಂಡ ಯಾತ್ರೆ



ಬಗರ್ ಹುಕುಂ ಸಾಗುವಳಿ ರೈತರ ಹೋರಾಟಃ ದುರಂತ ಸಾವು



ವಲಸಿಗರ ಸಮಸ್ಯೆಗಿದೆ ಮಾನವೀಯ ಮುಖ

ಅಪರಾಧಿಗಳು ಅಪರಾಧಿಗಳನ್ನು ತಡೆಯಬಲ್ಲರೇ?

ಏನಿದು ಜನೆರಿಕ್ ಔಷಧಿ?

ಅಂಗನವಾಡಿ ನೌಕರರ 6ನೇ ಕಾರವಾರ ತಾಲೂಕಾ ಸಮ್ಮೇಳನ

ಆಹಾರ-ಆರೋಗ್ಯ-ಶಿಕ್ಷಣದ ಭದ್ರತೆಯಿಲ್ಲದ ಸಮಾಜಿಕ ವ್ಯವಸ್ಥೆಯಿಂದ ದೇಶ ಪ್ರಗತಿ ಹೊಂದುವುದಿಲ್ಲ. ರಾಷ್ಟ್ರೀಯ ಅಪಮಾನವಾದ ಅಪೌಷ್ಠಿಕತೆ ಹೋಗಲಾಡಿಸಲು ಸರ್ಕಾರ ಕೂಡಲೇ ದುಡಿಮೆಗೆ ತಕ್ಕ ಪ್ರತಿಫಲವನ್ನು ನೀಡುವ ಜವಾಬ್ದಾರಿಯನ್ನು ಪೂರೈಸಲಿ. ಹಸಿವಿನಿಂದ ಕಂಗೆಡುವ ಪರಿಸ್ಥಿತಿಯಿಂದ ಪಾರುಮಾಡಲಿ ಎಂದು ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಸರ್ಕಾರವನ್ನು ಒತ್ತಾಯಿಸಿದರು. ಅವರು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಸಭಾಂಗಣದಲ್ಲಿ ನಾಗವೇಣಿ ಗೌಡ ವೇದಿಕೆಯಲ್ಲಿ ಅಂಗನವಾಡಿ ನೌಕರರ ಕಾರವಾರ ತಾಲೂಕಾ 6 ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.




ಅಂಗನವಾಡಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿ ಶಾಲಾಪೂರ್ವ ಶಿಕ್ಷಣ ಮತ್ತು ಸಮುದಾಯ ಜನಾರೋಗ್ಯವು ಆಂದೋಲನದ ರೂಪದಲ್ಲಿ ನಡೆಯಲು ಅಂಗನವಾಡಿ ನೌಕರರ ಕೊಡುಗೆ ಮುಖ್ಯವಾಗಿದೆ. ಸರ್ಕಾರಗಳು ಭಾವೀ ಮಾನವ ಸಂಪನ್ಮೂಲವನ್ನು ವ್ಯವಸ್ಥಿತವಾಗಿ ಸಜ್ಜುಗೊಳಿಸಲು ಯೋಜನೆ ರೂಪಿಸುವಲ್ಲಿ ಹಿಂದೇಟು ಹಾಕುತ್ತಿವೆ. ಹಾಗಾಗಿಯೇ ಮಕ್ಕಳ ಹಕ್ಕು ರಕ್ಷಣೆಯಾಗುತ್ತಿಲ್ಲ, ಅವರಿಗಾಗಿ ದುಡಿಯುವವರ ಬವಣೆ ಮುಗಿಲು ಮುಟ್ಟಿದೆ ಎಂದರು. ಜಿಲ್ಲಾ ಅಧ್ಯಕ್ಷೆ ಸವಿತಾ ತನ್ಮಡ್ಗಿ ಮಾತನಾಡಿ ವಿಶ್ರಾಂತಿ ರಹಿತವಾಗಿ ದುಡಿಯುತ್ತಿರುವ ಅಂಗನವಾಡಿ ನೌಕರರಿಗೆ ನೆಮ್ಮದಿಯ ಜೀವನದ ಭರವಸೆ ನೀಡಲು ಸರ್ಕಾರ ಕೆಲಸದ ಖಾಯಮಾತಿಗೆ ದಿಟ್ಟ ಕ್ರಮ ಕೈಗೊಳ್ಳಬೇಕು ಎಂದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಅಂಗನವಾಡಿ ನೌಕರರ ಹಿರಿಯ ಹೋರಾಟಗಾರ್ತಿ ಅಹಲ್ಯ ನಾಯ್ಕ ಆರಭಂದಲ್ಲಿ ಧ್ವಜಾರೋಹಣ ನಡೆಸಿ ಮಾತನಾಡಿ ಬಡಜನತೆಯ ಹೋರಾಟವೊಂದೇ ಬದುಕುವ ಹಕ್ಕು ರಕ್ಷಿಸುತ್ತದೆ ಎಂದರು. ಪ್ರಾರಂಭದಲ್ಲಿ ಸ್ವಾಗತಿಸಿ ವರದಿ ನೀಡಿದವರು ಮಾಯಾ ಕಾಣೇಕರ. ಗೀತಾ ರಾಯ್ಕರ್ ವಂದಿಸಿದರು. ಮೋಹಿನಿ ನಮ್ಸೇಕರ್, ಇಂದುಮತಿ, ಅಲ್ಕಾ ಗುರವ್, ರಜನಿ ಹಬ್ಬು, ನಿರ್ಮಲಾ ನಾಯ್ಕ, ಮೀನಾ ನಾಯ್ಕ, ಸರೋಜಿನಿ, ಮಂಜುಳಾ ಕಾಣಕೋಣಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದು ಪ್ರತಿನಿಧಿ ಅಧಿವೇಶನ ನಡೆಸಿದರು.

ನೂತನ ಸಮಿತಿ ಆಯ್ಕೆ: ಅಧ್ಯಕ್ಷರಾಗಿ ಮೋಹಿನಿ ನಮ್ಸೇಕರ್ ಕಾರ್ಯದರ್ಶಿಯಾಗಿ ಗೀತಾ ರಾಯ್ಕರ್, ಖಜಾಂಚಿಯಾಗಿ ಮಾಯಾ ಕಾಣೇಕರ್ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಅಹಲ್ಯ ನಾಯ್ಕ, ಇಂದುಮತಿ ದೇವಸ್ಕರ್, ರಜನಿ ಹಬ್ಬು, ಮೀನಾ ನಾಯ್ಕ, ಹಸೀನಾ ಸಹಕಾರ್ಯದರ್ಶಿಯಾಗಿ ತಾರಾ ನಾಯ್ಕ, ನಿರ್ಮಲಾ ನಾಯ್ಕ, ಅಲ್ಕ ಗುರವ್, ವೈಶಾಲಿ, ಸುಮಂಗಲಾ ಮಡಿವಾಳ ಆಯ್ಕೆಯಾದರು.

ಮೋಹಿನಿ ನಮ್ಸೇಕರ್, ಅಧ್ಯಕ್ಷರು

ಕೃಪೆ : ದಿ ಹಿಂದು



ಬಾಗಳಿ : ರಸ್ತೆ ಡಾಂಬರೀಕರಣ ಹಾಗೂ ಸಾರಿಗೆ ಸೌಕರ್ಯಕ್ಕೆ ಒತ್ತಾಯಿಸಿ ರಸ್ತೆ ತಡೆ



ಬಾಗಳಿ ಕ್ರಾಸ್ ಬಳಿ ರಸ್ತೆ ನಡೆಸುತ್ತಿರುವುದು.

ಬಾಗಳಿ 10ನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರ ಹಾಗೂ 12ನೇ ಶತಮಾನದಲ್ಲಿ ಹೊಯ್ಸಳರ ರಾಜ ಧಾನಿಯಾಗಿತ್ತು ಎಂಬ ಇತಿಹಾಸವಿದೆ. ಅಂದು 33 ಹಳ್ಳಿಗಳ ರಾಜಧಾನಿ ಎಂದು ಪ್ರಸಿದ್ದಿ ಪಡೆದಿತ್ತು. ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿತ್ತು. ನಂತರ ಹರಪನಹಳ್ಳಿ ಪಾಳೆಗಾರರು ಈ ರಾಜಧಾನಿಯನ್ನು ನೋಡಿಕೊಳ್ಳುತ್ತಿದ್ದರು ಎನ್ನುತ್ತದೆ ಇತಿಹಾಸ. ಬಾಗಳಿ ಗ್ರಾಮ ರಾಜ್ಯದಲ್ಲಿ ಪ್ರಸಿದ್ದವಾಗಿರುವ ಪ್ರಾಚೀನ ಕಾಲದ ದೇವಾಲಯಗಳನ್ನು ಹೊಂದಿದೆ. ಶ್ರೀ ಕಲ್ಲೇಶ್ವರ ದೇವಸ್ಥಾನ ಹಾಗೂ ದಾವಣಗೆರೆ ಜಿಲ್ಲೆಯ ಏಕ ಮಾತ್ರ ಪ್ರಾಚೀನ ವಸ್ತು ಸಂಗ್ರಾಲಯ (ದೇವಸ್ಥಾನದ ಮ್ಯೂಜಿಯಂ)ವನ್ನು ಹೊಂದಿದೆ. ಈ ಗ್ರಾಮ ತನ್ನನ್ನು ನೋಡಲು ಪ್ರವಾಸಿಗರನ್ನು ಕೈ ಬಿಸಿ ಕರೆಯುತ್ತಿದೆ. ಇದು ಅನೇಕ ವಿದ್ಯಾವಂತರನ್ನು ಹೊಂದಿರುವ ಗ್ರಾಮವಾಗಿದೆ. ಬಾಗಳಿ ಗ್ರಾಮವು ಕಳೆದ 25 ವರ್ಷಗಳಿಂದ ರಸ್ತೆಯ ಅಭಿವೃದ್ಧಿ ಕಾಣದೆ ಶಿಥಿಲಾವಸ್ಥೆಯಲ್ಲಿತ್ತು. ರೋಗಿಗಳು ಮತ್ತು ಗರ್ಭಿಣಿ ಸ್ತ್ರೀಯರಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಹೋಗಲು ಮತ್ತು ಬಾಗಳಿ ಗ್ರಾಮದಲ್ಲಿರುವ ನಾಟಿ ವೈದ್ಯರನ್ನು ಭೇಟಿ ಮಾಡಲು ಬರುವ ರೋಗಿಗಳಿಗೆ ತೊಂದರೆಯಾಗಿತ್ತು. ಜೊತೆಗೆ ಉನ್ನತ ಶಿಕ್ಷಣಕ್ಕೆ ಹೋಗುವ ವಿದ್ಯಾರ್ಥಿಗಳು ಬಸ್ ಸೌಕರ್ಯದಿಂದ ವಂಚಿತರಾಗಿದ್ದರು. ಈ ರಸ್ತೆಯ ಬಗ್ಗೆ ಅಧಿಕಾರಿಗಳು ಗಮನ ಹರಿಸದೆ ನಿರ್ಲಕ್ಷತನದಿಂದ ರಸ್ತೆ ಹದಗೆಟ್ಟಿತ್ತು. ಆದ ಕಾರಣ ಹೊಸಪೇಟೆ ಮುಖ್ಯರಸ್ತೆಯಿಂದ ಬಾಗಳಿ ಗ್ರಾಮದ ಕೂಲಹಳ್ಳಿ ಮಾರ್ಗವಾಗಿ ಹಡಗಲಿಯ ಮುಖ್ಯ ರಸ್ತೆಯವರೆಗೆ ಹಾಗೂ ಬಾಗಳಿ ಗ್ರಾಮದ ಶ್ರೀ ಕಲ್ಲೇಶ್ವರ ದೇವಸ್ಥಾನದವರೆಗೆ ಸುಮಾರು 9.20 ಕಿ.ಮೀ ಉದ್ದದಷ್ಟು ಡಾಂಬರೀಕರಣ ಮಾಡಬೇಕು ಮತ್ತು ಬಾಗಳಿ ಮತ್ತು ಕೂಲಹಳ್ಳಿ ಗ್ರಾಮಗಳಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು ಹಾಗೂ ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸಬೇಕೆಂದು ಊರಿನ ಗ್ರಾಮಸ್ಥರು ಬಾಗಳಿ ಕ್ರಾಸ್ ಬಳಿ(ಹೊಸಪೇಟೆ ಮುಖ್ಯರಸ್ತೆ) ರಸ್ತೆಯನ್ನು ಬಂದ್ ಮಾಡುವ ಮೂಲಕ ಜಿಲ್ಲಾಧಿಕಾರಿಗಳು, ಲೋಕಸಭಾ ಸದಸ್ಯರು, ಶಾಸಕರು, ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, (ಪಿ.ಡಬ್ಲ್ಯೂ.ಡಿ), ಹರಪನಹಳ್ಳಿ, ಸಾರಿಗೆ ವ್ಯವಸ್ಥಾಪಕರು, ಹರಪನಹಳ್ಳಿ ಘಟಕ. ಇವರುಗಳಿಗೆ ಮನವಿಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಪಿ.ಡಬ್ಲ್ಯೂ.ಡಿ.ಅಧಿಕಾರಿಗಳಾದ ಉಮಾಪತಿಯವರು ಲಿಖಿತ ರೂಪದಲ್ಲಿ "ಸದ್ಯದಲ್ಲಿ ಮಳೆಗಾಲವಾದ್ದರಿಂದ ನವೆಂಬರ್ ತಿಂಗಳಲ್ಲಿ ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ ರಸ್ತೆ ನಿರ್ಮಾಣ ಮಾಡಲಾಗುವುದು ಎಂದು ಭರವಸೆ ನೀಡಿದ ನಂತರ ಮತ್ತು ಕೂಡಲೇ ತಾತ್ಕಾಲಿಕವಾಗಿ ಗರಸು ಹಾಕಿಸುವ ವ್ಯವಸ್ಥೆಯನ್ನು ಮಾಡಿದ ನಂತರ ಹಾಗೂ ಡಿಪೋ ವ್ಯವಸ್ಥಾಪಕರು ಉಪವಿಭಾಗಾಧಿಕಾರಿಗಳ ಎದುರಲ್ಲಿ ದಿನ ನಿತ್ಯ ಎರಡು ಸಮಯದಲ್ಲಿ ಬಸ್ ಸೌಕರ್ಯವನ್ನು ಆರಂಭಿಸಲಾಗುವುದು ಎಂದು ತಿಳಿಸಿದ ನಂತರ ಪ್ರತಿಭಟನೆಯನ್ನು ಕೈಬಿಡಲಾಯಿತು. ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಹೊಸಪೇಟೆ ಮುಖ್ಯರಸ್ತೆಯಲ್ಲಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು.



ಜೊತೆಗೆ ಬಾಗಳಿ ಗ್ರಾಮದ, ಜನತೆಗೆ ಪ್ಲೋರೈಡ್ ನೀರಿನ ಬದಲು ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದೂ ಒತ್ತಾಯಿಸಲಾಯಿತು.

ಈ ಹೋರಾಟದ ನೇತೃತ್ವವನ್ನು ಕರಿಬಸಪ್ಪ, ಪಿ. ಜಗದೀಶ್ ಬಿ. ಪ್ರಕಾಶ್.ಜಿ., ಆಟೋ ಮಾಲೀಕರು ಹಾಗೂ ಚಾಲಕರು, ಎನ್.ಕೊಟ್ರೇಶ್, ಸಿ.ರವೀಂದ್ರ ವಹಿಸಿದ್ದರು. ಬಾಗಳಿ ಗ್ರಾಮದ ಸಾರ್ವಜನಿಕರು ಪ್ರತಿಭಟನೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

ಕರಿಬಸಪ್ಪ ಪರಶೆಟ್ಟಿ ಬಾಗಳಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ವಲಸಿಗರ ಸಮಸ್ಯೆಗೊಂದು ಮಾನವೀಯ ಮುಖವಿದೆ

ಅಸ್ಸಾಂ ರಾಜ್ಯದಲ್ಲಿ ಭುಗಿಲೆದ್ದ ಜನಾಂಗೀಯ ಹಿಂಸಾಚಾರಕ್ಕೆ ಬಾಂಗ್ಲಾ ದೇಶಿಯರ ಅಕ್ರಮ ವಲಸೆಯೇ ಕಾರಣವೆಂದು ವಿಶ್ಲೇಷಿಸಲಾಗುತ್ತಿದೆ. ಬಾಂಗ್ಲಾದೇಶದಿಂದ ಭಾರತದ ಗಡಿಯೊಳಗೆ ಬಂದವರು ಬಹುತೇಕವಾಗಿ ಮುಸಲ್ಮಾನರು ಎನ್ನುವುದು ನಿಜ. ಅವರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಹೆಚ್ಚಾಗಿರುವುದೂ ಸಹ ನಿಜವೇ. ಆದರೆ ಅವರೆಲ್ಲರೂ ಬಡವರು. ಹೊಟ್ಟೆಪಾಡಿಗಾಗಿ ವಲಸೆ ಬಂದವರು. ಭಾರತದ ವಿಭಜನೆಯಾದಾಗ ಬಂಗಾಳದಂತೆಯೇ ಆಸ್ಸಾಂ ಪ್ರಾಂತ್ಯವೂ ವಿಭಜನೆಯಾಗಿತ್ತು. ಆಸ್ಸಾಂನ ಒಂದು ಜಿಲ್ಲೆ ಪೂರ್ವ ಪಾಕಿಸ್ತಾನದ ಭಾಗವಾಗಿದ್ದು ಈಗ ಅದು ಬಾಂಗ್ಲಾದೇಶದ ಭಾಗವಾಗಿದೆ. ಗಡಿಯ ಎರಡೂ ಕಡೆ ವಾಸವಿರುವ ಜನರಲ್ಲಿ ಹೇಳಿಕೊಳ್ಳುವಂತಹ ವ್ಯತ್ಯಾಸಗಳು ಇರುವುದಿಲ್ಲ. ಮಾತ್ರವಲ್ಲ ಅವರು ಪರಸ್ಪರ ರಕ್ತಸಂಬಂಧಿಗಳೂ ಆಗಿರುತ್ತಾರೆ. ದೇಶ ವಿಭಜನೆಯಾಗಿದ್ದರೂ ಕೌಟುಂಬಿಕ ಸಂಬಂಧಗಳು ವಿಭಜನೆ ಆಗಿರುವುದಿಲ್ಲ. ಹಾಗಾಗಿ ಎರಡೂ ಕಡೆಯ ಜನ ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಹೋಗುವುದು ಬರುವುದು ಇದ್ದೇ ಇರುತ್ತದೆ. ಗುಡ್ಡಗಾಡಿನ ಈ ಸೀಮೆಯ ಅನೇಕ ಕಡೆಗಳಲ್ಲಿ ಗಡಿ ರೇಖೆಯೇ ಸ್ಪಷ್ಟವಾಗಿರದ ಕಾರಣ ವಲಸೆ ಎಂಬುದು ಸಹಜ ಪ್ರಕ್ರಿಯೆಯಾಗುತ್ತದೆ. ಈ ವಿದ್ಯಮಾನ ಬಾಂಗ್ಲಾದೇಶದ ಗಡಿಗೆ ಹೊಂದಿಕೊಂಡಿರುವ ಭಾರತದ ಇತರ ರಾಜ್ಯಗಳ ವಿಷಯದಲ್ಲಿಯೂ ನಿಜವಿರುತ್ತದೆ.


ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವಿದೆ. ಅಸ್ಸಾಂ ರಾಜ್ಯದಲ್ಲಿರುವ ಮುಸಲ್ಮಾನರೆಲ್ಲ ಇತ್ತೀಚೆಗೆ ಬಾಂಗ್ಲಾ ದೇಶದಿಂದ ವಲಸೆ ಬಂದವರಲ್ಲ. ಅಲ್ಲಿ ಅಸ್ಸಾಮಿ ಭಾಷೆ ಮಾತನಾಡುವ ಮುಸಲ್ಮಾನರಿದ್ದಾರೆ. ಅವರ ಪೂರ್ವಜರು ಮೊಗಲರ ಕಾಲದಲ್ಲಿ ಇಲ್ಲಿ ಬಂದು ನೆಲೆಸಿದವರಾಗಿದ್ದು ಅವರು ಆಸ್ಸಾಮಿ ಮುಸಲ್ಮಾನರಾಗಿದ್ದಾರೆ. ಇಲ್ಲಿ ಬಂಗಾಳಿ ಭಾಷಿಕರಾದ ಮುಸಲ್ಮಾನರಿದ್ದಾರೆ. ಇವರು ದೇಶ ವಿಭಜನೆಯ ಪೂರ್ವದಲ್ಲೇ ಇಲ್ಲಿ ಬಂದು ನೆಲೆಸಿದ್ದವರಾಗಿದ್ದು ಭಾರತದ ಪೌರತ್ವವನ್ನು ಹೊಂದಿದವರಾಗಿದ್ದಾರೆ. ಇನ್ನೊಂದು ವಿಭಾಗ 1971 ರಲ್ಲಿ ಬಾಂಗ್ಲಾದೇಶ ರಚನೆಯಾದ ನಂತರ ಗಡಿಯೊಳಗೆ ಪ್ರವೇಶಿಸಿದ ಬಂಗಾಳಿ ಭಾಷೆ ಮಾತನಾಡುವ ಮುಸಲ್ಮಾನರಾಗಿದ್ದಾರೆ.

70 ಕ್ಕೂ ಹೆಚ್ಚು ಜೀವಗಳನ್ನು ಬಲಿತೆಗೆದುಕೊಂಡು ಲಕ್ಷಾಂತರ ಜನರನ್ನು ನಿರಾಶ್ರಿತರಾಗಿಸಿದ ಈ ಹಿಂಸಾಚಾರವನ್ನು 'ಭಾರತೀಯರೂ ಮತ್ತು ವಿದೇಶಿಯರ' ನಡುವಿನ ಸಂಘರ್ಷ ಎಂದು ಬಣ್ಣಿಸುವ ಮೂಲಕ ಭಾರತೀಯ ಜನತಾ ಪಾರ್ಟಿ ಉರಿಯುತ್ತಿರುವ ಬೆಂಕಿಗೆ ಪೆಟ್ರೋಲ್ ಸುರಿದಿದೆ. ಭಾ.ಜ.ಪ.ದ ಹಿರಿಯ ಮುಖಂಡ ಎಲ್.ಕೆ. ಆಡ್ವಾಣಿ ಆಸ್ಸಾಂ ಬೆಳವಣಿಗೆಯನ್ನು 'ಜನಾಂಗೀಯ ಸ್ವಚ್ಛತಾಕಾರ್ಯ' ಎಂದು ಸಮರ್ಥಿಸಿದ್ದಾರೆ. ಆಡ್ವಾಣಿಯವರ ಕರ್ನಾಟಕದ ಶಿಷ್ಯ ಸುಧೀಂದ್ರ ಕುಲಕರ್ಣಿ ಅಗಸ್ಟ್ 15ರ ಉದಯವಾಣಿ ಸಂಚಿಕೆಯಲ್ಲಿ ಲೇಖನವೊಂದನ್ನು ಬರೆದು ಇದು 'ಧಾರ್ಮಿಕ ಶುಚೀಕರಣ' ಎಂಧು ಹೊಗಳಿದ್ದಾರೆ. ಈ ವಾದ ಸರಣಿಯ ಹಿಂದಿರುವ ತರ್ಕ ಸ್ಪಷ್ಟವಾಗಿದೆ. ಆಸ್ಸಾಂ ಮುಸಲ್ಮಾನರೆಲ್ಲರೂ ಅಕ್ರಮ ವಲಸಿಗರು. ಮುಸಲ್ಮಾನರ ಮೇಲೆ ದೌರ್ಜನ್ಯ ಮಾಡಿ ಅವರನ್ನು ದೇಶದಿಂದ ಹೊರದಬ್ಬಲು ಪ್ರಯತ್ನಿಸುವುದು 'ಜನಾಂಗೀಯ ಸ್ವಚ್ಛತಾಕಾರ್ಯ'. ಹೇಗಿದೆ ನೋಡಿ, ಫ್ಯಾಸಿಸ್ಟ್ ದೇಶವೊಂದರ ನಿರ್ಮಾಣದ ಕೆಟ್ಟ ಕನಸು! ಆಸ್ಸಾಮಿನ ಎಲ್ಲ ಸಮಸ್ಯೆಗಳಿಗೆ ಅಲ್ಲಿರುವ ಮುಸಲ್ಮಾನರೇ ಕಾರಣ ಎಂದು ಬಿಂಬಿಸುವ ಹಿಟ್ಲರ್‌ಶಾಹಿ ತಂತ್ರ!

ವಲಸೆ ಎಂಬ ಸಾಮಾಜಿಕ ಸಮಸ್ಯೆಗೆ ವರ್ಗ–ಜಾತಿ ವಿಭಜಿತ ಸಮಾಜದಲ್ಲಿ ಪರಿಹಾರವಿಲ್ಲ. ದೇಶಗಳ, ಸಾಮ್ರಾಜ್ಯಗಳ ಗಡಿಗಳೇ ಇಲ್ಲದಂತಹ ಸಮತಾ ಸಮಾಜದಲ್ಲಿ ಮಾತ್ರ ವಲಸೆ ಅಕ್ರಮವಾಗಿರಲಾರದು. ಇಂದು ವಲಸೆ ಅನಿವಾರ್ಯವಾಗಿದೆ. ಹೊಟ್ಟೆಪಾಡಿಗಾಗಿ, ಉದ್ಯೋಗಗಳನ್ನು ಅರಸುತ್ತಾ ಜನ ವಲಸೆ ಹೋಗುತ್ತಾರೆ. ಬರಗಾಲ ಪೀಡಿತ ಜನ ವಲಸೆ ಹೋಗುತ್ತಾರೆ. ನೆರೆಹಾವಳಿಗೆ ತುತ್ತಾದ ಸಂತ್ರಸ್ಥರು ವಲಸೆ ಹೊಗುತ್ತಾರೆ. ಆಹಾರವನ್ನು ಹುಡುಕಿಕೊಂಡು ಪಶುಪಕ್ಷಿಗಳೇ ವಲಸೆ ಹೋಗುತ್ತಿರುವಾಗ ಮನುಷ್ಯರ ವಲಸೆಯನ್ನು ನಿರ್ಭಂಧಿಸಲು ಸಾಧ್ಯ? ಅದು ಸಾಧುವೆ?


ಟಿಬೆಟ್‌ನಿಂದ ವಲಸೆ ಬಂದವರಿಗೆ ಭಾರತದಲ್ಲಿ ನೆಲೆ ಕಲ್ಪಿಸಲಾಗಿಲ್ಲವೇ? ಇತ್ತೀಚೆಗೆ ಅಭದ್ರತೆಯ ಆತಂಕದಿಂದ ಪಾಕಿಸ್ತಾನದ ಹಿಂದೂಗಳು ಭಾರತಕ್ಕೆ ವಲಸೆ ಬರುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಹಾಗೆ ಪಾಕಿಸ್ತಾನದಿಂದ ವಲಸೆ ಬರುತ್ತಿರುವ ಹಿಂದುಗಳಿಗೆ ಭಾರತ ಪ್ರವೇಶ ನಿರಾಕರಿಸಬಹುದೇ? ಅತ್ಯಾಧುನಿಕ ಶಿಕ್ಷಣ ಪಡೆದ ಭಾರತೀಯರು ದೊಡ್ಡ ಸಂಖ್ಯೆಯಲ್ಲಿ ವಿದೇಶಗಳಿಗೆ ವಲಸೆ ಹೋಗುತ್ತಿರುತ್ತಾರೆ. ಈ ಪ್ರಕ್ರಿಯೆಯನ್ನು ಬಲವಂತವಾಗಿ ತಡೆಯಲು ಸಾಧ್ಯವೆ? ಆಯಾ ದೇಶಗಳ ಜನರಿಗೆ ಅಗತ್ಯ ಅವಕಾಶಗಳನ್ನು ಒದಗಿಸುವುದು ಆಯಾ ಸರ್ಕಾರಗಳ ಜವಾಬ್ದಾರಿ. ಸರ್ಕಾರಗಳು ಜವಾಬ್ದಾರಿಗಳನ್ನು ನಿರ್ವಹಿಸಲು ವಿಫಲವಾದಾಗ ಜನ ಅವಕಾಶಗಳನ್ನು ಹುಡುಕಿಕೊಂಡು ವಲಸೆ ಹೋಗುತ್ತಾರೆ. ಒಂದು ಪ್ರದೇಶಕ್ಕೆ ದೊಡ್ಡ ಪ್ರಮಾಣದಲ್ಲಿ ಹೊರಗಿನವರು ವಲಸೆ ಬಂದಾಗ ಸ್ಥಳೀಯರಿಗೆ ಅಡಚಣೆ ಉಂಟಾಗುವುದು ಸಹಜ. ಆದ್ದರಿಂದ ವಲಸೆಯನ್ನು ನಿಯಂತ್ರಿಸಲು ಕಾನೂನುಗಳ ರಚನೆ ಮತ್ತು ಅವುಗಳ ಪಾಲನೆ ಅಗತ್ಯ. ಆದರೆ ಇಂತಹ ಎಲ್ಲಾ ವಲಸಿಗರ ಸಮಸ್ಯೆಗೊಂದು ಮಾನವೀಯ ಮುಖವಿರುತ್ತದೆ ಎಂಬುದನ್ನು ನಾವು ಯಾರೂ ಮರೆಯಬಾರದು.

ಅಪರಾಧಿಗಳು ಅಪರಾಧಗಳನ್ನು ತಡೆಯ ಬಲ್ಲರೇ?



ಹದಿನೈದು ದಿನಗಳಲ್ಲಿ ಹಾಡ ಹಗಲೇ ಹತ್ತೊಂಬತ್ತು ಕೊಲೆಗಳು. ಹತ್ತಾರು ದರೋಡೆಗಳು. ಅಪ್ರಾಪ್ತ ಬಾಲಕಿಯ ಅತ್ಯಾಚಾರ ಮತ್ತು ಕಗ್ಗೊಲೆ! ಉದ್ಯಮಿಗಳಿಬ್ಬರ ಅಪಹರಣ, ಇನ್ನು ಸರಗಳ್ಳತನ, ಕಿಸೆಗತ್ತರಿ, ವಂಚನೆಗಳೋ ಅವು ನಿತ್ಯದ 'ಮಾಮೂಲಿ' ಘಟನೆಗಳು! ಇವು ಆಧುನಿಕ ಕರ್ನಾಟಕದ ಹೈಟೆಕ್ ರಾಜಧಾನಿ ಬೆಂಗಳೂರಿನಲ್ಲಿ, ಉನ್ನತ ಆಡಳಿತದ ಇದುರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳು!

ಬೆಂಗಳೂರು ಮಹಾ ನಗರದಲ್ಲಿನ ಆತಂಕದ ವಾತಾವರಣದ ಬಗ್ಗೆ, ಕಾನೂನು ಸುವ್ಯವಸ್ಥೆ ಕುಸಿದಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದವರು ಬೇರಾರೂ ಅಲ್ಲ. ಸ್ವತಃ ರಾಜ್ಯದ ಪ್ರಥಮ ಪ್ರಜೆ, ಸಂವಿಧಾನಾತ್ಮಕ



ಉನ್ನತ ಸ್ಥಾ
ರಾಜ್ಯಪಾಲರೇ. ಅ
ದಿನದಂದೇ. ಅವ
ಉತ್ಪ್ರೇಕ್ಷೆ ಇಲ್ಲ, ಸ
ಹೊರ ಬಂದ, ಕ
ಮುಖ್ಯಮಂತ್ರಿಗಳ
ಗಂಭೀರ ಪರಿಸ್ಥಿ

ಬೆಂಗಳೂರು–ಅ
ಹೀಗೇಕೆ?

ತೀರಾ ಇತ್ತೀಚೆಗೆ ನಗರದಲ್ಲಿ ಜಡಿ ಎಸ್ ಮುಖಂಡ, ರಿಯಲ್ ಎಸ್ಟೇಟ್ ಉದ್ಯಮಿ ಬೆಮೆಲ್ ಕೃಷ್ಣಪ್ಪನ ಕೊಲೆಯಾಯಿತು. ಯಾರಬ್‌ನಗರದ ಕಾರ್ಪೋರೇಟರ್ ದಿವಾನ್ ಅಲಿಯ ಕೊಲೆಯ ನೆನಪು ಮರೆಯಾಗುವ ಮುನ್ನವೇ ಕೆಲವು ತಿಂಗಳ ಹಿಂದೆ ಗಾಂಧಿನಗರ ವಾರ್ಡ್‌ನ ಕಾರ್ಪೋರೇಟರ್ ನಟರಾಜ್ ಹತ್ಯೆಯಾಯಿತು. ಕಾರಣಗಳೋ ಒಂದಲ್ಲ ಇನ್ನೊಂದು. ಆದರೆ ಹತ್ಯೆಗಳ ಸರಣಿಯಲ್ಲಿ ನುರಿತ ಕೊಲೆಪಾತಕಿ ತಂಡಗಳ ಪಾತ್ರವಿದೆ. ಇನ್ನು ಪುಡಿ ರೌಡಿಗಳ ಮಚ್ಚು ಬೀಸಾಟಗಳೋ! ಆದರೆ ಬಿಗಿ ಕ್ರಮಗಳಿದ್ದೂ ಇಷ್ಟೊಂದು ರಾಜಾರೋಷವಾಗಿ ಕ್ರೈಮ್ ನಡೆಯುವುದಾದರೂ ಹೇಗೆ?

ದೇಶದಲ್ಲಿ ಮಹಾನಗರಗಳಲ್ಲಿನ ಅಪರಾಧದ ಸಾಲಿನಲ್ಲಿ ಬೃಹತ್ ಬೆಂಗಳೂರಿಗೆ ಎರಡನೇ ಸ್ಥಾನ! ಮೊದನೆಯದ್ದು ರಾಷ್ಟ್ರದ ರಾಜಧಾನಿ ನವದೆಹಲಿ ಎನ್ನುತ್ತದೆ 'ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೋ' (ಎನ್.ಸಿ.ಆರ್.ಬಿ.). ಅದರ ದಾಖಲೆಗಳಂತೆ 2009ರಲ್ಲಿ ಭಾರತೀಯ ದಂಡಸಂಹಿತೆ(ಐ.ಪಿ.ಸಿ.) ವ್ಯಾಪ್ತಿಯಡಿ ದೇಶದಲ್ಲಿ 2,21,345 ಪ್ರಕರಣಗಳಲ್ಲಿ ಬೆಂಗಳೂರು ಅತೀಹೆಚ್ಚು ಪ್ರಕರಣಗಳನ್ನು ಹೊಂದಿದೆ. ಹತ್ತು ಮಹಾನಗರಗಳ ಸಾಲಿನಲ್ಲಿ ಬೆಂಗಳೂರು–32,380, ಮುಂಬೈ–31,262, ಅಹ್ಮದಾಬಾದ್–20,726, ಇಂದೋರ್–18,306 ಹೈದ್ರಾಬಾದ್–17840 ದಾಖಲಿಸಿದೆ. ವಿವಿಧ ಕಾನೂನು ವ್ಯಾಪ್ತಿಗೆ ಬರುವ 66,75,217 ಪ್ರಕರಣಗಳಲ್ಲಿ ದೆಹಲಿಯದ್ದು ಶೇ. 13.2 ಪಾಲಿದ್ದರೆ , ಬೆಂಗಳೂರಿನದು ಶೇ.9.4, ಮುಂಬೈ 3ನೇಸ್ಥಾನದಲ್ಲಿದೆ. ಇಡೀ ದಕ್ಷಿಣ ಭಾರತದಲ್ಲೇ ಬೆಂಗಳೂರು 'ಅಪರಾಧಗಳ ರಾಜಧಾನಿ' ಎಂದೂ ಬ್ಯೂರೋ

ನಿವೃತ್ತಿದಾರರ
ತ ಸುರಕ್ಷತೆಯ
ಾಗುತ್ತಿತ್ತು. ಹಿಂದೆ
ಎನ್.ಸಿ.ಆರ್.ಬಿ.
ರೇಟಿಂಗ್ ನಲ್ಲಿ
ಪಾಲು ಪಡೆದು)
ದಲ್ಲಿತ್ತು. ದೆಹಲಿ
ೖ 26 ರಲ್ಲಿದ್ದವು.

ಕ್ರೈಮ್ ನಲ್ಲಿ ವಿಜಯವಾಡ 2, ಮೊದಲನೆ ಸ್ಥಾನ ಇಂದೋರ್ ಇದ್ದವು. ಆದರೆ 2011 ರ ರೇಟಿಂಗ್ ನಲ್ಲಿ ದೆಹಲಿ43, ಬೆಂಗಳೂರು 44, ಮುಂಬೈ 46 ಪಡೆದಿವೆ.

ಸಂಘಟಿತ ಅಪರಾಧ, ಆರ್ಥಿಕ ಅಪರಾಧ, ಸೈಬರ್ ಕ್ರೈಮ್,ಮಹಿಳೆ–ಮಕ್ಕಳ ಮೇಲೆಸಗಿದ ಅಪರಾಧಗಳು, ಗ್ಯಾಂಗ್ ವಾರ್ ಇದರಲ್ಲಿವೆ. ಅಲ್ಲದೇ ಕೊಲೆ,ಕೊಲೆ ಯತ್ನ, ಅಪಹರಣ, ದಿಗ್ಬಂಧನ, ದರೋಡೆ, ಕಳ್ಳತನ, ನಂಬಿಕೆ ದ್ರೋಹ, ವಂಚನೆ, ಅತ್ಯಾಚಾರ, ವರದಕ್ಷಿಣೆ ಸಾವು, ಕೌಟಂಬಿಕ ಹಿಂಸೆ, ಲೈಂಗಿಕ ದಬ್ಬಾಳಿಕೆ, ವೇಶ್ಯಾವಾಟಿಕೆ, ಆತ್ಮಹತ್ಯೆ, ಭ್ರೂಣಹತ್ಯೆ ಹೀಗೆ ಪಟ್ಟಿ ಇನ್ನಷ್ಟು ಬೆಳೆದಿದೆ. ಇಂತಹ ಅಪರಾಧಗಳ ಹೆಚ್ಚಳದ ಬಗ್ಗೆ ಪ್ರಶ್ನಿಸಿದರೆ ಉನ್ನತ ಪೊಲೀಸ್ ಅಧಿಕಾರಿಗಳು ಕೊಡುವ ಉತ್ತರವೇ ಬೇರೆ. ಬೆಂಗಳೂರಿನ ಜನ ದೂರು ನೀಡುವುದರಲ್ಲಿ (ಅದನ್ನು ಪಡೆದು ದಾಖಲಿಸುವಲ್ಲಿಯೂ ಅಂತಾ) 'ಉದಾರಿಗಳು'! ಇದರಲ್ಲಿ ಕಳೆದು ಹೋದ ಮೊಬೈಲ್ ಪ್ರಕರಣಗಳು ಇವೆ ಎನ್ನುತ್ತಾರೆ.

ಅಪರಾಧಗಳ ಉದಾರೀಕರಣ!

ಪುಟ 4ಕ್ಕೆ

"ಗ್ರಾಮೀಣ ಪ್ರತಿಭೆ ಅವಿನಾಶ್ ಸಾಧನೆ"

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಕಸಬಾ ಹೋಬಳಿಯ ನೆಲ್ಲೂರು ಎಂಬ ಕುಗ್ರಾಮದಲ್ಲಿ ಸುಂದರಮ್ಮ-ಮಹಾದೇವುರವರ ಪುತ್ರನಾಗಿ 20-09-1993 ರಂದು ಜನಿಸಿದವರು ಅವಿನಾಶ್ ಎಂಬ ಗ್ರಾಮೀಣ ಯುವಕ.

ಗ್ರಾಮದ ಅಂಗನವಾಡಿಯಲ್ಲಿ ಬಾಲ್ಯ ಶಿಕ್ಷಣ ಪಡೆದು 1ನೇ ತರಗತಿಯಿಂದ 7ನೇ ತರಗತಿ ವರೆಗೆ ಮಳವಳ್ಳಿ ಪಟ್ಟಣ್ಣದ ರೋಟರಿ ಶಾಲೆಯಲ್ಲಿ ಶಿಕ್ಷಣ ಅಭ್ಯಾಸ ಮಾಡುತ್ತ ತಾಲ್ಲೂಕು ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದ ಅವಿನಾಶ್ ಹೆಚ್ಚು ಕಬಡ್ಡಿ ಆಟದಲ್ಲಿ ಆಸಕ್ತಿ ಹೊಂದಿದ್ದರು. ನಂತರ ಇವರ ಆಸಕ್ತಿಯನ್ನು ಗಮನಿಸಿದ ಕೆಲವು ಶಿಕ್ಷಕರು, ತಂದೆಯವರ ಸ್ನೇಹಿತರ ಒತ್ತಾಯದ ಮೇರೆಗೆ ಮಹಾದೇವುರವರು ಬೆಂಗಳೂರಿಗೆ ಕರೆದುಕೊಂಡು ಬಂದು ತ್ರಿವೇಣಿ ಎಂಬುವವರ



ಬಳಿ ಜೂಡೋ ತರಭೇತಿಗೆ (ಜೂಡೋ ಆಟ ಜಪಾನಿನ ಕುಸ್ತಿ) ಸೇರಿಸಿದರು.

ತ್ರಿವೇಣಿರವರು ಅವಿನಾಶ್‌ರವರಿಗೆ ಮಾರ್ಗದರ್ಶನ ಹಾಗೂ "ಜೂಡೋ" ತರಬೇತಿಯನ್ನು ನೀಡಿದರು.

ಜೂಡೋ ತರಬೇತಿಗೆ ಆಯ್ಕೆಯಾದ ಮೇಲೆ 8ನೇ ತರಗತಿಯಿಂದ 10ನೇ ತರಗತಿ ವರೆಗೆ ಶರ್ವನ್ ಕಾನ್ವೆಂಟ್ ಬೆಳಗಾವಿಯಲ್ಲಿ ವಿದ್ಯಾಭ್ಯಾಸದ ಜೊತೆಗೆ ತರಬೇತಿ ಹಾಗೂ ಜೂಡೋ ಸ್ಪರ್ದೆಗಳಲ್ಲಿ ಭಾಗವಹಿಸುತ್ತ ಕ್ರೀಡಾ ವಸತಿ ನಿಲಯದಲ್ಲಿ ವಾಸವಿದ್ದರು ನಂತರ ಶೇಕ್ ಕಾಲೇಜಿನಲ್ಲಿ ಪಿ.ಯು.ಸಿ ಮುಗಿಸಿ ಇಂದು ರಾಣಿ ಚನ್ನಮ್ಮ ಕಾಲೇಜಿನಲ್ಲಿ ಪ್ರಥಮ ಬಿ.ಎ. ವ್ಯಾಸಂಗ ಮಾಡುತ್ತಿದ್ದಾರೆ.

ಕಬಡ್ಡಿ ಆಟಗಾರನಾಗುವ ಕನಸು ಕಂಡರು "ಜೂಡೋ" ಆಟದಲ್ಲಿ ಬಹಳ ಆಸಕ್ತಿಯನ್ನು ಹೊಂದಿದ್ದ ಅವಿನಾಶ್ ಬಡ ರೈತ ಕುಟುಂಬದಲ್ಲಿ ಜನಿಸಿದರೂ ಕ್ರೀಡೆಯತ್ತ ಹೆಚ್ಚು ಒಲವು ಬೆಳಸಿ ಕೊಂಡು ಹೋಬಳಿ, ತಾಲ್ಲೂಕು, ಜಿಲ್ಲಾ, ರಾಜ್ಯ, ರಾಷ್ಟ್ರ ಮಟ್ಟದಲ್ಲೂ ಭಾಗವಹಿಸಿ ಸಾಕಾಷ್ಟು ಪ್ರಶಸ್ತಿಗಳು, ಚಿನ್ನ, ಬೆಳ್ಳಿ ಪದಕಗಳನ್ನು ಗಳಿಸಿದ್ದಾನೆ. ಯಾವುದೇ ಸ್ಪರ್ಧೆಯಲ್ಲೂ ಸೋಲನ್ನು ಕಂಡಿಲ್ಲದ ಗ್ರಾಮೀಣ ಪ್ರತಿಭೆ ಅವಿನಾಶ್ ಎಂದರೆ ತಪ್ಪಾಗಲಾರದು.

ಚಿತ್ರದುರ್ಗ, ತುಮಕೂರು, ಮಂಡ್ಯ, ಕೊಪ್ಪಳ, ಯಾದಗಿರಿ, ಬೆಂಗಳೂರು, ಬೆಳಗಾವಿ, ಶಿವಮೊಗ್ಗ, ಬೀದರ, ಪಂಜಾಬ್, ಮಧ್ಯಪ್ರದೇಶ, ತ್ರಿವೇಂಡ್ರಂ, ದೆಹಲಿ ಮುಂತಾದ ಸ್ಥಳಗಳಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ತಮ ಸಾಧನೆಯನ್ನು ಮಾಡುತ್ತಾ ಆಗಸ್ಟ್ 01 ರಿಂದ ಸೆಪ್ಟಂಬರ್ 30, 2012ರ ವರೆಗೆ ಉತ್ತರ ಪ್ರದೇಶ (ಯು.ಪಿ.) ರಾಜಧಾನಿ ಲಕ್ನೋದಲ್ಲಿ ಅಂತರರಾಷ್ಟ್ರೀಯ ಮಟ್ಟದ ತರಬೇತಿಯಲ್ಲಿ ಭಾಗವಹಿಸುತ್ತಿದ್ದಾರೆ.

ಬೆಳಗಾವಿಯ ಕ್ರೀಡಾ ವಸತಿ ನಿಲಯದಲ್ಲಿ ಪ್ರತಿ ನಿತ್ಯವೂ ಅಭ್ಯಾಸ ಮಾಡುತ್ತಿರುವ ಅವಿನಾಶ್‌ಗೆ ಯುವಜನ ಸೇವಾ & ಕ್ರೀಡಾ ಇಲಾಖೆ ಹಾಗೂ ಸರ್ಕಾರದ ವತಿಯಿಂದ ಸಲಹೆ, ಸಹಕಾರ, ಸಹಾಯ ಸಿಕ್ಕರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮರ್ಥ ಜೂಡೋ ಪಟುವಾಗಿ ಕರ್ನಾಟಕದ ಗ್ರಾಮೀಣ ಯುವಕ ಇಡೀ ದೇಶದ ಗಮನ ಸೆಳೆಯಲಿ ಎಂಬುದು ನಮ್ಮೆಲ್ಲರ ಬಯಕೆ .. ಹಾಗಾಗಲಿ ಎಂದು ಹಾರೈಸೋಣ.

ಕೆ. ಹನುಮೇಗೌಡ

ಅಪರಾಧಿಗಳು ಅಪರಾಧಗಳನ್ನು ತಡೆಯ ಬಲ್ಲರೇ?

ಪುಟ 3 ರಿಂದ

ನಂಬಿಕೆ ದ್ರೋಹ, ವಂಚನೆ, ಅತ್ಯಾಚಾರ, ವರದಕ್ಷಿಣೆ ಸಾವು, ಕೌಟಂಬಿಕ ಹಿಂಸೆ, ಲೈಂಗಿಕ ದಬ್ಬಾಳಿಕೆ, ವೇಶ್ಯಾವಾಟಿಕೆ, ಆತ್ಮಹತ್ಯೆ, ಭ್ರೂಣಹತ್ಯೆ ಹೀಗೆ ಪಟ್ಟಿ ಇನ್ನಷ್ಟು ಬೆಳೆದಿದೆ. ಇಂತಹ ಅಪರಾಧಗಳ ಹೆಚ್ಚಳದ ಬಗ್ಗೆ ಪ್ರಶ್ನಿಸಿದರೆ ಉನ್ನತ ಪೊಲೀಸ್ ಅಧಿಕಾರಿಗಳು ಕೊಡುವ ಉತ್ತರವೇ ಬೇರೆ. ಬೆಂಗಳೂರಿನ ಜನ ದೂರು ನೀಡುವುದರಲ್ಲಿ (ಅದನ್ನು ಪಡೆದು ದಾಖಲಿಸುವಲ್ಲಿಯೂ ಅಂತಾ) 'ಉದಾರಿಗಳು'! ಇದರಲ್ಲಿ ಕಳೆದು ಹೋದ ಮೊಬೈಲ್ ಪ್ರಕರಣಗಳು ಇವೆ ಎನ್ನುತ್ತಾರೆ.

ಅಪರಾಧಗಳ ಉದಾರೀಕರಣ!

ಆದರೆ ನಿರಾಕರಿಸಲಾಗದ ಸತ್ಯಗಳು ಇದ್ದೇ ಇವೆ. ಉದಾರೀಕರಣದ ನೀತಿಗಳ ಜಾರಿ ಆರಂಭಗೊಂಡ ಈ ಎರಡು ದಶಕಗಳಲ್ಲಿ ಅಪರಾಧಗಳು ಹೆಚ್ಚಿರುವುದನ್ನು ಅಲ್ಲೆಗಳೆಯಲು ಅಸಾಧ್ಯ. ಬಂಡವಾಳ, ಅಕ್ರಮಗಳು ಮತ್ತು ಅಪರಾಧಗಳು ಒಂದರ ಜೊತೆ ಒಂದಾಗಿ ಹೆಣೆದುಕೊಂಡೇ ಬಂದಿವೆ, ಬೆಳೆದಿವೆ. ಕಳೆದ ಏಳು ವರುಷಗಳಲ್ಲಿ ಬೆಂಗಳೂರು ವಿದೇಶಿ-ಸ್ವದೇಶಿ ಬಂಡವಾಳ ಹೂಡಿಕೆದಾರರು, ಹಲವು ಕಂಪನಿಗಳ ವ್ಯವಹಾರ ವಹಿವಾಟುಗಳಿಗೆ ಈ ಮಹಾ ನಗರ ಇನ್ನಷ್ಟು ತೆರೆದುಕೊಂಡಿದೆ. ಮಿಗಿಲಾಗಿ ರಿಯಲ್ ಎಸ್ಟೇಟ್ ದಂಧೆಯಿಂದಾಗಿ ಎಗ್ಗಿಲ್ಲದ ಭೂಗಳ್ಳತನ, ನೈಸರ್ಗಿಕ ಸಂಪನ್ಮೂಲಗಳ ಮನಸೋ ಇಚ್ಛೆ ಲೂಟಿ ತಾರಕಕ್ಕೆ ಏರಿದ ಅವಧಿಯೂ ಇದು ಹೌದು. ಬಹುತೇಕ ಅಪರಾಧಗಳು ಇದರ ಸುತ್ತಲೇ ಹೆಣೆದುಕೊಂಡಿವೆ ಮತ್ತು ಇಂತಹ ಉದಾರೀಕರಣ ಜಾಗತೀಕರಣ ಪ್ರಕ್ರಿಯೆಗಳು ಹುಟ್ಟು ಹಾಕುತ್ತಿರುವ ಸಾಂಸ್ಕೃತಿಕ ಸಾಮಾಜಿಕ, ರಾಜಕೀಯ ಮೌಲ್ಯಗಳು, ಉಂಟು ಮಾಡಿರುವ ಬಿಕ್ಕಟ್ಟುಗಳ ಅನಾಹುತಕಾರೀ ಪರಿಣಾಮಗಳೂ ಇಲ್ಲಿವೆ. ಇದಕ್ಕೆ ಇಡೀ ವ್ಯವಸ್ಥೆಯ ಬೆಂಬಲವಿದೆ. ಇವುಗಳನ್ನು ಅನುಸರಿಸಿ ಬದಲಾಗುತ್ತಿರುವ ಜೀವನ ಕ್ರಮ, ಶಿಥಿಲಗೊಳ್ಳುತ್ತಿರುವ ಕೌಟುಂಬಿಕ ಸಂಬಂಧಗಳು ತನ್ನದೇ ಗತಿ ಅವನತಿ ಪಡೆದಿವೆ.

ಇಲ್ಲಿ ಯಾರೊಳಗೆ ಯಾರೋ!

ಇತ್ತೀಚೆಗಿನ ಕೆಲವು ಘಟನೆಗಳನ್ನು ಗಮನಿಸಿದಾಗ ಬೆಂಗಳೂರಿನಲ್ಲಿ ಹೆಚ್ಚಾದ ಭೂ ಬೇಡಿಕೆ, ಅದಕ್ಕಾಗಿ ಭೂ ಮಾಫಿಯಾಗಳ ನಡುವಿನ ಸ್ಪರ್ಧೆ, ರಾಜಕೀಯ ಜಿದ್ದಾ ಜಿದ್ದಿ, ಕಗ್ಗೊಲೆಗಳಲ್ಲಿಯೂ ಪರ್ಯಾವಸಾನಗೊಂಡಿವೆ ಮತ್ತು ಸೇಡು ತೀರಿಸಿಕೊಳ್ಳುವ ಸರಣಿಯನ್ನು ಹಿಗ್ಗಿಸಿದೆ. ಇದರಲ್ಲಿ ದಂಧೆಗಾರರಲ್ಲದೇ ಭೂಗತ ಮಾಫಿಯಾಗಳು, ಅವರ ಸುಪರ್ದಿಯಲ್ಲಿನ ಕ್ರಿಮಿನಲ್ ಗ್ಯಾಂಗ್‌ಗಳು, ಇದನ್ನು ಬೆಂಬಲಿಸುವ ಆಡಳಿತ, ಶಾಮೀಲಾಗುವ ಅಧಿಕಾರಿಗಳು, ಹಲವು ರಾಜಕೀಯ ನಾಯಕರು ಪ್ರಮುಖರಿದ್ದಾರೆ. ಈಗ ಅಧಿಕಾರದಲ್ಲಿರುವ ಬಿಜೆಪಿ ಸರಕಾರವೇ ಭೂ ಹಾಗೂ ಗಣಿ ಮಾಫಿಯಾಗಳದ್ದಾಗಿದೆ. ಇವರು ಎಸಗಿರುವ ಅಪರಾಧಗಳು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಅಂತಹವರು ಜೈಲು ಸೇರುತ್ತಿರುವುದೇ ಇದಕ್ಕೆ ಸಾಕ್ಷಿ. ಬೆಂಗಳೂರಿನಲ್ಲಿ ಕ್ರೈಮಿನ ಹೆಚ್ಚಳದ ಕಾರಣಗಳಲ್ಲಿ ಒಂದೋ ಅಪರಾಧಿಗಳ ಮೇಲೆ ಮೊಕದ್ದಮೆ ದಾಖಲಾಗದಂತೆ, ದಾಖಲಾದರೂ ಶಿಕ್ಷೆಗೆ ಒಳಗಾಗದಂತೆ ತಪ್ಪಿಸುವ ಹಸ್ತಕ್ಷೇಪಗಳ ಕಾರಣಗಳಿವೆ.

ಅಲ್ಲದೆ ಎಲ್ಲಾ ಹಂತಗಳಲ್ಲಿ ಲಂಚ, ಸರ್ವ ಭ್ರಷ್ಟತೆ ಮಿತಿಮೀರಿದೆ. ವಿಶೇಷವಾಗಿ ಬೆಂಗಳೂರಿನ(ಬಹುತೇಕ ಇತರೆಡೆಯೂ) ಪೊಲೀಸ್ ಠಾಣೆಗಳಿಗೆ ಅಧಿಕಾರಿಗಳ ನೇಮಕವಾಗುವುದು ದಕ್ಷತೆ, ಸಾಮರ್ಥ್ಯದ ಆಧಾರದಲ್ಲಿ ಅಲ್ಲ. ಬದಲಾಗಿ ಆಯ ಕಟ್ಟಿನ ಜಾಗಕ್ಕೆ ವರ್ಗಾವಣೆಗೆ ಕೊಡಬೇಕಾದ ಲಂಚದ ಪ್ರಮಾಣ, ಆಜ್ಞಾನುವರ್ತಿಯೇ ಮಾನದಂಡವಾಗಿದೆ. ಮೆಜೆಸ್ಟಿಕ್ನಂತಹ ಪ್ರದೇಶದ ಠಾಣೆಗೆ ಎಸ್.ಐ. ಆಗಿ ವರ್ಗವಾಗಬೇಕಾದರೆ ಕನಿಷ್ಟ 25+ ಲಕ್ಷ ರೂ.ಗಳನ್ನು ನೀಡಬೇಕೆಂದು ಇತ್ತೀಚೆಗೆ ಆಧಿಕಾರಿಯೊಬ್ಬರು ಹೇಳುತ್ತಿದ್ದರು. ಅದೂ ಸೀಮಿತ ಅವಧಿಗೆ ಮಾತ್ರ ಅಲ್ಲಿದ್ದು ನಂತರ ಹರಾಜು ಕೂಗಬೇಕು ಇಲ್ಲವೇ ಬೇರೊಬ್ಬರಿಗೆ ಜಾಗ ಖಾಲಿ ಮಾಡಿ ಕೊಡಬೇಕು. ಹೀಗಾದಲ್ಲಿ ದಕ್ಷತೆ, ಕಾನೂನು ಪಾಲನೆ ಸಾಧ್ಯವಾಗುವುದಾರೂ ಹೇಗೆ?

ಹೀಗಾಗಿ ವರ್ಗಾವಣೆಗಳು ಸತತವಾಗಿ ನಡೆಯುತ್ತಲೇ ಇರುತ್ತವೆ. ಈಗಲೂ ಸುಮಾರು 300 ರಷ್ಟು ಪೊಲೀಸ್ ಅಧಿಕಾರಿಗಳ ಸಾಮೂಹಿಕ ವರ್ಗವಾಯಿತು. ಒಬ್ಬೊಬ್ಬ ಮುಖ್ಯಮಂತ್ರಿ ಬದಲಾದಾಗಲೂ, ಬೇಕೆನಿಸಿದಾಗಲೂ ಇದು ಪುನರಾವರ್ತನೆಯಗುತ್ತದೆ. ಇವೆಲ್ಲವುಗಳಿಂದಾಗಿ ಬೆಂಗಳೂರಿನಲ್ಲಿರುವ ಶೇ.40 ರಷ್ಟು ಠಾಣಾ ಅಧಿಕಾರಿಗಳಿಗೆ ವೃತ್ತಿ ನಿರತ ಕ್ರಿಮಿನಲ್‌ಗಳ ಆಳ ಅಗಲ ಗೊತ್ತಿರುವುದಿಲ್ಲ. ಗೊತ್ತಿರುವವರು ಬಹಳ ದಿನ ಅಲ್ಲಿರುವುದಿಲ್ಲ. ಹೀಗಿರುವಾಗ ಅಪರಾಧಗಳನ್ನು ನಿಭಾಯಿಸುವುದಾಗಲೀ, ನಿಯಂತ್ರಿಸುವುದಾಗಲೀ ಹೇಗೆ ಸಾಧ್ಯವೆಂದು ಉನ್ನತ ಅದಿಕಾರಿಗಳು ನುಡಿಯುತ್ತಾರೆ. ಇನ್ನೂ ಒಂದು ಅಂಶವೆಂದರೆ ಬಿಜೆಪಿ ಅಧಿಕಾರಕ್ಕೆ ಬಂದ ನಂತರವಂತೂ ಮಂತ್ರಿ. ಶಾಸಕ ಬಾಲಬಡುಕರನ್ನು ಅಲ್ಲಿಗೆ ನೇಮಿಸುವುದು ಒಂದು ಕಡೆ . ಅದರೆ ಆರೆಸ್ಸೆಸ್ ನ ಅಜೆಂಡಾ ಜಾರಿಗೆ ಅನುಕೂಲವಿರುವವರನ್ನೂ ಗುರುತಿಸಿ ನೇಮಿಸುತ್ತಿರುವುದು, ಠಾಣೆಗಳನ್ನು ನಿಯಂತ್ರಿಸುವುದು ನಡೆದೇ ಇದೆ. ಅಲ್ಲದೇ ಸರಕಾರವೇ ಕ್ರಿಮಿನಲ್‌ಗಳನ್ನು ರಕ್ಷಿಸುತ್ತಿರುವುದು .ಮೊಕದ್ದಮೆಗಳನ್ನು ಹಿಂಪಡೆಯುವುದರಿಂದಾಗಿ ಅಂಥವರು ಎಲ್ಲಾ ಕಾನೂನುಗಳನ್ನು ಧಿಕ್ಕರಿಸುವಂತೆ ಪ್ರೇರೇಪಣೆ, ಅದರ ಪಾಲನೆಯ ನಿರ್ದೇಶನವನ್ನೂ ರೂಡಿಗೊಳಿಸಲಾಗುತ್ತಿದೆ.

ಸಿಬ್ಬಂದಿ ಇಲ್ಲಾರೀ

ಇದರೊಟ್ಟಿಗೆ ಪರಿಣಾಮಕಾರೀ ನಿರ್ವಹಣೆಗೆ ಆಡಳಿತಾತ್ಮಕ ಮಿತಿಗಳಿರುವುದನ್ನು ಗುರುತಿಸಬೇಕು. ಅದೆಂದರೆ ಸಿಬ್ಬಂದಿಯ ಕೊರತೆ. ಪೊಲೀಸ್ ಇಲಾಖೆಯಲ್ಲಿ ಈ ಕೊರತೆ ಅನುಭವಿಸುತ್ತಿರುವುದರಲ್ಲಿ ಬೆಂಗಳೂರು ಪ್ರಥಮ. ದೆಹಲಿಯಲ್ಲಿ 198 ನಾಗರೀಕರಿಗೆ ಒಬ್ಬ ಪೇದೆ ಯಂತಿದ್ದರೆ, ಮುಂಬೈ ನಲ್ಲಿ 258 ಜನರಿಗೆ ಒಬ್ಬ, ಬೆಂಗಳೂರಿನಲ್ಲಿ ಈ ಪ್ರಮಾಣ 1018 ನಾಗರೀಕರಿಗೆ ಒಬ್ಬ ಪೇದೆ ! ಇದರ ಪರಿವೆ ಗೃಹ ಮಂತ್ರಿಗಳಿಗೆ ಇಲ್ಲವೇ?. 'ಇದನ್ನು ಸರಿ ಪಡಿಸಿ ಇಲಾಖೆಯನ್ನು ಸಮರ್ಥವನ್ನಾಗಿಸ ಬೇಕಾದವರೂ ಇವರೇ ಅಲ್ಲವೇ?.

ಅಪರಾಧಿ ಕೌನ್

ಆದ್ದರಿಂದಲೇ ಈ ಎಲ್ಲವುಗಳ ಪರಿಣಾಮ ಆಡಳಿತ ಯಂತ್ರ ಕುಂಟುತ್ತಾ ಕಾರ್ಯ ನಿರ್ವಹಿಸುತ್ತದೆ. ಒಂಟಿ ಮಹಿಳೆಯರ- ವೃದ್ಧರ ಕೊಲೆಗಳು ಹಾಡು ಹಗಲಲ್ಲೇ ನಡೆಯುತ್ತಲೇ ಇವೆ. ಮನೆಗಳಿಗೆ ವಿವಿಧ ಕೆಲಸದ ಹೆಸರೇಳಿಕೊಂಡು ಬಂದು ಲೂಟಿ ಮಾಡಿ ಕೊಲೆಗೈದು ಹೋಗುವ ಪ್ರಕರಣಗಳು ಹೆಚ್ಚುತ್ತಿವೆ. ಆದರೆ ಸರಕಾರ , ಗೃಹ ಇಲಾಖೆ ಸಮಾಧಾನದಿಂದಲೇ ಇದೆ. ಅದಕ್ಕೆ ಆತಂಕ, ನಾಗರೀಕರ ಕಾಳಜಿ ಇಲ್ಲವಾಗಿದೆ. ಅಂದರೆ ಇಡೀ ಸರಕಾರ ಪೂರ್ಣ ಹೊಣೆಗೇಡಿಯಾಗಿದೆ. ಅದಕ್ಕೆ ನಾಗರೀಕರನ್ನು ಅದು ಬಲಿ ಕೊಡುತ್ತಿದೆ.

ಈ ಎಲ್ಲಾ ಸಂಗತಿಗಳನ್ನು ಗಮನಿಸು ವಾಗಲೇ ಬಹು ಮುಖ್ಯವಾಗಿ ಇದರ ಹೊಣೆಯನ್ನು ಸರಕಾರವೇ ಹೊರಬೇಕು. ಅಂದು ಹಾಗೆ ಅಪರಾಧಿಗಳೇ ಅಧಿಕಾರದಲ್ಲಿದ್ದರೆ ಅಪರಾಧ ತಡೆಯುವುದಾದರೂ ಹೇಗೆ ಹೇಳಿ? ನಾಗರೀಕರಲ್ಲಿ ಅಸಹಾಯಕತೆ, ಅರಾಜಕತೆಯ ಬೆಳವಣಿಗೆಯು ತನ್ನ ದುರಾಡಳಿತವನ್ನು ಮರೆಮಾಚುವ ಮಂಕು ಬೂದಿ ಎರಚುವಿಕೆಗೆ ಪೂರ್ವೋಪಾಧಿಯೆಂದು ಸರಕಾರ ಭಾವಿಸಿದೆಯೇ? ಹಾಗಿದ್ದರೆ ಕಾದಿದೆ ದುರಂತ! ●

ಜನೆರಿಕ್ ಔಷಧ ಎಂದರೇನು ? ಎಲ್ಲರಿಗೂ ಉಚಿತ ಜನೆರಿಕ್ ಔಷಧಿಗಳು ನೀಡಿಕೆ ಸಾಧ್ಯವೇ ?

ಡಾ॥ ಪ್ರಕಾಶ್ ಸಿ. ರಾವ್

ರಾಜ್ಯ ಸರ್ಕಾರ ಜನೆರಿಕ್ ಔಷಧಿಗಳನ್ನು ಅರ್ಧಬೆಲೆಗೆ (ಎಂ.ಆರ್.ಪಿ. ಮೇಲೆ) ಒದಗಿಸುವ ಉದ್ದೇಶ ಘೋಷಿಸಿ, ಜೂನ್ 21, 2012ರಂದು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಜನತಾ ಬಜಾರ್‌ನ ಜನೆರಿಕ್ ಔಷಧಿ ಅಂಗಡಿಯನ್ನು ತೆರೆದಿದೆ. ವೈದ್ಯಕೀಯ ಶಿಕ್ಷಣ ಮಂತ್ರಿಗಳಾದ ಎಸ್.ಎ. ರಾಮ್‌ದಾಸ್ ಅವರು ಈ ಮಳಿಗೆಯನ್ನು ಉದ್ಘಾಟಿಸುತ್ತ ಈ ತರಹದ ಮಳಿಗೆಯನ್ನು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಪ್ರಾರಂಭಿಸುವುದಾಗಿ ಹೇಳಿಕೆ ನೀಡಿದ್ದಾರೆ. ಅಷ್ಟೇ ವಿಶೇಷವಾದ ಇನ್ನೊಂದು ಸುದ್ದಿ ವರದಿಯಾಗಿದೆ: "ಅಕ್ಟೋಬರ್ 2012ರಲ್ಲಿ ಎಲ್ಲರಿಗೂ ಉಚಿತ ಔಷಧಿ" ಎಂಬುದೇ ಆ ಸುದ್ದಿಯ ತಲೆ ಬರಹ. ಆ ಹೊತ್ತಿಗೆ ಕೇಂದ್ರ ಸರ್ಕಾರ ಎಲ್ಲರಿಗೂ ಉಚಿತ ಔಷಧಿ ದೊರಕಿಸಿಕೊಡುವುದರ ಬಗ್ಗೆ ನೀತಿ ರೂಪಿಸಿದೆಯಂತೆ. ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವವರಿಗೆ ಉಚಿತ ಜನೆರಿಕ್ ಔಷಧಿಗಳನ್ನು ಕೊಡಲಾಗುವುದಂತೆ. ಈ ವ್ಯವಸ್ಥೆ ಅಕ್ಟೋಬರ್ 2012ರ ವೇಳೆಗೆ ಜಾರಿಗೆ ಬರುತ್ತದೆಯಂತೆ. ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್ ಅವರೂ ಈ ಯೋಜನೆಗೆ ಪ್ರೋತ್ಸಾಹ ನೀಡಿದ್ದಾರೆ ಎಂದು ವರದಿಯಾಗಿದೆ.

ಮೇ 27, 2012ರಂದು ನಟ ಅಮೀರ್‌ಖಾನ್ ಅವರು ದೂರದರ್ಶನದ "ಸತ್ಯಮೇವ ಜಯತೆ" ಎಂಬ ಕಾರ್ಯಕ್ರಮದಲ್ಲಿ ಭಾರತದ ಬಡ ಜನರಿಗೆ ಉಚಿತ ಔಷಧಿಗಳು ಲಭ್ಯವಾಗಬೇಕು ಹಾಗೂ ಅದು ಸಾಧ್ಯವಾಗಲು ಜನೆರಿಕ್ ಔಷಧಿಗಳು ಜನರಿಗೆ ದೊರಕಬೇಕು ಎಂದು ಪ್ರತಿಪಾದಿಸಿದ್ದರು. ಖಾನ್ ಅವರನ್ನು ಸಂಸತ್ತಿನ ತಜ್ಞರ ಸಮಿತಿ ಆಹ್ವಾನಿಸಿ ಅವರೊಂದಿಗೆ ಚರ್ಚಿಸಿದೆ. ಕೇಂದ್ರ ಆರೋಗ್ಯ ಮಂತ್ರಿ ಗುಲಾಬ್ ನಭಿ ಆಜ಼ಾದ್ ಅವರೂ ಜನೆರಿಕ್ ಔಷಧಿಗಳನ್ನು ನೀಡುವುದಾಗಿ ಹೇಳಿದ್ದಾರೆ.


ಇದರರ್ಥ ಯಾರೇ ಸರ್ಕಾರೀ ಆರೋಗ್ಯ ಕೇಂದ್ರಕ್ಕೆ ಹೋದರೂ ಅವರಿಗೆ ಉಚಿತ ಜನೆರಿಕ್ ಔಷಧಿ ದೊರಕುತ್ತದೆ ಎಂದಾಗುತ್ತದೆ. ಇದು ಸಾಧ್ಯವೇ ಎಂಬುದು ಯಕ್ಷ ಪ್ರಶ್ನೆ. ಆದರೆ ಈ ಮಾತು ಖಾಸಗಿ ಕ್ಷೇತ್ರಕ್ಕೆ ಅನ್ವಯಿಸುವ ಈಗ ಚರ್ಚೆಯಲ್ಲಿಲ್ಲ. (ಮುಂದಿನ ಹಂತದಲ್ಲಿ ಇದನ್ನು ಖಾಸಗಿ ಕ್ಷೇತ್ರಕ್ಕೆ ಸಹ ವಿಸ್ತರಿಸಲು ಒತ್ತಾಯಿಸಬೇಕು. ಏಕೆಂದರೆ ವೈದ್ಯಕೀಯ ರಂಗದಲ್ಲಿ ಖಾಸಗಿ ಕ್ಷೇತ್ರದ ವ್ಯಾಪ್ತಿ ಹೆಚ್ಚಾಗಿದೆ.)

ಆರೋಗ್ಯ ಮತ್ತು ಸರ್ಕಾರದ ಕಾಳಜಿ

ಭಾರತ ಸರಕಾರ ಸುಮಾರು 1.2% ಜಿ.ಡಿ.ಪಿ. ಯಷ್ಟು (ಒಟ್ಟು ಆಂತರಿಕ ಉತ್ಪನ್ನ) ಹಣವನ್ನು (1.2 ಬಿಲಿಯನ್ ರೂ.) ಜನರ ಆರೋಗ್ಯಕ್ಕೆ ಖರ್ಚು ಮಾಡುತ್ತದೆ. ಇತರೇ ದೇಶಗಳಿಗೆ ಹೋಲಿಸಿದರೆ, ಭಾರತ ಆರೋಗ್ಯಕ್ಕೆ ಖರ್ಚು ಮಾಡುತ್ತಿರುವುದು ಕಡಿಮೆ. ಯೋಜನಾ ಆಯೋಗ 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಆರೋಗ್ಯಕ್ಕೆ 28,560 ಕೋಟಿ ರೂಪಾಯಿ ಮಂಜೂರು ಮಾಡಿದೆ ಹಾಗೂ ಅದರಲ್ಲಿ ಉಚಿತ ಔಷಧಿಗೆ ಈಗಾಗಲೇ 100 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದೆ !! " 2017ರ ಹೊತ್ತಿಗೆ ಆರೋಗ್ಯಕ್ಕೆ ಸರ್ಕಾರ ಖರ್ಚುಮಾಡುವ ಹಣಕಾಸು 22% (2012) ರಿಂದ 52% (2017) ಏರಲಿದೆ. ಈ ಔಷಧಿಗಳು ಸರ್ಕಾರದ 1.6 ಲಕ್ಷ ಉಪಕೇಂದ್ರಗಳಲ್ಲಿ, 23,000 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, 5,000 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಹಾಗೂ 640 ಜಿಲ್ಲಾ ಆಸ್ಪತ್ರೆಗಳಲ್ಲಿ ಲಭ್ಯವಾಗುತ್ತವೆ" ಎಂದು ಹೇಳಲಾಗಿದೆ.

ಜನೆರಿಕ್ ಔಷಧಿಗಳು ಎಂದರೇನು ? ಯಾವುವು?

ಔಷಧಿ ಪೇಟೆಂಟ್ ಹಿಡಿತದಿಂದ ಹೊರಬಂದ ಅಥವಾ ಔಷಧಿಯ ಜನೆರಿಕ್ ಹೆಸರಿನಲ್ಲಿ ದೊರಕುವ ಔಷಧಿಗೆ ಜನೆರಿಕ್ ಔಷಧಿಗಳು ಎನ್ನುವರು. ಜನೆರಿಕ್ ಹೆಸರು ಎಂದರೆ ಇದು ಔಷಧಿಯ ಮುಖ್ಯ ಘಟಕದ ಹೆಸರು. ನಾವು ಉಪಯೋಗಿಸುವ ಸುಮಾರು ಎಲ್ಲ ಔಷಧಿಗಳು ಜನೆರಿಕ್ ಔಷಧಿಗಳು, ಆದರೆ ಬ್ರಾಂಡ್ ಹೆಸರಿನಲ್ಲಿರುವ ಜನೆರಿಕ್‌ಗಳು. (ಉದಾಹರಣೆಗೆ ಇಲ್ಲಿ ಔಷಧಿ ಎಂದರೆ ಕೊಬ್ಬರಿ ಎಣ್ಣೆ ಎಂದು ಕೊಳ್ಳೋಣ. ಕೊಬ್ಬರಿ ಎಣ್ಣೆ ಜನೆರಿಕ್ ಔಷಧದಂತೆ. ಪ್ಯಾರಾಚೂಟ್, ನವರತ್ನ, ಕೆ.ಎಲ್.ಎಫ್... ಮುಂತಾದವು ಕೊಬ್ಬರಿ ಎಣ್ಣೆ ತಯಾರಿಸಿ ಮಾರುವ ಬೇರೆ ಬೇರೆ ಬ್ರಾಂಡ್ ಕಂಪನಿಗಳು. ಅವು ಬ್ರಾಂಡೆಡ್ ಔಷಧಿಗಳಂತೆ.)



ಜನೆರಿಕ್ ಔಷಧಿಗಳು ಮಾರುಕಟ್ಟೆಯಲ್ಲಿ ಸುಲಭವಾಗಿ ದೊರಕುವುದಿಲ್ಲ. ನಮಗೆ ಗೊತ್ತಿರುವ ಕೆಲವು ಔಷಧಿಗಳಾದ ಬ್ರೂಫೆನ್, ನೈಸ್, ಬರಾಲ್ಗನ್‌ಗಳು ಬ್ರಾಂಡ್ ಔಷಧಿಗಳು, ಸುಲಭವಾಗಿ ದೊರಕುತ್ತವೆ. ಮಾರುಕಟ್ಟೆಯ ಔಷಧಿ ಅಂಗಡಿಗಳಲ್ಲಿ ದೊರಕುವ ಹೆಚ್ಚಿನ ಔಷಧಿಗಳು ಬ್ರಾಂಡ್ ಔಷಧಿಗಳು. ಜನೆರಿಕ್ ಔಷಧಿಯು ಕೆಲವೇ ಅಂಗಡಿಗಳಲ್ಲಿ ದೊರಕುತ್ತವೆ. ಅವು ಔಷಧಿಗಳನ್ನು ವೈದ್ಯರಿಗೆ ಮಾತ್ರ ಸರಬರಾಜು ಮಾಡುತ್ತವೆ. ವೈದ್ಯರು ಅದನ್ನು ರೋಗಿಗಳಿಗೆ ಕೊಟ್ಟು ಲಾಭಮಾಡುತ್ತಾರೆ. ಇನ್ನು ಕೆಲವರು ಉಚಿತವಾಗಿ ಕೊಡುತ್ತಾರೆ.

ಅನಗತ್ಯ ಗೊಂದಲ ಗೋಜುಗಳು

ಮಾರುಕಟ್ಟೆಯಲ್ಲಿ ಸುಮಾರು 80,000 ಬ್ರಾಂಡ್ ಔಷಧಿಗಳು ದೊರಕುತ್ತವೆ. ಈ ಬ್ರಾಂಡ್ ಔಷಧಿಗಳಲ್ಲಿ ಜನೆರಿಕ್ ಔಷಧಿಯೇ ಇರುತ್ತದೆ. ಉದಾ: ಪೆರಿಸಿಟಮಾಲ್. ಆದರೆ ಔಷಧಿ ಕಂಪನಿಯವರು ಬ್ರಾಂಡಿಗೆ ತಮ್ಮ ಹೆಸರನ್ನು ಇಡುತ್ತಾರೆ. ಉದಾ: ಕ್ರೋಸಿನ್, ಕಾಲ್ಪಾಲ್. ಆದರೆ ಈ ಬ್ರಾಂಡ್ ಔಷಧಿಗಳು ದುಬಾರಿ. ಈ ಬ್ರಾಂಡ್‌ಗಳನ್ನು ಜನಪ್ರಿಯಗೊಳಿಸಲು ಔಷಧಿ ಕಂಪನಿಗಳು ವೈದ್ಯರಿಗೆ, ಹೋಲ್‌ಸೇಲ್ ಡೀಲರ್‌ಗಳಿಗೆ ಹಾಗೂ ರೀಟೇಲ್ ಡೀಲರ್ಸ್‌ಗಳಿಗೆ ಕಮೀಷನ್, ಗಿಫ್ಟ್ ಹಾಗೂ ಸ್ಯಾಂಪಲ್ಸ್ ಕೊಡುತ್ತವೆ. ಜಾಹಿರಾತಿನ ಮೇಲೂ ಖರ್ಚು ಮಾಡುತ್ತವೆ. ಆದರೆ ಈ ಔಷಧಿಗಳು ದುಬಾರಿಯಾಗಲು ಔಷಧಿ ಸಂಶೋಧನೆಗೆ ವಿಪರೀತ ಖರ್ಚಾಗಿದೆ ಎಂದು ಕೆಲವು ಬಾರಿ ಸುಳ್ಳು ಹೇಳುತ್ತವೆ.

ಔಷಧಿ ಒಂದೇ ನೂರಾರು ಬ್ರಾಂಡ್

ಒಂದು ಔಷಧಿಗೆ ಒಂದು ರಾಸಾಯನಿಕ ಹಾಗೂ ಒಂದು ಜನೆರಿಕ್ ಹೆಸರಿದ್ದರೆ, ನೂರಾರು ಬ್ರಾಂಡ್ ಹೆಸರುಗಳಿರುತ್ತವೆ. ಜನಸಾಮಾನ್ಯರು ಸಾಮಾನ್ಯವಾಗಿ ಬ್ರಾಂಡ್ ಹೆಸರನ್ನು ಗುರುತಿಸುತ್ತಾರೆ. ಅದಕ್ಕೆ ಕಾರಣ ಬ್ರಾಂಡ್ ಹೆಸರನ್ನು ಔಷಧಿ ಕಟ್ಟಿನಮೇಲೆ ದೊಡ್ಡಕ್ಷರದಲ್ಲಿ ಬರೆದಿರುತ್ತಾರೆ ಹಾಗೂ ಜನೆರಿಕ್ ಹೆಸರನ್ನು ಸಣ್ಣಕ್ಷರದಲ್ಲಿ ಬರೆದಿರುತ್ತಾರೆ. ಜನೆರಿಕ್ ಹೆಸರನ್ನು ಗುರುತಿಸುವುದು ಒಳ್ಳೆಯದು. ಉದಾ: ನಾನು ಐಬೂಪ್ರೊಫೆನ್ ಉಪಯೋಗಿಸುತ್ತಿದ್ದೇನೆ ಎಂದರೆ ಎಲ್ಲರಿಗೂ ಅರ್ಥವಾಗುತ್ತದೆ. ನಾನು ಐಬೂಜೆಸಿಕ್ ಉಪಯೋಗಿಸುತ್ತಿದ್ದೇನೆ ಎಂದರೆ ಅನೇಕ ವೈದ್ಯರಿಗೂ ಗೊತ್ತಾಗುವುದಿಲ್ಲ. (ಸ್ನಾನಕ್ಕೆ ಸೋಪು ಬಳಸುತ್ತೇನೆ ಎನ್ನುವುದೇ ಬೇರೆ. ಲಕ್ಸ್ ಸೋಪು ಬಳಸುತ್ತೇನೆ ಎನ್ನುವುದೇ ಬೇರೆ.) ಹಲವಾರು ಬಾರಿ ನೀವು ವೈದ್ಯರಲ್ಲಿ ಹೋದಾಗ ಯಾವ ಔಷಧಿ ಉಪಯೋಗಿಸುತ್ತೀರಿ ಎಂದು ಅವರಿಗೆ ಹೇಳಬೇಕಾಗುತ್ತದೆ. ಆದ್ದರಿಂದ ಜನೆರಿಕ್ ಔಷಧಿಯನ್ನು ಗುರುತಿಟ್ಟುಕೊಳ್ಳಿ.

ಪೇಟೆಂಟ್ ಪ್ರಶ್ನೆ

ಔಷಧಿಗಳು ರಾಸಾಯನ ವಸ್ತುಗಳು. ಒಂದು ರಾಸಾಯನ ವಸ್ತುವಿನ ಔಷಧಿಗುಣಗಳು ಸಾಬೀತಾದ ಮೇಲೆ ಆ ರಾಸಾಯನಿಕ ವಸ್ತುವನ್ನು ಉಪಯೋಗಿಸಿ ಔಷಧಿಯನ್ನು ತಯಾರಿಸಿ ಮಾರುಕಟ್ಟೆಗೆ ತರುತ್ತಾರೆ. ಆ ಔಷಧಿಯನ್ನು ಕಂಡುಹಿಡಿದ ವಿಜ್ಞಾನಿಗೆ ಅವನ ಸಂಶೋಧನೆಗೆ ಮಾನ್ಯತೆ ನೀಡಲು, ಪೇಟೆಂಟ್ ನೀಡುವ ವ್ಯವಸ್ಥೆ ಮಾಡಿರುತ್ತಾರೆ. ಪೇಟೆಂಟ್ ಪಡೆದ ಔಷಧಿಯನ್ನು ಬೇರೆ ಯಾರೂ ತಯಾರಿಸಲು ಪರವಾನಗಿ ಇರುವುದಿಲ್ಲ. ಭಾರತದಲ್ಲಿ 7 ವರ್ಷದ ನಂತರ (ಈಗ 20 ವರ್ಷ!) ಪೇಟೆಂಟ್ ಹಕ್ಕು ತಂತಾನೆ ನಿಂತು ಹೋಗುತ್ತಿತ್ತು. ಹಾಗೂ ಆ ಔಷಧಿಯನ್ನು ಬೇರೆ ಯಾರು ಬೇಕಾದರೂ ತಯಾರಿಸಬಹುದಾಗಿತ್ತು. ಅನೇಕ ಬಾರಿ ಮೊದಲು ತಯಾರಿಸಿದ ಔಷಧಿ ಕಂಪನಿಯೇ ಬ್ರಾಂಡ್ ಬದಲು ಜನೆರಿಕ್ ಔಷಧಿ ತಯಾರಿಸಬಹುದು.

ಜನೆರಿಕ್ ಔಷಧಿಗಳ ಬೆಲೆ ಬ್ರ್ಯಾಂಡ್ ಔಷಧಿ ಬೆಲೆಗಳಿಗಿಂತ 80 ರಿಂದ 85% ಕಡಿಮೆಯಾಗುತ್ತದೆ. ಈಗಿನ ದಿನಗಳಲ್ಲಿ ಕೆಲವು ಅಪಾಯಕರ ಸನ್ನಿವೇಶದ ಚಿಕಿತ್ಸೆಯಲ್ಲಿ ಔಷಧಿಯ ಬೆಲೆಯೇ ಹೆಚ್ಚಾಗುತ್ತದೆ. ಆದ್ದರಿಂದ ಬ್ರಾಂಡ್ ಔಷಧಿಗಿಂತ ಜನೆರಿಕ್ ಔಷಧಿಯೇ ಸೂಕ್ತ.

ಅಮೆರಿಕ ಹಾಗೂ ಇತರೇ ದೇಶಗಳಲ್ಲಿ ಪೇಟೆಂಟ್ ಹಕ್ಕು 20 ವರ್ಷ. ಇದು ಸಂಶೋಧಕನಿಗೆ ಏಕಸ್ವಾಮ್ಯ ದೊರಕಿಸಿಕೊಡುತ್ತದೆ. ಅವನು ಔಷಧಿಗೆ ಎಷ್ಟು ಬೇಕಷ್ಟು ಬೆಲೆ ಇಡಬಹುದು. ಆ ಔಷಧಿ ದುಬಾರಿಯಾಗಿರುವುದರಿಂದ ಆ ಔಷಧಿ ಅಗತ್ಯವಿರುವವರು . ಅದನ್ನು ಪಡೆದುಕೊಳ್ಳಲಾಗದೇ ಔಷಧಿಯಿಂದ ವಂಚಿತರಾಗುತ್ತಾರೆ. ಆದ್ದರಿಂದ ಭಾರತದಲ್ಲಿ ಜನಸಾಮಾನ್ಯರ ಬಡವರ ಹಿತದೃಷ್ಟಿ ಗಮನದಲ್ಲಿಟ್ಟು, ಪೇಟೆಂಟ್ ಅವಧಿಯನ್ನು ಏಳು ವರ್ಷ ಮಾಡಲಾಗಿತ್ತು. ಅದು ಸಾಧ್ಯವಾಗಿದ್ದು 'ಪೇಟೆಂಟ್ ಕಾನೂನು–1970'ನಿಂದ . ಆದರೆ 2005ರಿಂದ ಆ ಕಾನೂನಿಗೆ ತಿದ್ದುಪಡಿ ತಂದು ಪೇಟೆಂಟ್ ಅವಧಿ 20 ವರ್ಷ ಮಾಡಲಾಗಿದೆ. ಇದಕ್ಕೆ ಕಾರಣ ಭಾರತದ ಮೇಲೆ ಬಹುರಾಷ್ಟ್ರೀಯ ಕಂಪನಿಗಳ ಒತ್ತಡ!

ಔಷಧಿ ಸಂಶೋಧನೆ ಮಾಡಿ ತಯಾರಿಕೆ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ಸಾಕಷ್ಟು ವೆಚ್ಚ ತಗುಲಲಿದೆ. ಆದ್ದರಿಂದ ಈಗಿನ ದಿನಗಳಲ್ಲಿ ಒಬ್ಬ ವ್ಯಕ್ತ (ಸಂಶೋಧಕ) ಔಷಧಿ ಕಂಡುಹಿಡಿದು ಮಾರುಕಟ್ಟೆಗೆ ತರಲು ಸಾಧ್ಯವಿಲ್ಲ. ಅದರ ಬದಲು ಔಷಧಿ ಕಂಪನಿಗಳು ಅಪಾರ ಹಣ ಹೂಡಿ (ಒಂದು ಔಷಧಿಗೆ ಸುಮಾರು 1,000 ಕೋಟಿ, ಕನಿಷ್ಠ) ಔಷಧಿ ತಯಾರಿಸುತ್ತವೆ. ಹಾಗೂ ಸಂಶೋಧಕನಿಂದ ಪೇಟೆಂಟ್ ಪಡೆದುಕೊಳ್ಳುತ್ತವೆ. ಆದ್ದರಿಂದ ಈ ಔಷಧಿಗಳು ದುಬಾರಿ. ಈ ಔಷಧಿಗಳನ್ನು ಬ್ರಾಂಡ್ ರೂಪದಲ್ಲಿ ಮಾರುತ್ತವೆ. ಆದರೆ ಮಾರುಕಟ್ಟೆಯಲ್ಲಿ ದೊರಕುವ ಹೆಚ್ಚಿನ ಬ್ರಾಂಡ್‌ಗಳು, ಜನೆರಿಕ್ ಔಷಧಿಯನ್ನು ಉಪಯೋಗಿಸಿ, ಬ್ರಾಂಡ್ ಹೆಸರು ಕೊಟ್ಟು ಮಾರುತ್ತವೆ. ಔಷಧಿ ಕಂಪನಿಗಳು ಅಪಾರ ಲಾಭಮಾಡಿ ಈ ಎರಡೂ ಔಷಧಿಗಳು ಅಷ್ಟೇ ಪರಿಣಾಮಕಾರಿ ಹಾಗೂ ಅದೇ ಅಡ್ಡಪರಿಣಾಮಗಳನ್ನು ಹೊಂದಿರುತ್ತವೆ. ■

ಜನೆರಿಕ್ ಔಷಧಿಗಳ ಬೆಲೆಗಳೇಕೆ ಕಡಿಮೆ?

ಜನೆರಿಕ್ ಔಷಧಿ ತಯಾರಿಸುವಾಗ ಆ ಔಷಧಿ ಸಂಶೋಧನೆಗೆ ವ್ಯಾಪಾರಸ್ಥರಿಗೆ ಕೊಡುವ ಕಮೀಶನ್, ವೈದ್ಯರಿಗೆ ಕೊಡುವ ಉಡುಗೊರೆ ಹಾಗೂ ಸ್ಯಾಂಪಲ್ ಖರ್ಚು ಇರುವುದಿಲ್ಲ. ಆದ್ದರಿಂದ ಜನೆರಿಕ್ ಔಷಧಿಗಳು / ಬ್ರಾಂಡ್ ಔಷಧಿಗಳಿಗಿಂತ ಕಡಿಮೆ ಬೆಲೆಯುಳ್ಳವು. ■

ಹೋಮ್ ಸ್ಟೇ ದಾಳಿ ವಿರೋಧಿಸಿ ಸಿಪಿಐ(ಎಂ) ಪಿಕೆಟಿಂಗ್
ಮಹಿಳೆಯರ ಮೇಲಿನ ದಾಳಿ ಸಮರ್ಥಿಸಿದ ಎಂ.ವಿ.ಕಾಮತ್‌ಗೆ ಖಂಡನೆ.



ವರದಿ : ವಾ.ಉ.

ಕೆಲವು ದಿನಗಳ ಹಿಂದೆ ಮಂಗಳೂರಿನ ಹೋಮ್ ಸ್ಟೇಯೊಂದರಲ್ಲಿ ಬರ್ತ್‌ಡೇ ಆಚರಿಸುತ್ತಿದ್ದ ಯುವಕ ಯುವತಿಯರ ಮೇಲೆ ಹೀನಾಯವಾದ ದಾಳಿ ಮಾಡಿದ 'ಹಿಂದೂ ಜಾಗರಣ ವೇದಿಕೆ'ಯ ದಾಳಿಕೋರರ ಮೇಲೆ ಗೂಂಡಾ ಕಾಯಿದೆಯನ್ವಯ ಕೇಸು ದಾಖಲಿಸಬೇಕೆಂದು ಒತ್ತಾಯಿಸಿ ಹಾಗೂ ಈ ದಾಳಿಕೋರರನ್ನು ಸಮರ್ಥಿಸುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವ ಸಂಘಪರಿವಾರದ ಸಂಘಟನೆಗಳಿಗೆ ಕುಮ್ಮಕ್ಕು ಕೊಡುತ್ತಿರುವ ಹಾಗೂ ಮಹಿಳೆಯರ ಮಾನ ಪ್ರಾಣ ರಕ್ಷಣೆಗೆ ವಿಫಲವಾಗಿರುವ ರಾಜ್ಯ ಬಿಜೆಪಿ ಸರಕಾರದ ರಾಜೀನಾಮೆಗೆ ಒತ್ತಾಯಿಸಿ ಸಿಪಿಐ(ಎಂ) ಪಕ್ಷವು ರಾಜ್ಯದ್ಯಾಂತ ಆಗಸ್ಟ್ 16 ರಂದು ಪ್ರತಿಭಟನೆ ನಡೆಸಬೇಕೆಂದು ಕರೆಕೊಟ್ಟ ಮೇರೆಗೆ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ



ಮುಂದೆ ಪಕ್ಷದ ಕಾರ್ಯಕರ್ತರು ಪಕ್ಷದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪಿಕೆಟಿಂಗ್ ನಡೆಸಿದರು.

ಹಿಂದೂ ಜಾಗರಣ ವೇದಿಕೆಯವರಾದ ದಾಳಿಕೋರರು ಸಂಘ ಪರಿವಾರದ ಗೂಂಡಾಗಳು ಎಂಬುದರಲ್ಲಿ ಅನುಮಾನವಿಲ್ಲ. ದಾಳಿಕೋರರ ಮೇಲೆ ಗೂಂಡಾ ಕಾಯ್ದೆಯಂತೆ ಪ್ರಕರಣ ದಾಖಲಿಸಲಾಗುವುದು ಎಂದು ರಾಜ್ಯ ಗೃಹಮಂತ್ರಿಗಳೇ ಹೇಳಿದ್ದಾರೆ. ಅಲ್ಲದೆ ಹಿಂದೂ ಜಾಗರಣ ವೇದಿಕೆ ಎಂಬುದು ಆರ್‌ಎಸ್‌ಎಸ್‌ನ ಹಲವಾರು ಸಂಘಟನೆಗಳಲ್ಲಿ ಒಂದು. ಆದುದರಿಂದ ದಾಳಿಕೋರರು ಸಂಘಪರಿವಾರದ ಗೂಂಡಾಗಳು ಎಂಬುದರಲ್ಲಿ ವಿವಾದವಿಲ್ಲ ಎಂಬುದಾಗಿ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಹೇಳಿದರು.

ಕೆಲವು ವರ್ಷಗಳ ಹಿಂದೆ ಚರ್ಚ್‌ಗಳ ಮೇಲೆ ದಾಳಿ ನಡೆಸಿದವರು ಭಜರಂಗ ದಳದವರಾಗಿದ್ದರು. ಪಬ್‌ನಲ್ಲಿ ಯುವತಿಯರ ಮೇಲೆ ದಾಳಿ ನಡೆಸಿದವರು ಶ್ರೀರಾಮ ಸೇನೆಯವರಾಗಿದ್ದರು. ಈ ಬಾರಿ ಹೋಮ್ ಸ್ಟೇ ಮೇಲೆ ದಾಳಿ ನಡೆಸಿದವರು ಹಿಂದೂ ಜಾಗರಣ ವೇದಿಕೆಯವರಾಗಿರುತ್ತಾರೆ. ಬೇರೆ ಬೇರೆ ಸಂಘಟನೆಯ ಹೆಸರಿನಲ್ಲಿ ಧಾರ್ಮಿಕ ಕೇಂದ್ರಗಳ ಮೇಲೆ ಹಾಗೂ ಮಹಿಳೆಯರ ಮೇಲೆ ದಾಳಿ ಮಾಡಿದ ಇವರೆಲ್ಲರೂ ಸಂಘಪರಿವಾರಕ್ಕೆ ಸೇರಿದವರು. ಬಿಜೆಪಿ ಸರಕಾರ ರಾಜ್ಯದ ಆಡಳಿತ ನಡೆಸಿದಂದಿನಿಂದಲೂ ಇಂಥ ದಾಳಿಗಳು ನಡೆದಿವೆ. ಈ ದಾಳಿಕೋರರ ಮೇಲೆ ಯಾವ ಕಾನೂನು ಕ್ರಮಗಳೂ ನಡೆದಿಲ್ಲ. ಅವರಿಗೆ ಶಿಕ್ಷೆಯೂ ಆಗುವುದಿಲ್ಲ ಎಂದು ವಿವರಿಸಿದರು.

ಎಂ.ವಿ.ಕಾಮತ್ ಮತ್ತು ಸಿ.ಮಂಜುಳಾ ಅವರ ತಪ್ಪು ವ್ಯಾಖ್ಯಾನಗಳ ಖಂಡನೆ:

ಎಂ.ವಿ.ಕಾಮತ್ ದೇಶದ ಒಬ್ಬ ಹಿರಿಯ ಪತ್ರಕರ್ತ; 90ರ ವಯಸ್ಸಿನವರು. ಪಾರ್ಟಿಗೆ ಹೋಗುವ ಹೆಣ್ಣು ಮಕ್ಕಳ ಹೆತ್ತವರ ಪಾತ್ರವನ್ನು ದಾಳಿಕೋರರು ನಿರ್ವಹಿಸಿದ್ದಾರೆ ಎಂದು ಹೇಳುವ ಮೂಲಕ ದಾಳಿಕೋರರನ್ನು ಅವರು ಸಮರ್ಥಿಸಿದ್ದಾರೆ. ವೇದಿಕೆಯು ಹೆತ್ತವರ ಪಾತ್ರವನ್ನು ಮಾಡಿದ್ದಾರೆ ಎನ್ನುವ ಎಂ.ವಿ.ಕಾಮತ್ ಅವರು ಹೆಮ್ಮಕ್ಕಳ ಮೇಲಿನ ದಾಳಿಯನ್ನು ಸಮರ್ಥಿಸಿದುದಕ್ಕಾಗಿ ಅವರನ್ನು ಬಿ.ಮಾಧವ ಖಂಡಿಸಿದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಸಿ.ಮಂಜುಳಾ ಮಂಗಳೂರಿಗೆ ಭೇಟಿ ನೀಡಿ ಪರಿಶೀಲಿಸಿ ತಮ್ಮ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅವರು ತಮ್ಮ ವರದಿಯಲ್ಲಿ ದಾಳಿಕೋರರ ಮೇಲೆ ಕ್ರಮ ಕೈಗೊಳ್ಳಬೇಕಾದ ತುರ್ತನ್ನು ತಿಳಿಸದೆ, ದಾಳಿ ನಡೆದ ಹೋಮ್ ಸ್ಟೇಗೆ ಅನುಮತಿಯಿದೆಯೇ, ದಾಳಿಗೊಳಗಾದ ಯುವತಿಯರ ಹಿನ್ನೆಲೆ, ಡ್ರಗ್ ಮಾಫಿಯಾ, ಮದ್ಯವ್ಯಸನ ಹೆಚ್ಚಳ ಇತ್ಯಾದಿಗಳ ಬಗ್ಗೆ ತನಿಖೆ ನಡೆಸಬೇಕೆಂದು ಸೂಚಿಸುವ ಮೂಲಕ ತನಿಖೆಯ ದಾರಿಯನ್ನು



ತಪ್ಪಿಸುತ್ತಿದ್ದಾರೆ ಮತ್ತು ಆ ಮೂಲಕ ಹಲ್ಲೆಕೋರರರಿಗೆ ನೈತಿಕ ಬೆಂಬಲವನ್ನು ನೀಡುತ್ತಿದ್ದಾರೆ ಎಂದು ಬಿ.ಮಾಧವ ಆರೋಪಿಸಿದರು.

ಜಿಲ್ಲಾಧಿಕಾರಿ ಕಚೇರಿಯ ಪಿಕೆಟಿಂಗ್, ಬಂಧನ ಮತ್ತು ಬಿಡುಗಡೆ

ನಾಲ್ಕನೂರಕ್ಕೂ ಮಿಕ್ಕಿದ ಸಂಖ್ಯೆಯ ಸಿಪಿಐ(ಎಂ) ಕಾರ್ಯಕರ್ತರು ಮಂಗಳೂರಿನ ಪುರಭವನದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಘೋಷಣೆಗಳೊಂದಿಗೆ ಮೆರವಣಿಗೆ ಸಾಗಿ ಬಂದು, ಬಿ.ಮಾಧವ ಅವರು ಭಾಷಣ ಮಾಡಿದ ಕೂಡಲೇ ಜಿಲ್ಲಾಧಿಕಾರಿ ಕಚೇರಿಯ ಗೇಟು ಕಡೆ ನುಗ್ಗಿ ಪಿಕೆಟಿಂಗ್ ಆರಂಭಿಸಿದರು. ಸಿದ್ಧವಾಗಿದ್ದ ಪೋಲೀಸ್‌ಪಡೆ ಎಲ್ಲಾ ಪ್ರತಿಭಟನಾಕಾರರನ್ನು ಬಂಧಿಸಿ ಕರೆದೊಯ್ದು, ಬಳಿಕ ಬಿಡುಗಡೆ ಮಾಡಿದರು. ಜಿಲ್ಲಾ ಸಮಿತಿ ಮುಖಂಡರಾದ ಕೆ.ಆರ್.ಶ್ರೀಯಾನ್, ಯು.ಬಿ.ಲೋಕಯ್ಯ, ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಯಾದವ ಶೆಟ್ಟಿ, ಬಿ.ಎಂ.ಭಟ್, ಕೃಷ್ಣಪ್ಪ ಸಾಲ್ಯಾನ್, ಸುನಿಲ್ ಕುಮಾರ್ ಬಜಾಲ್ ಮತ್ತಿತರರು ಬಂಧನಕ್ಕೊಳಗಾದರು.

ಸೆಕ್ಯುಲರ್ ಪಕ್ಷಗಳ ಸಂಯುಕ್ತ ಪ್ರತಿಭಟನೆಗೆ ದ.ಕ.ಜಿಲ್ಲೆಯಲ್ಲಿ ಸಿದ್ಧತೆ:

ಹೋಮ್ ಸ್ಟೇಯಲ್ಲಿ ಯುವಕ ಯುವತಿಯರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಈಗಾಗಲೇ ಸಿಪಿಐ(ಎಂ), ಕಾಂಗ್ರೆಸ್ ಪಕ್ಷಗಳು ಪ್ರತಿಭಟನೆಯನ್ನು ಮಂಗಳೂರಿನಲ್ಲಿ ನಡೆಸಿವೆ. ಆದಾಗ್ಯೂ ಸೆಕ್ಯುಲರ್ ಪಕ್ಷಗಳು ಈ ಬಗ್ಗೆ ಸಂಯುಕ್ತ ಕಾರ್ಯಕ್ರಮವೊಂದನ್ನು ಹಾಕುವ ಬಗ್ಗೆ ದುಂಡು ಮೇಜಿನ ಸಭೆ ಸೇರಿ ಚರ್ಚಿಸಿದವು. ಆಗಸ್ಟ್ 16 ರಂದು ಸಭೆಯೊಂದು ನಡೆದಿದ್ದು, ಸೆಪ್ಟೆಂಬರ್ 4 ರಂದು ಬೃಹತ್ ಪ್ರತಿಭಟನೆಯೊಂದನ್ನು ಮಂಗಳೂರಿನಲ್ಲಿ ಸಂಘಟಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಸಿಪಿಐ(ಎಂ), ಸಿಪಿಐ, ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷದ ಜಿಲ್ಲಾ ಮುಖಂಡರು ಈ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿ , ಯುವಜನ ಮತ್ತು ಮಹಿಳಾ ಸಂಘಟನೆಗಳು ಕೂಡಾ ಆಗಸ್ಟ್ 17 ರಂದು ಸಭೆ ಸೇರಿದ್ದು, ಸೆಪ್ಟೆಂಬರ್ 1 ರಂದು ಮಂಗಳೂರಿನಲ್ಲಿ ವಿದ್ಯಾರ್ಥಿ ,ಯುವಜನ ಹಾಗೂ ಮಹಿಳೆಯರ ಬೃಹತ್ ಪ್ರತಿಭಟನೆಯನ್ನು ನಡೆಸಲು ಸಿದ್ಧತೆ ನಡೆಸಿವೆ. ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್, ಯೂತ್ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್, ಎನ್‌ಎಸ್‌ಯುಐ, ಎಐಎಸ್‌ಎಫ್, ಎಐವೈಎಫ್, ಜನತಾದಳದ ವಿದ್ಯಾರ್ಥಿ ಯುವ ಹಾಗೂ ಮಹಿಳಾ ವಿಭಾಗಗಳೂ ಸೆಪ್ಟೆಂಬರ್ 1ರಂದು ಜಂಟಿ ಪ್ರತಿಭಟನೆ ನಡೆಸಲು ಸಿದ್ಧತೆ ನಡೆಸಿವೆ.

ಕೋಟೆಕಾರ್ ಬೀಡಿ ಕಾರ್ಮಿಕರ ಯೂನಿಯನ್ ಪ್ರತಿಭಟನೆ:

ಬೀಡಿ ಕಾರ್ಮಿಕರ ಕ್ಷೇಮ ನಿಧಿಯ ದೇಣಿಗೆಯಿಂದ ಕಾರ್ಮಿಕರ ಮಕ್ಕಳಿಗೆ ನೀಡಲಾಗುತ್ತಿದ್ದ 1ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿ ವೇತನವನ್ನು ಕಾರ್ಮಿಕ ಇಲಾಖೆ ನಿಲ್ಲಿಸಿದ್ದು, ಕಾರ್ಮಿಕರ ದೇಣಿಗೆಯಿಂದಲೇ ಕೊಡಲಾಗುತ್ತಿದ್ದ ಇದನ್ನು ಮುಂದುವರೆಸಬೇಕೆಂದು ಆಗ್ರಹಿಸಿ, ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ಸದಸ್ಯರು ಆಗಸ್ಟ್ 10 ರಂದು ದೇರಳಕಟ್ಟೆಯ ಕಾರ್ಮಿಕರ ಕ್ಷೇಮನಿಧಿ ಡಿಸ್ಪೆನ್ಸರಿ ಎದುರು ಪ್ರತಿಭಟನೆ ನಡೆಸಿದರು.

ನೂರಾರು ಸಂಖ್ಯೆಯ ಬೀಡಿ ಕಾರ್ಮಿಕರು ದೇರಳಕಟ್ಟೆಯ ಬಸ್ ನಿಲ್ದಾಣದಿಂದ ಬೆಳ್ಮ ಗ್ರಾಮ ಪಂಚಾಯತ್ ಕಚೇರಿ ಸಮೀಪದಲ್ಲಿರುವ ಡಿಸ್ಪೆನ್ಸರಿ ವರೆಗೆ ಜಾಥಾ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಯೂನಿಯನ್ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ ಮಾತನಾಡಿದರು. ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಯೂನಿಯನ್ ಮುಖಂಡರಾದ ಜಯಂತ ನಾಯ್ಕ್, ಬಾಬು ಪಿಲಾರ್ ಮತ್ತಿತರರು ಉಪಸ್ಥಿತರಿದ್ದರು.


ಪುಟ 12ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಒತ್ತಾಯಿಸಿ ರೈತನ ಆತ್ಮಹತ್ಯೆ !

ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ

ಭೀಕರ ಬರದಿಂದ ತತ್ತರಿಸಿರುವ ಜಿಲ್ಲೆಗಳಲ್ಲಿ ತುಮಕೂರು ಜಿಲ್ಲೆಯೂ ಒಂದು, ಬರ ಪರಿಸ್ಥಿತಿಯನ್ನು ವೀಕ್ಷಣೆ ಮಾಡಲು ಹೊರಟಿರುವ ಮಾಜಿ ಮುಖ್ಯ ಮಂತ್ರಿ ಯಡಿಯೂರಪ್ಪ ತಮ್ಮ ಪ್ರವಾಸವನ್ನು ಆರಂಭ ಮಾಡಿದ್ದೇ ತುಮಕೂರು ಜಿಲ್ಲೆಯಿಂದ. ಅಂದು ಮಂಗಳವಾರ ಸಿದ್ದಗಂಗಾ ಮಠಕ್ಕೆ ಬೇಟಿ ನೀಡಿ ಡಾ. ಶಿವಕುಮಾರ ಸ್ವಾಮೀಜಿ ಆಶೀರ್ವಾದ ಪಡೆದು ಯಡಿಯೊರಪ್ಪನವರು ತಮ್ಮ ಬರ ಅಧ್ಯಯನ ಪ್ರಾರಂಭಿಸಿದ್ದಾರೆ. ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಸಚಿವೆ ಶೋಭಾ ಕರಂದ್ಲಾಜೆ ಯಡಿಯೂರಪ್ಪಗೆ ಶುಭ ಹಾರೈಸಿ ಬೀಳ್ಕೊಟ್ಟಿದ್ದಾರೆ. ಅಲ್ಲಿಂದ ಅವರು ಕೆಲವು ಗೋಶಾಲೆಗಳಿಗೆ ಭೇಟಿ ನೀಡಿದ್ದಾರೆ. ಮುಂದೆ ಅವರು ಗೋಶಾಲೆಗೆ ಬರುವ ರೈತರಿಗೆ ರಾತ್ರಿ ಊಟದ ವ್ಯವಸ್ಥೆ ಮಾಡುವ ಭರವಸೆ ನೀಡಿ ಚಿತ್ರದುರ್ಗ ಕಡೆಗೆ ಪಾದ ಬೆಳೆಸಿದ್ದಾರೆ. ಅಪ್ಪಿತಪ್ಪಿಯೂ ಅವರು ಶಿರಾ ತಹಶೀಲ್ದಾರರ ಕಛೇರಿ ಎದುರು ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಒತ್ತಾಯಿಸಿ ಧರಣಿ ನಡೆಸುತ್ತಿದ್ದ ರೈತರತ್ತ ಹೆಜ್ಜೆ ಹಾಕಲೇ ಇಲ್ಲ.



ಯಡಿಯೂರಪ್ಪನವರನ್ನು (ಯಾವ ಘನ ಉದ್ದೇಶಕ್ಕಾಗಿ?) ಹಿಂಬಾಲಿಸುತ್ತಾ ಇದ್ದ ಜಿಲ್ಲಾಧಿಕಾರಿ ಸಹ ಶಿರಾದಲ್ಲಿ ನಡೆಯುತ್ತಿದ್ದ ರೈತರ ಧರಣಿಯನ್ನು ಯಡಿಯೂರಪ್ಪ ಗಮನಕ್ಕೆ ತಂದಿರಲಿಕ್ಕಿಲ್ಲ. ತಹಶೀಲ್ದಾರರಿಂದ ಸಕರಾತ್ಮಕ ಪ್ರತಿಕ್ರಿಯೆ ದೊರೆಯದೆ ಹತಾಶರಾದ ಧರಣಿ ನಿರತರಲ್ಲಿ ಮೂವರು ತಹಶೀಲ್ದಾರರ ಎದುರೇ ಕೀಟನಾಶಕ ಸೇವಿಸಿದ್ದಾರೆ. ಮೇಕೆರಹಳ್ಳಿ ಶೀನಿವಾಸ್, ತಿಮ್ಮರಾಜು, ನರಸಿಂಹ ಮೂರ್ತಿ ವಿಷ ಸೇವಿಸಿದವರು. ವಿಷ ಸೇವಿಸಿದ ಮೂವರನ್ನು ತಕ್ಷಣವೇ ತಾಲ್ಲೂಕು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನೀಡಲಾಗಿದೆ. ಮೂವರ ಪೈಕಿ ತೀವ್ರ ಅಸ್ವಸ್ಥರಾದ ತಿಮ್ಮರಾಜು(28) ಬುಧವಾರ ಸಂಜೆ ಸಾವಿಗೀಡಾದರು. ಸುದ್ದಿ ತಿಳಿಯುತ್ತಿದ್ದಂತೆ ನೂರಾರು ರೈತರು ಆಸ್ಪತ್ರೆಗೆ ಮುತ್ತಿಗೆ ಹಾಕಿದರು, ತಹಶೀಲ್ದಾರ್ ನಾಗಹನುಮಯ್ಯ ಮತ್ತು ಅರಣ್ಯ ಅಧಿಕಾರಿ ತಿಮ್ಮಯ್ಯ ಅವರೇ ರೈತನ ಸಾವಿಗೆ ಕಾರಣ ಎಂದು ಅವರು ಪ್ರತಿಭಟಿಸಿದರು. ಮೃತನ ಪತ್ನಿ ಸುಶೀಲಮ್ಮನ ಆಕ್ರಂದನ ಎಲ್ಲರ ಮನ ಕಲಕುವಂತಿತ್ತು. ಹಸುಗೂಸು ಸೇರಿ ಇಬ್ಬರು ಪುಟಾಣಿ ಮಕ್ಕಳನ್ನು ಮೃತ ತಿಮ್ಮರಾಜು ಅಗಲಿದ್ದಾನೆ. ಒಂದೂವರೆ ಎಕರೆ ಭೂಮಿಯನ್ನು 15 ವರ್ಷದಿಂದ ಸಾಗುವಳಿ ಮಾಡಿದ್ದು ಭೂಮಿಯನ್ನು ಸಕ್ರಮ ಮಾಡಲು ಒಪ್ಪದ ತಹಶೀಲ್ದಾರ್ ಸರ್ಕಾರದ ವಶಕ್ಕೆ ಪಡೆಯಲು ಮುಂದಾದ ಹಿನ್ನೆಲೆಯಲ್ಲಿ ತಿಮ್ಮರಾಜು ವಿಷ ಸೇವಿಸಿದ್ದರು.


ಮುದಿಗೆರೆ ಕಾವಲ್‌ನ 12ನೇ ಸರ್ವೆ ನಂಬರ್‌ನಲ್ಲಿ 4600 ಎಕರೆ ಜಮೀನು ಇದ್ದು ಕಳೆದ 20ಕ್ಕೂ ಹೆಚ್ಚು ವರ್ಷಗಳಿಂದ ಭೂರಹಿತ ರೈತರು ಸ್ವಲ್ಪ ಭಾಗವನ್ನು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅನೇಕ ಸಲ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರೂ ಪ್ರಯೋಜನವಾಗಿರಲಿಲ್ಲ. ಹೀಗಾಗಿ ಮಂಗಳವಾರ ಧರಣಿ ಆರಂಭಿಸಿದ್ದರು. ಬಗರ್ ಹುಕ್ಕುಂ ಸಾಗುವಳಿ ಸಕ್ರಮದ ಪ್ರಶ್ನೆ ಕೇವಲ ಶಿರಾ ತಾಲ್ಲೂಕಿನ ರೈತರ ಪ್ರಶ್ನೆಯಲ್ಲ. ಇದು ರಾಜ್ಯದ ಸರಿಸುಮಾರು ಎಲ್ಲಾ ತಾಲ್ಲೂಕುಗಳಲ್ಲಿ ಜೀವಂತವಾಗಿರುವ ಪ್ರಶ್ನೆ. ಸ್ವಂತ ಭೂಮಿ ಇಲ್ಲದ ಬಡವರು ತಮ್ಮ ಗ್ರಾಮಗಳ ಆಸುಪಾಸಿನಲ್ಲಿರುವ ಸರ್ಕಾರಿ ಬಂಜರು ಭೂಮಿಯನ್ನು ಬಗರ್ ಹುಕುಂ ಸಾಗುವಳಿ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಸಕ್ರಮಕ್ಕಾಗಿ ಸಲ್ಲಿಸಲಾದ ಲಕ್ಷಾಂತರ ಅರ್ಜಿಗಳನ್ನು ತಿಸ್ಕರಿಸಿ, ಬಡವರು ಕಷ್ಟಪಟ್ಟು ಅಭಿವೃದ್ಧಿ ಪಡಿಸಿದ ಭೂಮಿಯಿಂದ ಹೊರಹಾಕುವ ಪ್ರಯತ್ನವನ್ನು ಹಿಂದಿನ ಸರ್ಕಾರಗಳೂ ಮಾಡಿವೆ. ಈಗಿನ ಬಿಜೆಪಿ ಸರ್ಕಾರವೂ ಅದ್ನನೇ ಮಾಡುತ್ತಿದೆ. ಸರ್ಕಾರ ಪ್ರಾಯೋಜಿತ ಈ ದೌರ್ಜನ್ಯದ ವಿರುದ್ಧ ರಾಜ್ಯದಾದ್ಯಂತ ಬಲಿಷ್ಠ ಚಳುವಳಿಯೊಂದನ್ನು ರೂಪಿಸಲು ಇದು ಸಕಾಲವಾಗಿದೆ. ಶಿರಾ ಘಟನೆಯನ್ನು ಮುಂದಿಟ್ಟುಕೊಂಡು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿ ಬಡವರ ಎಲ್ಲ ಬಗರ್ ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸುವಂತೆ ಒತ್ತಾಯಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಕರೆ ನೀಡಿವೆ. ●

ತಂಡ ಕಟ್ಟಿಕೊಂಡು ದಂಡ ಯಾತ್ರೆಗೆ:....

ಪ್ರಭಾವಿ ಸರ್ಕಸ್ ಕಂಪನಿಯೊಂದು ಮೂರು ತಂಡಗಳಾಗಿ ವಿಂಗಡನೆ ಮಾಡಿಕೊಂಡು ರಾಜ್ಯದ ಜನತೆಗೆ ಇನ್ನೊಂದು ಸುತ್ತಿನ ಪುಕ್ಕಟೆ ಮನೋರಂಜನೆಯನ್ನು ನೀಡಲು ಹೊರಟಿದೆ! ಯಡಿಯೂರಪ್ಪ ಮತ್ತು ಸದಾನಂದಗೌಡರ ನಡುವಿನ ಪರಸ್ಪರ ಕೆಸರು ಎರಚುವ ಆಟ ರಾಜ್ಯದ ಜನತೆಗೆ ಸಾಕಷ್ಟು ರಂಜನೆಯನ್ನು ನೀಡಿತ್ತು. ಕೀಳು ಅಭಿರುಚಿಯ ಈ ರಂಜನೆಯಿಂದ ಸ್ವಲ್ಪ ಬೇಸರಗೊಂಡತೆ ಕಂಡು ಬಂದ ಸಂಗಪರಿವಾರದ ಮುಖಂಡರು ಬ್ರೇಕ್ ಹಾಕಿದರು. ಬೊಗಳುವ ಬಾಯಿಗಳು ಬಂದ್ ಆದವು.

ಈ ನಡುವೆ ಬೆಂಗಳೂರು ಬಿಟ್ಟು ಹೊರಗೆ ಹೋಗದಂತೆ ವಿಧಿಸಲಾಗಿದ್ದ ಷರತ್ತನ್ನು ಹೈಕೋರ್ಟ್ ಸಡಿಲಿಸಿ ಆದೇಶ ನೀಡಿದಾಗ ಬಿ.ಎಸ್.ಯಡಿಯೂರಪ್ಪಗೆ ಬರ ಪೀಡಿತ ತಾಲ್ಲೂಕುಗಳ ರೈತರ ಬಗ್ಗೆ ಎಲ್ಲಿಲ್ಲದ ಕಾಳಜಿ ಉಮ್ಮಳಿಸಿತು. ಬರ ಪರಿಶೀಲನೆಗಾಗಿ ರಾಜ್ಯ ಪ್ರವಾಸ ಆರಂಭಿಸುವುದಾಗಿ ಪ್ರಕಟಿಸಿಯೇ ಬಿಟ್ಟರು. ಅನಂತರ ತನ್ನ ಆಪ್ತರ ಸಭೆಕರೆದು ಪ್ರವಾಸದ ರೂಪರೇಷಗಳನ್ನು ಅಂತಿಮಗೊಳಸಿದರು. ಒಬ್ಬ ಮುಖ್ಯಮಂತ್ರಿಯ ಜತೆ ಇಬ್ಬರು ಉಪಮುಖ್ಯಮಂತ್ರಿಗಳು ಇರುವಾಗ, ಒಬ್ಬ ಮಾಜಿ ಮುಖ್ಯಮಂತ್ರಿಯಾಗಿ ಬರ ಪರಿಶೀಲನೆ ಮಾಡುವ ಅಗತ್ಯವೇನಿದೆ ಎಂದು ಪ್ರಶ್ನೆ ಕೇಳುವ ಧೈರ್ಯವನ್ನು ಬಿಜೆಪಿಯ ಯಾವೊಬ್ಬ ವರಿಷ್ಠರೂ ಮಾಡಲಿಲ್ಲ.

ವರಿಷ್ಠರ ನಿದ್ದೆ ಭಂಗ : ಬರ ಪ್ರವಾಸ ಕೈಗೊಳ್ಳುವ ಮೂಲಕ ಯಡಿಯೂರಪ್ಪ ತನ್ನ ವೈಯಕ್ತಿಕ ವರ್ಚಸ್ಸನ್ನು ವೃದ್ಧಿಸಲು ಹೊರಟಿದ್ದಾರೆ ಎಂಬುದು ಗುಟ್ಟಿನ ವಿಷಯವೇನಾಗಿರಲಿಲ್ಲ. ಒಂದು ನೂರಕ್ಕೂ ಹೆಚ್ಚು ತಾಲೂಕುಗಳಿಗೆ ಭೇಟಿ ನೀಡಿ, ಅಲ್ಲಿ ತನ್ನ ಬೆಂಬಲಿಗರನ್ನು ಗುರುತಿಸಿ, ಮುಂದಿನ ಚುನಾವಣೆಗೆ ತನಗೆ ಬೇಕಾದವರನ್ನು ಆಯಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳಾಗಿ ಆಯ್ಕೆ ಮಾಡಿ, ಚುನಾವಣಾ ಸಿದ್ಧತೆಯನ್ನು ಆರಂಭಿಸಲು ಅವರಿಗೆ ಮುನ್ಸೂಚನೆ ನೀಡಲು ಯಡಿಯೂರಪ್ಪ ಒಳಗೊಳಗೆ ಸಿದ್ಧತೆ ಮಾಡಿಕೊಂಡದ್ದಾರೆ ಎಂಬ ರಹಸ್ಯ ಬಯಲಾಗುತ್ತಿದಂತೆ ನಿದ್ದೆಯಲ್ಲಿದ್ದ ಬಿಜೆಪಿ ವರಿಷ್ಠರು ಆಘಾತದಿಂದ ಕಣ್ಣು ಬಿಡತೊಡಗಿದರು. ತತಕ್ಷಣವೇ ರಾ.ಸ್ವ.ಸೇ. ಸಂಘದ ಮೊರೆ ಹೋದರು. ಯಾವುದೇ ಕಾರಣಕ್ಕೂ ಯಡಿಯೂರಪ್ಪ ಒಂಟಿಯಾಗಿ ಪ್ರವಾಸ ಕೈಗೊಳ್ಳುವುದಕ್ಕೆ ಅವಕಾಶ ಕೊಡಬಾರದು ಎಂದು ಆದೇಶ ಹೊರಬಿತ್ತು. ಯಡಿಯೂರಪ್ಪ ಅವರೊಂದಿಗೂ ಮಾತನಾಡಿ ಏಕಾಂಗಿಯಾಗಿ ಪ್ರವಾಸ ಕೈಗೊಳ್ಳದಂತೆ ಸಲಹೆ ರೂಪದ ತಾಕೀತು ಮಾಡಿದರು ಎನ್ನಲಾಗಿದೆ.



ಈ ಹಂತದಲ್ಲಿ ಯಡಿಯೂರಪ್ಪ ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ತನ್ನ ಪ್ರವಾಸದಿಂದ ಪಕ್ಷಕ್ಕೆ ಯಾವುದೇ ಹಾನಿ ಉಂಟಾಗುವುದಿಲ್ಲ ಎಂಬ ಭರವಸೆ ನೀಡುವ ಪ್ರಯತ್ನ ಮಾಡಿದ್ದಾರೆ. ಒಬ್ಬರೇ ಪ್ರತ್ಯೇಕವಾಗಿ ಪ್ರವಾಸ ಮಾಡುವುದರಿಂದ ಪಕ್ಷ ಹಾಗೂ ಸರ್ಕಾರದ ನಡುವೆ ಗೊಂದಲ ಉದ್ಭವಿಸುವ ಅಪಾಯವಿದೆ ಎಂದು ರಾಷ್ಟ್ರೀಯ ನಾಯಕರು ಮನವರಿಕೆ ಮಾಡಲು ಶತಪ್ರಯತ್ನ ಮಾಡಿದ್ದಾರೆ. ಕೊನೆಗೆ ಒಲ್ಲದ ಮನಸ್ಸಿನಿಂದಲೇ ತನ್ನ ಒಂಟಿ ಪ್ರವಾಸವನ್ನು ಕೈಬಿಟ್ಟು ಬಿಜೆಪಿ ಮುಖಂಡರೊಂದಿಗೆ ಜಂಟಿ ಪ್ರವಾಸ ಕೈಗೊಳ್ಳಲು ಯಡಿಯೂರಪ್ಪ ಒಪ್ಪಿಕೊಂಡರು ಎಂದು ತಿಳಿದು ಬಂದಿದೆ.

ದಿಕ್ಕಿಗೊಬ್ಬರಂತೆ! ಯಡಿಯೂರಪ್ಪ ಅವರಿಗೆ ವೈಯುಕ್ತಿಕವಾಗಿ ಲಾಭ ಆಗುವುಧನ್ನು ತಪ್ಪಿಸಲು ಪಕ್ಷದ ವರಿಷ್ಠರು ಯಡಿಯೂರತಪ್ಪ ನೇತೃತ್ವದ ತಂಡದೊಂದಿಗೆ ಸದಾನಂದಗೌಡ ಮತ್ತು ಅನಂತಕುಮಾರ್ ನೇತೃತ್ವದಲ್ಲಿ ಇನ್ನೇರಡು ತಂಡಗಳನ್ನು ಪ್ರವಾಸಕ್ಕೆ ಕಳುಹಿಸಲು ನಿರ್ಧರಿಸುವುದರೊಂದಿಗೆ ಪಕ್ಷವನ್ನು ಬಲಪಡಿಸುವ ಜವಾಬ್ದಾರಿಯನ್ನು ದಿಕ್ಕಿಗೊಬ್ಬರಂತೆ ವಹಿಸಿಕೊಟ್ಟಂತಾಗಿದೆ. ಈಗಾಗಲೇ ತೀವ್ರ ಗುಂಪುಗಾರಿಕೆಯಿಂದ ನರಳುತ್ತಿರುವ ರಾಜ್ಯ ಬಿಜೆಪಿ ಮೂರು ತಂಡಗಳ ಪ್ರವಾಸಹದ ಪ್ರಹಸನದಿಂದ ಮೂರಾಬಟ್ಟೆಯಾಗುವ ಸಾಧ್ಯತೆಗಳೇ ಹೆಚ್ಚು. ತನ್ನ ನೇತೃತ್ವದ ತಂಡದೊಂದಿಗೆ ಇನ್ನೂ ಎರಡು

ಪುಟ 10ಕ್ಕೆ

ಮತ್ತೆ ಮೂರು ಸಿಎಜಿ ವರದಿಗಳು: ದೇಶದ ಬೊಕ್ಕಸದ ನಷ್ಟಕ್ಕೆ ಇನ್ನಷ್ಟು 'ಸೊನ್ನೆಗಳು'!

ಎನ್.ಕೆ.ವೇದರಾಜ

ದೇಶದ ಮಹಾ ಲೆಕ್ಕ ಪರಿಶೋಧಕರ (ಸಿಎಜಿ) ಮತ್ತೆ ಮೂರು ವರದಿಗಳು ಈಗ ಅಧಿಕೃತವಾಗಿ ಪ್ರಕಟವಾಗಿವೆ. ಎಲ್ಲದರಲ್ಲೂ 'ಚಮಚಾ ಬಂಡವಾಳಶಾಹಿ'ಯ ವಾಸನೆ ದಟ್ಟವಾಗಿದ್ದು ದೇಶಕ್ಕೆ ಆಘಾತ ಉಂಟು ಮಾಡಿವೆ. ಆದರೆ, ಕಳೆದ ವಾರ ಈ ಅಂಕಣದಲ್ಲಿ ಹೇಳಿದಂತೆ ಈ ಮಗದೊಂದು ಮಹಾಹಗರಣದ ನಂತರವೂ ಈ ಹಿಂದಿನಂತೆಯೇ ಆಳುವ ಕೂಟ, ಮುಖ್ಯವಾಗಿ ನೇತೃತ್ವದಲ್ಲಿರುವ ಕಾಂಗ್ರೆಸ್ ಪಕ್ಷ ವರ್ತಿಸುತ್ತಿದೆ, ಸಂವಿಧಾನಿಕ ಸಂಸ್ಥೆಯಾದ ಸಿಎಜಿಯ ಲೆಕ್ಕಾಚಾರವನ್ನೇ ಪ್ರಶ್ನಿಸಿದೆ, ಅದು ಮೇರೆ ಮೀರಿ ಹೋಗುತ್ತಿದೆ ಎಂದು ದೂಷಿಸಿದೆ, ಬಹುಶಃ 'ನವ-ಉದಾರವಾದ'ಕ್ಕೆ ಕಟಿಬದ್ಧರಾಗಿರುವವರಿಂದ ಬೇರೇನನ್ನೂ ನಿರೀಕ್ಷಿಸುವುದು ದಡ್ಡತನವೇ. ಯಥಾಪ್ರಕಾರ ಸಂಸತ್ ಕಲಾಪಗಳು ಸ್ಥಗಿತಗೊಂಡಿವೆ.

ಈ ಮೂರರರಲ್ಲಿ ಮೊದಲ ವರದಿ ಕಲ್ಲಿದ್ದಲು ನಿಕ್ಷೇಪಗಳ ಹಂಚಿಕೆಗೆ ಸಂಬಂಧಪಟ್ಟದ್ದು. ಜುಲೈ 2004ರಿಂದ ಈ ಹಂಚಿಕೆ ಪಾರದರ್ಶಕವಾಗಿ ಮತ್ತು ವಸ್ತುನಿಷ್ಠವಾಗಿ ನಡೆದಿಲ್ಲ; ಈ ಅವಧಿಯಲ್ಲಿ ವಿವಿಧ ಸರಕಾರೀ ಮತ್ತು ಖಾಸಗಿಯವರಿಗೆ ಹಂಚಿಕೆ ಮಾಡಲಾಗಿದ್ದು, ಖಾಸಗಿಯವರು ಇದರಲ್ಲಿ 1.86 ಲಕ್ಷ ಕೋಟಿ ರೂ.ಗಳಷ್ಟು ಅಗಾಧ ಪ್ರಮಾಣದ ಲಾಭ ಗಿಟ್ಟಿಸಿದ್ದಾರೆ ಎಂದು ಸಿಎಜಿ ಅಂದಾಜು. ಕಲ್ಲಿದ್ದಲು ನಿಕ್ಷೇಪಗಳ ಹಂಚಿಕೆಯಲ್ಲಿ ಸ್ಪರ್ಧಾತ್ಮಕ ಹರಾಜು ವಿಧಾನವನ್ನು ಆರಂಭಿಸಬೇಕು ಎಂದು ಸರಕಾರವೇ ಜೂನ್ 2004ರ ವೇಳೆಗೆ ನಿರ್ಧರಿಸಿದ್ದನ್ನು ಜಾರಿಗೆ ತಂದಿದ್ದರೆ, ಖಾಸಗಿಯವರ ಈ ಅಪಾರ ಲಾಭದಲ್ಲಿ ಬಹಳಷ್ಟು ಸರಕಾರದ ಬೊಕ್ಕಸಕ್ಕೆ ಬರುತ್ತಿತ್ತು.

ಕಲ್ಲಿದ್ದಲು ಒಂದು ರಾಷ್ಟ್ರೀಯ ಸಂಪನ್ಮೂಲ. ಸಾರ್ವಜನಿಕ ವಲಯದ ಮತ್ತು ರಾಜ್ಯ ಸರಕಾರೀ ಉದ್ದಿಮೆಗಳಿಗೆ, ವಿದ್ಯುತ್ ಮಂಡಳಿಗಳಿಗೆ ಜನತೆಗಾಗಿ ಮತ್ತು ದೇಶಕ್ಕಾಗಿ ವಿದ್ಯುತ್ ಉತ್ಪಾದಿಸಲು ಇದು ಆವಶ್ಯಕ. ಈ ನಿಕ್ಷೇಪಗಳ ಹಂಚಿಕೆ ಮನಬಂದಂತೆ ನಡೆದಿದೆ, ಭಾರೀ ಭ್ರಷ್ಟಾಚಾರಗಳ ಮೂಲಕ ತಮಗೆ 'ಬೇಕಾದವರಿಗೆ' ಹಂಚುವ ವ್ಯಹಾರಗಳನ್ನು ಕುದುರಿಸಲಾಗಿದೆ. ಇದರಿಂದ ಸರಕಾರದ ಬೊಕ್ಕಸಕ್ಕಾಗಿರುವ ನಷ್ಟ 2ಜಿ ತರಂಗಾಂತರ ಹಂಚಿಕೆಯಲ್ಲಾದ ನಷ್ಟಕ್ಕಿಂತಲೂ ಹೆಚ್ಚು ಎಂದು ಸಿಎಜಿ ಅಂದಾಜು ಮಾಡಿದೆ.

ಎರಡನೆಯ ಸಿಎಜಿ ವರದಿ, 'ವಿಶೇಷ ಉದ್ದೇಶದ ವಾಹನಗಳು' (ಎಸ್‌ಪಿವಿ) ಎಂಬ ಹೆಸರಿನಲ್ಲಿ ಸರಕಾರ ರಚಿಸಿದ ಸಂಸ್ಥೆಗಳಿಗೆ ಭಾರೀ ಬೃಹತ್ ಪ್ರಮಾಣದ ವಿದ್ಯುತ್ ಯೋಜನೆ (ಯುಎಂಪಿಪಿ)ಗಳಿಗೆ ತೈಲ ನಿಕ್ಷೇಪಗಳ ಹಂಚಿಕೆ ಕುರಿತಾದದ್ದು. ಅಂಬಾನಿ ಗುಂಪಿನ ರಿಲಯನ್ಸ್ ಪವರ್ ಲಿಮಿಟೆಡ್(ಆರ್‌ಪಿಎಲ್) ಕಂಪನಿಗೆ ಹರಾಜಿನ ಮೂಲಕ ಹಂಚಿಕೆಯ ನಂತರ ಹರಾಜಿನ ಶರತ್ತುಗಳನ್ನು ಉಲ್ಲಂಘಿಸಿ ಸಾಸನ್ ಯುಎಂಪಿಪಿಗೆ ಹಂಚಿದ್ದ ಮೂರು ಕಲ್ಲಿದ್ದಲು ನಿಕ್ಷೇಪಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಇದು ಹರಾಜು ಶರತ್ತುಗಳ ಉಲ್ಲಂಘನೆ ಮಾತ್ರವಲ್ಲ, ಆರ್‌ಪಿಎಲ್ ಗೆ ಸಲ್ಲಬಾರದ ಪ್ರಯೋಜನಗಳನ್ನು ಕೊಟ್ಟಿದೆ. ಈ ಮೂಲಕ ಆರ್‌ಪಿಎಲ್‌ಗೆ ರೂ. 29ಸಾವಿರ ಕೋಟಿ ಬಕ್ಷೀಸು ನೀಡಿದಂತಾಗಿದೆ ಎಂದು ಸಿಎಜಿ ಲೆಕ್ಕಹಾಕಿದೆ.




ಕೃಪೆ : ದಿ ಹಿಂದು

ಮೂರನೇ ವರದಿ ದಿಲ್ಲಿಯ ಇಂದಿರಾಗಾಂಧಿ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ(ಡಿಐಎಎಲ್)ಕ್ಕಾಗಿ ಸಾರ್ವಜನಿಕ–ಖಾಸಗಿ ಪಾಲುದಾರಿಕೆ(ಪಿಪಿಪಿ) ಕುರಿತಾದದ್ದು. ಈ ವರದಿ ನಾಗರಿಕ ವಿಮಾನಯಾನ ಮಂತ್ರಾಲಯ ಮತ್ತು ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ(ಎಎಐ) ಈ ವಿಷಯದಲ್ಲಿ ತಪ್ಪು ಕ್ರಮಗಳಿಗೆ ಎರಡು ರೀತಿಗಳಲ್ಲಿ ಅನುಕೂಲ ಮಾಡಿಕೊಟ್ಟಿವೆ ಎಂದು ಸಿಎಜಿ ವರದಿ ಹೇಳಿದೆ. ಈ ಪಿಪಿಪಿಯಲ್ಲಿ ಖಾಸಗಿಯವರು 2450 ಕೋಟಿ ರೂ.ಗಳ ಬಂಡವಾಳ ಹಾಕಿದ್ದಕ್ಕಾಗಿ 240 ಎಕರೆ ಭೂಮಿಯ ವಾಣಿಜ್ಯ ಬಳಕೆಯ ಹಕ್ಕನ್ನು ಕೊಡಲಾಗಿದೆ. ಇದರಿಂದ ಲೈಸೆನ್ಸ್ ಶುಲ್ಕದ ಮೂಲಕ 58 ವರ್ಷಗಳಲ್ಲಿ ಬರುವ ಆದಾಯದ ಪ್ರಮಾಣ 1,83,557 ಕೋಟಿ ರೂ. ಹಾಗೂ ಇದರಲ್ಲಿ ಡಿಯೆಎಎಲ್ ಪಾಲು ರೂ.88,337 ಕೋಟಿ ಎಂದು ಸ್ವತಃ ಆ ಕಂಪನಿಯೇ ಲೆಕ್ಕ ಹಾಕಿತ್ತು. ಇದಕ್ಕೆ ಇನ್ನೂ 190.19 ಎಕರೆ ಜಮೀನನ್ನು ಕೇವಲ ರೂ. 6.19 ಕೋಟಿಗೆ ಲೀಸಿಗೆ ಕೊಡಲಾಯಿತು. ಇದು ಸರಕಾರೀ ಸಂಸ್ಥೆಗಳಾದ ನಾಗರಿಕ ವಿಮಾನಯಾನ ಮಹಾನಿರ್ದೇಶಕ ಕಚೇರಿ(ಡಿಜಿಸಿಎ) ಮತ್ತು ನಾಗರಿಕ ವಿಮಾನಯಾನ ಭದ್ರತಾ ಕಚೇರಿ (ಬಿಸಿಎಎಸ್) ಸಾಮಾನ್ಯವಾಗಿ ನಿಗದಿ ಪಡಿಸುವ ದರಕ್ಕಿಂತ ಬಹಳ ಕಡಿಮೆ. ಅಲ್ಲದೆ ಹರಾಜಿನ ನಂತರ, ಕಾಂಟ್ರಾಕ್ಟ್ ಮಾಡಿಕೊಂಡ ನಂತರ ಖಾಸಗಿ ಪಾಲುದಾರರಿಗೆ ಹೆಚ್ಚಿನ ಪ್ರಯೋಜನಗಳನ್ನು ಕೊಡಮಾಡಿರುವುದು ಟೆಂಡರ್ ಪ್ರಕ್ರಿಯೆಯ ಉಲ್ಲಂಘನೆ ಮತ್ತು ಶಾಮೀಲಿನ ಪ್ರಶ್ನೆಗಳನ್ನು ಎಬ್ಬಿಸಿವೆ.

ಇಷ್ಟೇ ಅಲ್ಲ, ನಾಗರಿಕ ವಿಮಾನಯಾನ ಮಂತ್ರಾಲಯ ಫೆಬ್ರುವರಿ 2009ರಲ್ಲಿ ಮತ್ತು ನಂತರ ವಿಮಾನ ನಿಲ್ದಾಣ ಆರ್ಥಿಕ ನಿಯಂತ್ರಣ ಪ್ರಾಧಿಕಾರ (ಎಇಆರ್‌ಎ) ಡಿಐಎಎಲ್ 'ಅಭಿವೃದ್ಧಿ' ಶುಲ್ಕ ಎಂದು 3415.35 ಕೋಟಿ ರೂ.ಗಳನ್ನು ಸಂಗ್ರಹಿಸಲು ಅವಕಾಶ ನೀಡಿವೆ. ಇದರಲ್ಲಿ 'ಕಾರ್ಯಾಚರಣೆ ನಿರ್ವಹಣೆ ಮತ್ತು ಅಭಿವೃದ್ಧಿ ಒಪ್ಪಂದ'(ಒಎಂಡಿಎ)ದ ಹಾಗೂ ಎಎಐ ಕಾನೂನು ಮತ್ತು ಎಐಆರ್‌ಎ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಮಹಾಲೆಕ್ಕ ಪರಿಶೋಧಕರ ವರದಿ ಹೇಳಿದೆ. ಒಟ್ಟು ಈ ಮೂರು ಪ್ರಕರಣಗಳಲ್ಲಿ ಖಾಸಗಿಯವರಿಗೆ 3.06 ಲಕ್ಷ ಕೋಟಿ ರೂ.ಗಳ ಲಾಭ ಕೊಡಮಾಡಲಾಗಿದೆ ಎಂಬುದು ಸಿಎಜಿ ವರದಿಗಳಿಂದ ಕಂಡು ಬರುವ ಸಂಗತಿ.

ಈ ಕಲ್ಲಿದ್ದಲು ನಿಕ್ಷೇಪ ಹಂಚಿಕೆ ಮಾಡುವಾಗ ಸ್ವತಃ ಪ್ರಧಾನ ಮಂತ್ರಿಗಳೇ ಈ ಇಲಾಖೆಯ ಉಸ್ತುವಾರಿ ವಹಿಸಿದ್ದರು

ಪುಟ 10ಕ್ಕೆ



ಕೃಪೆ : ದಿ ಹಿಂದು

ಸಿಪಿಐ(ಎಂ) ಕರೆ: ಕಲ್ಲಿದಲು ನಿಕ್ಷೇಪ ಹಂಚಿಕೆ ಹಗರಣವನ್ನು ಸಮಗ್ರ ತನಿಖೆಗೆ ಒಳಪಡಿಸಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೊ ಆಗ್ರಹಿಸಿದ್ದು ಸೆಪ್ಟಂಬರ್ 3 ರಿಂದ 5 ರ ನಡುವೆ ದೇಶಾದ್ಯಂತ ಪ್ರತಿಭಟನೆಗಳನ್ನು ನಡೆಸಲು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುವ ಹೋರಾಟಗಾರರ ಸ್ವಾಗತಕ್ಕೆ ಸಜ್ಜಾಗುತ್ತಿದೆ ನಾಡು - ಮಹಾನಗರ








'ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತೀಕರಣ' ದ ಘೋಷಣೆ ಅಡಿಯಲ್ಲಿ ಸೆಪ್ಟಂಬರ್ 11ರಿಂದ 15ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ






ಡಿ.ವೈ.ಎಫ್. ಐ ನ ಅಖಿಲ ಭಾರತ ಸಮ್ಮೇಳನವನ್ನು ಯಶಸ್ವಿಗೊಳಿಸಲು ರಾಜ್ಯಾದ್ಯಂತ ಭರದ ಸಿದ್ದತೆಗಳು ನಡೆದಿವೆ.

ಬಹಳ ಪ್ರಮುಖವಾಗಿ ಸಮ್ಮೇಳನದ ಸಂದೇಶ ಮತ್ತು ಯುವಜನರಿಗೆ ಸ್ಪೂರ್ತಿ ನೀಡುವ ಹಲವಾರು ಮಹತ್ತರ ವಿಷಯಗಳನ್ನು ಒಳಗೊಂಡ ಆಕರ್ಷಕ , ವರ್ಣರಂಜಿತ ಗೋಡೆ ಬರಹಗಳು ಬೆಂಗಳೂರು ಮಹಾನಗರದಲ್ಲಿ ಮತ್ತು ಪ್ರಮುಖ ಹೆದ್ದಾರಿ, ಹೊರ ವಲಯದಲ್ಲಿ ಬರೆಯಲಾಗುತ್ತಿದೆ. ಸಂಗಾತಿಗಳಾದ ಬರಹಗಾರ, ಕವಿ ಸಿದ್ಧಲಿಂಗಯ್ಯ ಮಾನ್ವಿ, ಗಂಗಾವತಿಯ ಯುವ



ಕಲಾವಿದ ಪ್ರಕಾಶ್ ಮತ್ತಿತರರ ತಂಡ ಹಗಲು ರಾತ್ರಿ ಶ್ರಮಿಸುತ್ತಿವೆ. ಬರಹಗಳು ಜನರ ಗಮನ ಸೆಳೆಯುತ್ತಿವೆ.

ಸಮ್ಮೇಳನ ನಡೆಯಲಿರುವ ಟೌನ್ ಹಾಲ್‌ನ್ನು ಸಿಂಗರಿಸಲು ಮತ್ತು ಬಹಿರಂಗ ಸಭೆಯ ಪ್ರದೇಶವನ್ನು ಸಿದ್ಧಗೊಳಿಸಲು ಉಪಸಮಿತಿ ಕಾರ್ಯಾಚರಿಸುತ್ತಿದೆ. ಅದೇ ರೀತಿ ಅಡಿಗೆ, ಸ್ವಯಂಸೇವಕರು, ವಸತಿ,ಸಾಂಸ್ಕೃತಿಕ, ಜಾಹೀರಾತು, ನಿಧಿ,ಮಾಧ್ಯಮ ಮುಂತಾದ



ಸಮಿತಿಗಳು ತನ್ನದೇ ಸಿದ್ಧತೆಯಲ್ಲಿ ತೊಡಗಿವೆ. ಆಗಸ್ಟ್ 19ರಂದು ನಡೆದ ಸ್ವಯಂಸೇವಕರ ಕಾರ್ಯಾಗಾರ ನಿಜಕ್ಕೂ ಹುರುಪು , ಉತ್ಸಾಹ ತುಂಬಿತು.

ಸಮ್ಮೇಳನದ ನಿಧಿ, ಪ್ರಚಾರ ಮತ್ತು ರ್‍ಯಾಲಿಗೆ ಯುವಜನರನ್ನು ಪಾಲ್ಗೊಳಿಸಲು ಪ್ರತಿ ಜಿಲ್ಲೆಗಳಲ್ಲಿ ಸ್ವಾಗತ ಸಮಿತಿಗಳನ್ನು ರಚಿಸಲಾಗುತ್ತಿದೆ. ವಿಶೇಷವಾಗಿ ಬೆಂಗಳೂರು ಮಹಾ ನಗರದಲ್ಲಿ ಪ್ರದೇಶವಾರು ಸ್ವಾಗತ ಸಮಿತಿಗಳನ್ನು ರಚಿಸಲಾಗುತ್ತಿದೆ.



ಅವುಗಳ ನೇತೃತ್ವದಲ್ಲಿ ನಿಧಿ ಸಂಗ್ರಹಣೆಯನ್ನೂ ಒಳಗೊಂಡು ಎಲ್ಲಾ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ವಿಶೇವಾಗಿ ಆಯಾ ಪ್ರದೇಶದ ಪ್ರಮುಖ ಚಿಂತಕರು, ಸಾಮಾಜಿಕ ಕಾರ್ಯಕರ್ತರು, ಗಣ್ಯರು ಬಾಗವಾಗುತ್ತಿದ್ದಾರಲ್ಲದೇ ದುಡಿಯುವ ವರ್ಗದ ವಿವಿಧ ಸಂಘಗಳು , ನಾಯಕರು, ಕಾರ್ಯಕರ್ತರು ಯುವಜನರಿಗೆ ಬೆಂಬಲದ ಬೆನ್ನೆಲುಬಿನಂತೆ ಶ್ರಮಿಸುತ್ತಿದ್ದಾರೆ.


ಸಮ್ಮೇಳನದ ಹಿನ್ನೆಲೆಯಲ್ಲಿ ಹಲವಾರು ವೈವಿಧ್ಯಮಯ ಚಟುವಟಿಕೆಗಳನ್ನು ಡಿ.ವೈ.ಎಫ್. ಐ ನ ರಾಜ್ಯ ಸಮಿತಿ ಆಯೋಜಿಸಿದೆ. ಈಗಾಗಲೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡ ಬಳ್ಳಾಪುರದಲ್ಲಿ ಬೃಹತ್



ರ್‍ಯಾಲಿಯೊಂದು ನಡೆದಿದೆ. ಅದೇ ರೀತಿ ನಗರದ ಕೇಂದ್ರ ಭಾಗದಿಂದ ಇದೇ ಸೆಪ್ಟಂಬರ್ 1ರಂದು ಬೃಹತ್ ಬೈಕ್ ರ್‍ಯಾಲಿಯು ಟೌನ್ ಹಾಲ್‌ನಿಂದ ನಡೆಯಲಿದೆ. ಆಗಸ್ಟ್ 26ರಂದು ಕೂಡ್ಲುಗೇಟ್ ನಲ್ಲಿಯೂ ಯೋಜಿಸಲಾಗಿದೆ. ಇಂತಹ ಹಲವು ರ್‍ಯಾಲಿಗಳು ರಾಜ್ಯದ ಹಲವೆಡೆ ನಡೆಯಲಿವೆ.

ಇದರ ಭಾಗವಾಗಿಯೇ ಜಿಲ್ಲೆಗಳಲ್ಲಿ ವಿಚಾರ ಸಂಕಿರಣಗಳು ನಡೆಯುತ್ತಿವೆ. ಕೊಡಗು ಜಿಲ್ಲೆಯಲ್ಲಿ ಮಾಧ್ಯಮ, ಜಿಲ್ಲೆಯ ಅಭಿವೃದ್ಧಿ ಪ್ರಶ್ನೆಗಳು, ಲಿಂಗ ತಾರತಮ್ಯ ಮತ್ತು ಸಮಾನತೆ ಸಾಧನೆ, ಕುರಿತ ಯಶಸ್ವಿ ಸಂಕಿರಣ-ಸಂವಾದಗಳು ನಡೆದಿವೆ. ದಕ್ಷಿಣ ಕನ್ನಡ ಜಿಲ್ಲೆಯ . . . . .ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ . . . . .

ಸಮ್ಮೇಳನದ ಮೊದಲ ದಿನ 11ರಂದು ಬೃಹತ್ ಯುವಜನರ ರ್‍ಯಾಲಿಯು ನಡೆಯಲಿದೆ. ಅಂದೇ ಸಂಜೆ 4 ಗಂಟೆಗೆ ಸಮ್ಮೇಳನ ಉದ್ಘಾಟನೆಯಾಗಲಿದೆ. ವಿಶ್ವ ವಿಖ್ಯಾತ ಸಿನಿಮಾ ನಿರ್ದೇಶಕ ಶ್ಯಾಮ್ ಬೆನಗಲ್ ಉದ್ಘಾಟಿಸಲಿದ್ದಾರೆ. ಸಮ್ಮೇಳನದ ಸ್ವಾಗತ ಗೀತೆಯನ್ನು ಸ್ವಾಗತ ಸಮಿತಿ ಅದ್ಯಕ್ಷರಾದ ನಾಡೋಜ ಡಾ, ಬರಗೂರು ರಾಮಚಂದ್ರಪ್ಪ ನವರು ರಚಿಸಲಿದ್ದು ಖ್ಯಾತ ಸಂಗೀತ ನಿರ್ದೇಶಕ ವಿ. ಮನೋಹರ್‌ರವರು ರಾಗ-ಸಂಗೀತ ಅಳವಡಿಸಲಿದ್ದಾರೆ.



ಸಮ್ಮೇಳನ ಜರುಗಲಿರುವ ಪ್ರದೇಶಕ್ಕೆ ಮಹಾ. ಕವಿ, ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ರವೀಂದ್ರನಾಥ ಠ್ಯಾಗೋರ್ ಹೆಸರಿಡಲಾಗಿದೆ. ಬಹಿರಂಗ ಸಭೆ ವೇದಿಕೆಗೆ ಸ್ವಾತಂತ್ರ್ಯ ಸೇನಾನಿ ಕ್ಯಾಪ್ಟನ್ ಲಕ್ಷ್ಮಿ ಸೆಹೆಗಲ್ ವೇದಿಕೆಯೆಂದು ಹೆಸರಿಸಲಾಗಿದೆ. 1000ದಷ್ಟು ಆಯ್ಕೆಯಾದ ಪ್ರತಿನಿಧಿಗಳು, ಸುಮಾರು 20ರಷ್ಟು ವಿದೇಶಿ ಸೌಹಾರ್ದ ಪ್ರತಿನಿಧಿಗಳು, ಮಾಜಿ ಡಿ.ವೈ.ಎಫ್. ಐ ನ ರಾಷ್ಟ್ರೀಯ ನಾಯಕರು ಪಾಲ್ಗೊಳ್ಳಲಿದ್ದಾರೆ.

ಸಮ್ಮೇಳನದ ಧ್ವಜಾರೋಹಣಕ್ಕಾಗಿ ಧ್ವಜ ಜಾಥಾವು ಹುತಾತ್ಮ ಪರಂಪರೆಯಿರುವ ಕಣ್ಣೂರು ನಿಂದ ಸೆ.8 ರಂದು ಆರಂಭಗೊಂಡು ಕೊಡಗು, ಮೈಸೂರು, ಮಂಡ್ಯ, ರಾಮನಗರ ಮೂಲಕ 10ರಂದು ಬೆಂಗಳೂರು ತಲುಪಲಿದೆ.



ಇದು ಕರ್ನಾಟಕದಲ್ಲಿ ಮೊದಲ ಬಾರಿಗೆ ನಡೆಸಲಾಗುತ್ತಿರುವ ಸಮ್ಮೇಳನ. ಐತಿಹಾಸಿಕ ಸಮ್ಮೇಳನ . ಇದರ ಯಶಸ್ವಿಗೆ ಎಲ್ಲಾ ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳು, ವ್ಯಕ್ತಿಗಳು ಸರ್ವ ರೀತಿಯ ಸಹಕಾರ, ನೆರವನ್ನು ನೀಡಬೇಕೆಂದು ಸ್ವಾಗತ ಸಮಿತಿ ಮತ್ತು ಡಿ.ವೈ.ಎಫ್. ಐ ರಾಜ್ಯ ಸಮಿತಿಗಳು ಮನವಿ ಮಾಡಿವೆ.

ಉದಾರ ನಿಧಿಗೆ ಮನವಿ

ಆತ್ಮೀಯರೇ,

ಭಾರತ ದೇಶವನ್ನು ಇತ್ತೀಚಿನ ದಿನಗಳಲ್ಲಿ 'ಯುವ ಭಾರತ' ಎಂದು ಕರೆಯಲಾಗುತಿದೆ. ಇಂದು ಭಾರತದ ಜನಸಂಖ್ಯೆಯಲ್ಲಿ ಶೇ. 52.5 ರಷ್ಟು ಯುವಕ-ಯುವತಿಯರಿದ್ದಾರೆ. ಇಂತಹ ಯುವಜನರಲ್ಲಿ ಅದಮ್ಯ ಚೈತನ್ಯ, ಪ್ರತಿಭೆ, ಉತ್ಸಾಹಗಳು ತುಂಬಿವೆ. ಸಮಾಜದ ಅಭಿವೃದ್ಧಿಯಲ್ಲಿ ಹಾಗೂ ಪರಿವರ್ತನೆಯ ಪ್ರಕ್ರಿಯೆಯಲ್ಲಿ ಸಮರ್ಥವಾಗಿ ಯುವಜನ ತೊಡಗದೆ ಯಾವ ದೇಶವೂ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ. ಆದರೆ ದೇಶದಲ್ಲಿಂದು ಕೋಟಿ-ಕೋಟಿ ಯುವ ಜನರು ನಿರುದ್ಯೋಗ -ಅರೆ ಉದ್ಯೋಗದ ಜ್ವಾಲೆಯಲ್ಲಿ ಬೇಯುತ್ತಿದ್ದಾರೆ. ತೀವ್ರತರ ನಿರುದ್ಯೋಗದಿಂದ ಯುವಜನತೆಯ ಬದುಕು ಚಿಂತಾಜನಕವಾಗಿದೆ.

ಇಂತಹ ಹಲವು ಪ್ರಶ್ನೆಗಳ ಹಿನ್ನೆಲೆಯಲ್ಲಿ ಯುವಜನ ಆಂದೋಲನವನ್ನು ಇನ್ನಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ ಚರ್ಚಿಸಿ, ಸೂಕ್ತ ಮಾರ್ಗೋಪಾಯಗಳನ್ನು ರೂಪಿಸಲು, ಡಿವೈಎಫ್ಐ 9ನೇ ಅಖಿಲ ಭಾರತ ಸಮ್ಮೇಳನವನ್ನು ಬೆಂಗಳೂರಿನಲ್ಲಿ 2012, ಸೆಪ್ಟೆಂಬರ್ 11 ರಿಂದ 15ರವರೆಗೆ ನಡೆಯಲಿದೆ. ವಿವಿಧ ದೇಶಗಳ ಗಣನೀಯ ಸಂಖ್ಯೆಯ ವಿದೇಶಿ ಪ್ರತಿನಿಧಿಗಳು ಪಾಲ್ಗೊಳ್ಳುವ ಈ ಸಮ್ಮೇಳನಕ್ಕೆ ಸುಮಾರು 75 ಲಕ್ಷ ರೂಪಾಯಿಗಳು ವೆಚ್ಚವಾಗಲಿದೆ ಎಂಬ ಅಂದಾಜಿದೆ. ಯುವಜನ ಚಳುವಳಿಯ ಹಿತೈಷಿಗಳು, ಉದಾರ ಧನ ಸಹಾಯ ಮಾಡಿ ಸಮ್ಮೇಳನದಯಶಸ್ಸಿಗೆ ಸಹಕರಿಸಬೇಕೆಂದು ವಿನಂತಿ, ಕೊಡುಗೆಯ ವಿವರಗಳನ್ನು ಜನಶಕ್ತಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಮತ್ತೆ ಮೂರು ಸಿಎಜಿ ವರದಿಗಳು: ದೇಶದ ಬೊಕ್ಕಸದ ನಷ್ಟಕ್ಕೆ ಇನ್ನಷ್ಟು 'ಸೊನ್ನೆಗಳು'!

ಪುಟ 8 ರಿಂದ


ಎಂಬುದು ಇನ್ನೊಂದು ಗಮನಾರ್ಹ ಸಂಗತಿ. ಕಲ್ಲಿದ್ದಲು ನಿಕ್ಷೇಪಗಳ ಹಂಚಿಕೆಯನ್ನು ಸರಕಾರೀ ಸಂಸ್ಥೆಗಳ ಅಗತ್ಯಗಳನ್ನು ಪೂರೈಸುವಂತೆ ಮತ್ತು ಒಂದು ಪಾರದರ್ಶಕ ಹಾಗೂ ವಸ್ತುನಿಷ್ಟ ಸ್ಪರ್ಧಾತ್ಮಕ ಹರಾಜಿನ ಮೂಲಕ ನಡೆಯುವಂತೆ ಮಾಡಬೇಕು. ತೈಲ ನಿಕ್ಷೇಪಗಳನ್ನು ಇವೆರಡೂ ಗುರಿ ಸಾಧಿಸುವಂತಹ ಅನುಪಾತದಲ್ಲಿ ಹಂಚಬೇಕು ಎಂದು ಸಿಪಿಐ(ಎಂ) ಸೂಚಿಸಿತ್ತು. ಆದರೆ ಸರಕಾರ ಇದರತ್ತ ಗಮನ ನೀಡಲು ನಿರಾಕರಿಸಿದ್ದರಿಂದಾಗಿ ಸಿಎಜಿ ಈಗ ಗಮನಿಸಿರುವ ಅಕ್ರಮಗಳು ನಡೆದಿವೆ. ದಿಲ್ಲಿ ವಿಮಾನ ನಿಲ್ದಾಣ ಹಗರಣದಲ್ಲಿ ಕಾನೂನುಗಳ ಗಂಭೀರ ಉಲ್ಲಂಘನೆ ಕುರಿತು ಒಂದು ವರ್ಷದ ಹಿಂದೆಯೇ ಸಿಪಿಐ(ಎಂ) ಸಂಸತ್ ಸದಸ್ಯರು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದ್ದರು. ಆದರೂ ಈ ತಪ್ಪುಗಳನ್ನು ಸರಿಪಡಿಸಲು ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ. ಆದ್ದರಿಂದ ಈಗ ದೇಶದ ಮಹಾ ಲೆಕ್ಕ ಪರಿಶೋಧಕರೇ ಈ ಉಲ್ಲಂಘನೆಗಳನ್ನು ಗಮನಿಸಿರುವಾಗ ಇವೆಲ್ಲಕ್ಕೂ ಪ್ರಧಾನಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ, ಅಪಾರ ಸಂಪನ್ಮೂಲಗಳ ಖಾಸಗಿ ಲಾಭಕ್ಕೆ ಅವಕಾಶ ಮಾಡಿಕೊಟ್ಟವರನ್ನು ಗುರುತಿಸಿ ಶಿಕ್ಷಿಸಬೇಕಾಗಿದೆ ಮತ್ತು ಭವಿಷ್ಯದಲ್ಲಿ ಇಂತಹ ಗಂಭೀರ ಉಲ್ಲಂಘನೆಗಳು ನಡೆಯದಂತೆ ಕಟ್ಟುನಿಟ್ಟಾದ ಉಸ್ತುವಾರಿ ಕ್ರಮಗಳು ಮತ್ತು ಮಾರ್ಗನಿರ್ದೇಶನಗಳನ್ನು ಸಂಸತ್ತಿನ ಮಂಜೂರಾತಿ ಯೊಂದಿಗೆ ಪ್ರಕಟಿಸಬೇಕಾಗುತ್ತದೆ ಎಂದು ಸಿಪಿಐ(ಎಂ) ಆಗ್ರಹಿಸಿದೆ.

"ಬರಿದೇ ಸೊನ್ನೆಗಳಲ್ಲ, ಸ್ವಾಮಿ!"

ಆದರೆ ಆಳುವ ಯುಪಿಎ–2 ಕೂಟದ ಮತ್ತು ಅದರ ಸರಕಾರದ ವಕ್ತಾರರುಗಳ, ಅದರಲ್ಲೂ ಕಾಂಗ್ರೆಸ್ ಪಕ್ಷದ ಹೇಳಿಕೆಗಳಲ್ಲಿ ದೇಶಕ್ಕೆ ಅಗಾಧ ನಷ್ಟ ಉಂಟು ಮಾಡಿದ ಈ ಅಕ್ರಮಗಳ ಬಗ್ಗೆ ಬೇಸರದ ಮಾತಿರಲಿ, ಇವನ್ನೆಲ್ಲ ಸರಕಾರದ ಗಮನಕ್ಕೆ ತಂದಿರುವ ಸಿಎಜಿಯ ಮೇಲೆಯೇ ಹರಿ ಹಾಯುವ ಹೀನ ಪ್ರವೃತ್ತಿ ಕಾಣ ಬರುತ್ತಿದೆ. ಸಿಎಜಿ ಸಂವಿಧಾನ ತನಗೆ ವಿಧಿಸಿರುವ ಕರ್ತವ್ಯದ 'ಲಕ್ಷ್ಮಣ ರೇಖೆ'ಯನ್ನು ದಾಟಿ ಸುಮ್ಮನೇ ಸೊನ್ನೆಗಳನ್ನು ಸೇರಿಸುವ ಹವ್ಯಾಸ ಬೆಳೆಸಿಕೊಂಡಿದೆ, ಇಲ್ಲಿ ಅಕ್ರಮಗಳು ಎಂಬುದು ಏನೇನೂ ನಡೆದಿಲ್ಲ ಎಂಬ ಮಟ್ಟಕ್ಕೆ ಕಾಂಗ್ರೆಸಿನ ವಕ್ತಾರರ ಹೇಳಿಕೆ ಇಳಿದಿದೆ. ಯುಪಿಎ–2 ಸರಕಾರದ ಕಲ್ಲಿದ್ದಲು, ಸಿಬ್ಬಂದಿ ಮಂತ್ರಿಗಳು ಅದೇ ಧಾಟಿಯಲ್ಲಿ ಮಾತಾಡುತ್ತಿದ್ದಾರೆ.

ಪಾಪ, ಕಾರ್ಪೊರೇಟ್ ಮತ್ತು ಕಾನೂನು ಮಂತ್ರಿಗಳಿಗೆ ಪ್ರಧಾನ ಮಂತ್ರಿಗಳ ವ್ಯಕ್ತಿತ್ವದ ಸಮಗ್ರತೆ ಈ ಮೂಲಕ ಪ್ರಶ್ನಾರ್ಹವಾಗಿರುವುದಕ್ಕೆ ಬೇಸರ, ದೇಶಬಾಂಧವರು ತಮ್ಮ ಸರಕಾರದ ನಿರ್ಧಾರಗಳನ್ನು ಅರ್ಥ ಮಾಡಿಕೊಳ್ಳುವಷ್ಟು 'ಪ್ರೌಢತೆ' ಬೆಳೆಸಿಕೊಂಡಿಲ್ಲ ಎಂಬ ಬೇಸರ, ಅಷ್ಟೇ! ಸಿಎಜಿ ಯಂತಹ ಸಂವಿಧಾನ ನೇಮಿಸಿದ 'ಕಾವಲು ನಾಯಿ'ಗಳು ಕಳ್ಳರನ್ನು ಕಂಡರೆ ಬೊಗಳಬಾರದು, ಇಲ್ಲಿ ಬೊಗಳುವುದೇನು, ಕಚ್ಚಲಿಕ್ಕೇ ಬಂದಿದೆ ಎಂಬ ಬೇಸರ ಅವರದು!

ಆದರೆ ತಾವು 'ಲಕ್ಷ್ಮಣ ರೇಖೆ' ದಾಟಿಲ್ಲ, ಇವು ಬರಿದೇ ಸೊನ್ನೆಗಳಲ್ಲ, ಇವು ಆಳ್ವಿಕೆಯ ವೈಫಲ್ಯದ ಕೆಂಪು ಪತಾಕೆಗಳಷ್ಟೇ ಎಂದಿರುವ ಸಿಎಜಿಯ ಹಿರಿಯ ಅಧಿಕಾರಿಗಳು ಈ ಹಿಂದೆ 2ಜಿ ತರಂಗಾಂತರ ಹಂಚಿಕೆಯಲ್ಲಿ ತಮ್ಮ ಲೆಕ್ಕಾಚಾರವನ್ನು ಸಮರ್ಥಿಸಿಕೊಂಡಂತೆ ಈ ಬಾರಿಯೂ ತಮ್ಮ ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಅವರ 2ಜಿ ತರಂಗಾಂತರದ ಲೆಕ್ಕಾಚಾರಗಳನ್ನು ಇದೇ ಯುಪಿಎ ಸರಕಾರ ಹೇಗೆ ಪರೋಕ್ಷವಾಗಿಯಾದರೂ ಒಪ್ಪಿಕೊಂಡಿದೆ ಎಂಬುದನ್ನು ಈ ಅಂಕಣದಲ್ಲಿ ಕೆಲವು ವಾರಗಳ ಹಿಂದೆ ಗಮನಿಸಿದ್ದೇವೆ.



ಈ ಮಹಾಹಗರಣದಿಂದ ನುಣಿಚಿಕೊಳ್ಳಲು ಸಿಎಜಿ ಮೇಲೆಯೇ ದಾಳಿ ಮಾಡುವ ಯುಪಿಎ ತಂತ್ರ ಯಾವ ಮಟ್ಟ ತಲುಪಿದೆಯೆಂದರೆ, ಸಿಎಜಿಯ ಹಿರಿಯ ಅಧಿಕಾರಿಗಳು ಪತ್ರಿಕಾ ಸಮ್ಮೇಳನದಲ್ಲಿ ಸ್ಪಷ್ಟೀಕರಣ ನೀಡಬೇಕಾಗಿ ಬಂದಿದೆ. "ನಮ್ಮ ವರದಿಗಳಲ್ಲಿ ಎಲ್ಲಿಯೂ ಸರಕಾರದ ಧೋರಣೆಗಳನ್ನು ಪ್ರಶ್ನಿಸಿಲ್ಲ, ಅವುಗಳ ಅನುಷ್ಠಾನದಲ್ಲಿನ ಲೋಪಗಳ ಬಗ್ಗೆಯಷ್ಟೇ ಮಾತಾಡಿದ್ದೇವೆ" ಎಂದು ಸಿಎಜಿಯ ಪ್ರಮುಖರಲ್ಲಿ ಒಬ್ಬರು ಹೇಳಿದ್ದಾರೆ.

ನಾವೆಲ್ಲಿ ಸಂವಿಧಾನ ಬದ್ಧ ಮೇರೆಗಳನ್ನು ಮೀರಿದ್ದೇವೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಿ ಎಂದು ಸಿಎಜಿ ಹಿರಿಯ ಅಧಿಕಾರಿಗಳು ಸರಕಾರಕ್ಕೆ ಸವಾಲು ಹಾಕಿರುವುದಾಗಿ ವರದಿಯಾಗಿದೆ. ಲೋಪ ಇದೆಯೇ ಎಂದು ಗುರುತಿಸುವುದು ಸಿಎಜಿಯ ಮೂಲ ಹೊಣೆಗಾರಿಕೆಯಾದ್ದರಿಂದ ಅದು ತನ್ನ ಅಧಿಕಾರದ ಗಡಿಗಳನ್ನು ದಾಟಿದೆ ಎಂದು ತನಗನಿಸುವುದಿಲ್ಲ ಎಂದು ಕಳೆದ ವರ್ಷವಷ್ಟೇ ಆಗಿನ ಯುಪಿಎ ಹಣಕಾಸು ಮಂತ್ರಿಗಳು ಆರ್ಥಿಕ ಪತ್ರಿಕೆಗಳ ಸಂಪಾದಕರ ಸಭೆಯಲ್ಲಿ ಹೇಳಿದ್ದರು ಎಂಬುದನ್ನು ಅವರು ನೆನಪಿಸಿದ್ದಾರೆ. ಇದರ ಹಿಂದೆ 2006ರಲ್ಲೂ ಹಣಕಾಸು ಇಲಾಖೆ ಸರಕಾರದ ಎಲ್ಲ ಇಲಾಖೆಗಳಿಗೂ ಕಳಿಸಿದ ಸುತ್ತೋಲೆಯಲ್ಲಿ ಲೆಕ್ಕಪರಿಶೋಧನೆಯ ವ್ಯಾಪ್ತಿಯನ್ನು ನಿರ್ಧರಿಸುವ ಅಸೀಮಿತ ಅಧಿಕಾರ ಸಿಎಜಿಗೆ ಇದೆ ಎಂಬ ಸ್ಪಷ್ಟೀಕರಣವನ್ನು ನೀಡುತ್ತಾ ಅವರು ಕೇಳುವ ದಾಖಲೆಗಳನ್ನೆಲ್ಲ ಒದಗಿಸಬೇಕು ಎಂದು ಹೇಳಲಾಗಿತ್ತು. ಯಾವ ಕೇಂದ್ರ ಸರಕಾರದ ಇಲಾಖೆಯೂ, ಅಥವ ಯಾವುದೇ ರಾಜ್ಯ ಸರಕಾರ ತಮ್ಮ ಧೋರಣೆಗಳನ್ನು ಸಿಎಜಿ ಪ್ರಶ್ನಿಸಿರುವ ಬಗ್ಗೆ ಇದುವರೆಗೆ ಟಿಪ್ಪಣಿ ಮಾಡದಿರುವಾಗ ಇಂತಹ ಟೀಕೆಗಳು ಏಕೆ ಎಂಬುದು ಅವರ ಪ್ರಶ್ನೆ.

"ಬೊಕ್ಕಸಕ್ಕೆ ಆಗಿರುವ ನಷ್ಟಗಳ ಕುರಿತ ನಮ್ಮ ಅಂಕೆ-ಸಂಖ್ಯೆಗಳಿಗೆ ಬಂದಿರುವ ಹಿಂಸಾತ್ಮಕ ವಿರೋಧ ಆಶ್ಚರ್ಯಕಾರಿ. ಏಕೆಂದರೆ, ಇವೆಲ್ಲ ಸರಕಾರದ ದಸ್ತಾವೇಜುಗಳಿಂದ ಮತ್ತು ಸಾರ್ವಜನಿಕವಾಗಿರುವ ಮಾಹಿತಿಗಳಿಂದಲೇ ಕಲೆ ಹಾಕಿರುವವುಗಳು, ಯಾರದ್ದೋ ಕಾಲ್ಪನಿಕ ಸಂಖ್ಯೆಗಳಲ್ಲ" ಎಂದು ಒಬ್ಬ ಅಧಿಕಾರ ವಿವರಿಸಿದ್ದಾರೆ.

ಹರಾಜು ಪ್ರಕ್ರಿಯೆಯ ಮೂಲಕ ಕಲ್ಲಿದ್ದಲು ನಿಕ್ಷೇಪಗಳ ಹಂಚಿಕೆಯ ಮಾತು ಸರಕಾರದ ಧೋರಣೆಯಲ್ಲಿನ ಹಸ್ತಕ್ಷೇಪ ಅಲ್ಲ, ವಾಸ್ತವವಾಗಿ ಇದನ್ನು ಮೇ 2004ರಲ್ಲಿ ಶಿಫಾರಸು ಮಾಡಿದ್ದು ಸರಕಾರದ ಕಲ್ಲಿದ್ದಲು ಕಾರ್ಯದರ್ಶಿಯೇ ! ಒಂದು ಆಯ್ಕೆ ಸಮಿತಿ ಹಂಚಿಕೆ ಮಾಡುವುದು ಅಪಾರದರ್ಶಕವಾಗಿದ್ದು ಇದರಿಂದ ವಶೀಲಿಬಾಜಿಗೆ, ಹಂಚಿಕೆ ಪಡೆದವರು ಅನಿರೀಕ್ಷಿತ ಲಾಭ ಗಿಟ್ಟಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿದವರು ಆ ಹಿರಿಯ ಸರಕಾರೀ ಅಧಿಕಾರಿಯೇ ವಿನಹ ಸಿಎಜಿ ವರದಿಯಲ್ಲ ಎಂದು ಕೂಡ ಸಿಎಜಿ ಅಧಿಕಾರಿಗಳು ನೆನಪಿಸುತ್ತಾರೆ. 2ಜಿ ಹಂಚಿಕೆಯಲ್ಲೂ ಹರಾಜು ಪ್ರಕ್ರಿಯೆಯ ಸಲಹೆ ನೀಡಿದ್ದು ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು. ಅವರ ದೂರಸಂಪರ್ಕ ಮಂತ್ರಿಗಳು ಅದನ್ನು ಉಪೇಕ್ಷಿಸಿದರು.

ಈ ಎರಡೂ ಸಂದರ್ಭಗಳಲ್ಲಿ ಹರಾಜು ವಿಧಾನ ಕಾರ್ಯಸಾಧ್ಯವಾಗಿತ್ತು, ಮತ್ತು ಈ ಸಲಹೆ ಸರಕಾರದಿಂದಲೇ ಬಂದಿತ್ತು, ಸಿಎಜಿಯ ಕಡೆಯಿಂದಲ್ಲ ಎಂಬುದನ್ನು ಅವರು ಒತ್ತಿ ಹೇಳುತ್ತಾರೆ.

ಸರಕಾರೀ ಲೆಕ್ಕ ಪರಿಶೋಧಕರು 'ಚಮಚಾ ಬಂಡವಾಳಶಾಹಿ'ಯ ವ್ಯವಹಾರಗಳನ್ನು ಕೊನೆಗೊಳಿಸುವ ಆಶಯದಿಂದ ಕೆಲಸ ಮಾಡುತ್ತಾರೆ, ತಮ್ಮ ವರದಿಗಳಲ್ಲಿನ ಅಂಕಿ-ಅಂಶಗಳೆಲ್ಲವೂ ಆಳ್ವಿಕೆಯ ವಿಫಲತೆಯ ಅಪಾಯವನ್ನು ಸೂಚಿಸುವ ಕೆಂಪು ಪತಾಕೆಗಳು, ಸರಕಾರ ಇದಕ್ಕೆ ಹೊಣೆಗಾರರು ಯಾರು ಎಂದು ನಿರ್ದಿಷ್ಟ ಪಡಿಸಬೇಕಲ್ಲದೆ, ಆಗಿರುವ ನಷ್ಟದ ಅಂಕಿ-ಅಂಶಗಳ ಬಗ್ಗೆ ಕುತರ್ಕಗಳಿಗೆ ಇಳಿಯುವುದಲ್ಲ ಎಂದು ಸಿಎಜಿ ಹಿರಿಯ ಅಧಿಕಾರಿಗಳು ಸಾಕಷ್ಟು ನಿಷ್ಠುರವಾಗಿಯೇ ಹೇಳಿರುವುದಾಗಿ ವರದಿಯಾಗಿದೆ. "ಪ್ರತಿಯೊಂದು ವಲಯದಲ್ಲೂ ಆಳ್ವಿಕೆಯ ವೈಫಲ್ಯ ಸಾಮಾನ್ಯವಾಗಿದೆ, ಇದರಿಂದಾಗಿ ಸರಕಾರದ ಬಗ್ಗೆ ಸದಭಿಪ್ರಾಯ ಬರುವಂತೆ ವರದಿಗಳನ್ನು ರೂಪಿಸುವುದು ನಮಗೆ ಸುಮಾರಾಗಿ ಅಸಾಧ್ಯವೆಂದೇ ಹೇಳಬೇಕು" ಎಂಬ ಅವರ ಉದ್ಗಾರ ಈ ಸರಕಾರದ ಸ್ವರೂಪದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ●

ಪುಟ 7 ರಿಂದ

ತಂಡಗಳನ್ನು ಪಕ್ಷದ ವತಿಯಿಂದ ರಾಜ್ಯ ಪ್ರವಾಸಕ್ಕೆ ಕಳುಹಿಸಲು ನಿರ್ಧರಿಸಿರುವುದು ಯಡಿಯೂರಪ್ಪ ಅವರಲ್ಲಿ ತೀವ್ರ ಅಸಮಾಧಾನ ಮೂಡಿಸಿದೆ. ತನ್ನ ಅಸಮಾಧಾನವನ್ನು ಮನಸ್ಸಿನಲ್ಲಿ ಹಿಡಿದಿಟ್ಟುಕೊಳ್ಳುವ ಜಾಯಮಾನದವರಲ್ಲ ಯಡಿಯೂರಪ್ಪ. ಇತ್ತ ಸರ್ಕಾರದಲ್ಲಿ ಯಡಿಯೂರಪ್ಪ ಬೆಂಬಲಿಗರಿಗೆ ಸ್ಥಾನಮಾನಗಳನ್ನು ನೀಡುತ್ತಿರುವ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಕ್ರಮಗಳಿಂದ ಸದಾನಂದಗೌಡರ ಬೆಂಬಲಿಗರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ ಎನ್ನಲಾಗುತ್ತಿದೆ. ಖಾತೆ ಮರು ಹಂಚಿಕೆಯ ಭರವಸೆ ನೀಡಿದ್ದ ಶೆಟ್ಟರ್ ತಿಂಗಳು ಕಳೆದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ಕುರಿತು ಸದಾನಂದಗೌಡ ಬಣದ ಬೆಂಬಲಿಗರು ಸಭೆ ಸೇರಲು ಆಲೋಚಿಸುತ್ತಿದ್ದಾರೆ. ಬರ ಎದುರಿಸಲು ಸಮರೋಪಾದಿಯಲ್ಲಿ ಕೆಲಸಕ್ಕೆ ತೊಡಗುವುದನ್ನು ಬಿಟ್ಟು ಪರಸ್ಪರ ವಾಕ್ಸಮರ, ಆರೋಪ ಪ್ರತ್ಯಾರೋಪಗಳಿಗೆ ತ್ರಿಮೂರ್ತಿ ತಂಡಗಳ ಪ್ರವಾಸ ಮತ್ತೊಂದು ವೇದಿಕೆಯಾಗಬಹುದಷ್ಟೇ. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿಯಲ್ಲಿ ಬಣ ರಾಜಕೀಯ ಮತ್ತೆ ತೀವ್ರಗೊಳ್ಳುವ ಎಲ್ಲಾ ಲಕ್ಷಣಗಳು ಗೋಚರಿಸುತ್ತವೆ. ಬರ ನಿರ್ವಹಣೆಯ ವಿಷಯದಲ್ಲಾಗಲಿ, ಪಕ್ಷದ ಸಂಘಟನೆಯನ್ನು ಬಲಪಡಿಸುವ ವಿಷಯದಲ್ಲಾಗಲಿ ರಾಜ್ಯ ನಾಯಕರಲ್ಲಿ ಒಮ್ಮತ ಇಲ್ಲದಿರುವುದರಿಂದ ಬಿಜೆಪಿಯನ್ನು ಉಳಿಸಲು ಯಾರಿಂದಲೂ ಸಾಧ್ಯವಿಲ್ಲ.

–ನಿತ್ಯಾನಂದಸ್ವಾಮಿ

ಬಿಬಿಎಂಪಿ ಮೇಯರು, ಉಪ ಮೇಯರು, ಆಯುಕ್ತರು ಮುಂತಾದವರ ಕಣ್ಣು ಮೂಗುಗಳು ಮುಷ್ಕರ ಮಾಡುತ್ತಿವೆಯೇ ?

ಬೆಂಗಳೂರಿನಲ್ಲಿ ಯಾವ ರಸ್ತೆಯಲ್ಲಿ ನೋಡಿದರೂ ಕಸದ ರಾಶಿ. ಯಾವ ಮೂಲೆಯಲ್ಲಿ ನೋಡಿದರೂ ಕೊಳೆತು ನಾರುವ ತ್ಯಾಜ್ಯ ಪದಾರ್ಥಗಳ ಗುಡ್ಡ. ಜನ ಮೂಗು ಮುಚ್ಚಿಕೊಂಡು, ಬಾಯಿಗೆ ಬಟ್ಟೆ ಕಟ್ಟಿಕೊಂಡು ಓಡಾಡುತ್ತಾರೆ. ಬಿಬಿಎಂಪಿ ಸಿಬ್ಬಂದಿ ಮುಷ್ಕರ ಮಾಡಿದ್ದರಿಂದ ಹೀಗಾಗಿದೆ ಅಂತ ಯಾರಾದರೂ ಹೊರಗಿನವರು ಭಾವಿಸಬಹುದು. ವಾಸ್ತವ ಹಾಗೇನೂ ಇಲ್ಲ. ಬಿಬಿಎಂಪಿ ಸಿಬ್ಬಂದಿ ಮುಷ್ಕರ ಮಾಡುವುದಕ್ಕೂ ಸಾಕಷ್ಟು ಮುಂಚಿನಿಂದಲೂ ಪರಿಸ್ಥಿತಿ ಹಾಗೇ ಇದೆ. ಸಿಬ್ಬಂದಿ ಮುಷ್ಕರ ನಡೆಸಿದ ಅವಧಿಯಲ್ಲಿ ಸಮಸ್ಯೆ ಅತಿರೇಕಕ್ಕೆ ಹೋದದ್ದು ಈಗ 'ಸಹಜ ಸ್ಥಿತಿ'ಗೆ ಬಂದಿದೆ. ಅಂದರೆ ರಸ್ತೆಯ ತುಂಬಾ ಗಬ್ಬೆದ್ದು ನಾರುವ ಕಸದ ರಾಶಿ ಎಂಬುದು ಈಗೀಗ ಬೆಂಗಳೂರಿನ 'ಸಹಜ ಸ್ಥಿತಿ' ಎಂಬಂತಾಗಿದೆ.




ಇಂತಹ ಹೊತ್ತಲ್ಲಿ ಸಾಂಕ್ರಾಮಿಕ ರೋಗ ರುಜಿನಗಳು, ಸೋಂಕುಗಳು ಬೆಂಗಳೂರಿನ ಜನರ ಜೀವ ಹಿಂಡುತ್ತಿವೆ. ಯಾವ ತಪ್ಪು ಮಾಡದ ಜನರ ಜೀವಗಳನ್ನೇ ಬಲಿ ತೆಗೆದುಕೊಳ್ಳುತ್ತಿವೆ.

ಬೆಂಗಳೂರಿನ ಹಲವು ನಾಗರೀಕ ಅಗತ್ಯಗಳ ಪೂರೈಕೆಗಾಗಿ 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ' ಅಂತ ಒಂದು ಇದೆ. ಅದಕ್ಕೆ ಅದರದ್ದೇ ಆದ ಅಧಿಕಾರಿ ವರ್ಗ, ನೌಕರರರು, ಸಿಬ್ಬಂದಿ ಎಲ್ಲಾ ಇದ್ದಾರೆ. ಇದಕ್ಕಾಗಿ ಚುನಾಯಿತ ಮಹಾನಗರ ಪಾಲಿಕೆ ಇದೆ. (ಗೆದ್ದ ಪಕ್ಷದ ತಂತ್ರಗಾರಿಕೆ-ವರಸೆ ಏನೇ ಇರಲಿ) ಜನ ಬಿಜೆಪಿ ಪಕ್ಷವನ್ನು ಪಾಲಿಕೆಯನ್ನು ನಿರ್ವಹಿಸಲು ಆಯ್ಕೆ ಮಾಡಿದ್ದಾರೆ. ಈ ಪಾಲಿಕೆಗೊಬ್ಬರು ಮೇಯರು ಹಾಗೂ ಉಪ ಮೇಯರು ಎಂಬೆಲ್ಲಾ ಚುನಾಯಿತ ಜನ ಪ್ರತಿನಿಧಿಗಳಿದ್ದಾರೆ.

ಪ್ರತಿನಿತ್ಯ ನಗರದಲ್ಲಿ ಉತ್ಪಾದನೆಯಾಗುವ ಕಸದ ರಾಶಿಯನ್ನು ಹೊರ ಸಾಗಿಸಿ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ಒಂದು ವ್ಯವಸ್ಥೆ ಇದೆ. ಅದಕ್ಕಾಗಿ ಜನರ ತೆರಿಗೆ ಹಣದಲ್ಲಿ ವರ್ಷಕ್ಕೆ ಸು. 350 ಕೋಟಿ ರೂಪಾಯಿಗಳು ಖರ್ಚಾಗುತ್ತಾ ಬರುತ್ತಿವೆ. ಗುತ್ತಿಗೆದಾರ ಖಾಸಗಿ ಸಂಸ್ಥೆಗಳು ಈ ಕಸ ನಿರ್ವಹಣೆ ವಿಲೇವಾರಿ ಕೆಲಸದ ಗುತ್ತಿಗೆ ಪಡೆದುಕೊಂಡು ತನ್ನ ಸಿಬ್ಬಂದಿಗಳಿಗೆ ಆರೋಗ್ಯ ರಕ್ಷಣೆಗೆ ಅಗತ್ಯವಾದ ಕನಿಷ್ಟ ವ್ಯವಸ್ಥೆಗಳನ್ನೂ ಮಾಡದೇ- ಪೂರ್ಣ ವೇತನವನ್ನೂ ಕೊಡದೇ ವಂಚಿಸುವುದು ನಡೆದೇ ಇದೆ. ಇವೆಲ್ಲಾ ದುಡಿಯುವ ಜನರ ಬದುಕಿನ ಬಗೆಗೆ ಕಾಳಜಿ ಪೂರಕವಾಗಿ ಯೋಚಿಸಿದರೆ ಮಾತ್ರ ಕಾಣುವ ಸಮಾಚಾರ. ಆದರೆ ಹಾದಿ ಬೀದಿಯಲ್ಲಿ ಎಲ್ಲೆಲ್ಲೂ ಚೆಲ್ಲಾಡುತ್ತಿರುವ ಕೊಳೆತ ಕಸದ ರಾಶಿ ಈ ಜನರ ಕಣ್ಣಿಗೆ ಕಾಣುವುದಿಲ್ಲವೇ? ಸರಿಯಾಗಿ ಕಸ ಬಳಿಯುವ ಬದಲು ನೂರಾರು ಕೋಟಿ ರೂಪಾಯಿಗಳನ್ನು ಬಳಿದುಕೊಂಡು ಮುಕ್ಕುತ್ತಿರುವ ಕಸ ವಿಲೇವಾರಿ ಗುತ್ತಿಗೆದಾರರ ಜೊತೆ ಸೇರಿ ಇವರೂ ಕಸ ಮುಕ್ಕಲು ಕುಳಿತು ಬಿಟ್ಟಿದ್ದಾರೆಯೇ ? ಅಥವಾ ಬಿಬಿಎಂಪಿ ಸಿಬ್ಬಂದಿ ಮುಷ್ಕರ ಮಾಡಿದಂತೆ ಮೇಯರು, ಉಪ ಮೇಯರು, ಆಯುಕ್ತರು, ಬೆಂಗಳೂರಿನಿಂದ ಆಯ್ಕೆಯಾಗಿರುವ ಬಿಜೆಪಿಯ ಪಾಲಿಕೆ ಸದಸ್ಯರು ಶಾಸಕರು, ಸಚಿವರು, ಸಂಸದರು ಮುಂತಾದವರು ಕಣ್ಣು-ಮೂಗುಗಳು, ಪಂಚೇಂದ್ರಿಯಗಳು ಕೆಲಸ ಮಾಡುವುದನ್ನು ನಿಲ್ಲಿಸಿ ಮುಷ್ಕರವನ್ನೇನಾದರೂ ಮಾಡುತ್ತಿವೆಯೇ? ಕಸ ವಿಲೇವಾರಿ ಮಾಡಬೇಕಾದ ಜನರ ಕಿವಿ ಹಿಂಡಿ ಕಸ ಬಳಿಸುವ ಕೆಲಸ ಬಿಟ್ಟು ಮತ್ತಾವ ಘನಾಂದಾರಿ ಕೆಲಸ ಇದೆಯೋ ಈ ಮಹಾನುಭಾವರಿಗೆ !!


ಇಲ್ಲಿ ಏನು ನಡೆದಿದಿಯೋ ? ಆಹಾ !! ಬಿಜೆಪಿ ಪಾಲಿಕೆಯ ಆಡಳಿತದ ಸೊಗಸೇ !!!

ಕಸ ವಿಲೇವಾರಿಗೆ ಜಾಗವಿಲ್ಲ. ತ್ಯಾಜ್ಯ ವರ್ಗೀಕರಣ ಘಟಕಗಳ ಸುತ್ತ ಮುತ್ತಲ ಜನರು ಒಪ್ಪುತ್ತಿಲ್ಲ ಎಂಬುದೆಲ್ಲ ಹಳೇ ಸಮಸ್ಯೆಗಳು. ಆಗಸ್ಟ್ 23ರಂದು ಪೋಲಿಸ್ ಪಡೆಯ ಒತ್ತಡ ಮತ್ತು ಗ್ರಾಮಸ್ಥರ ನಡುವಿನ ವಾಗ್ವಾದ, ಉದ್ವೇಗದಲ್ಲಿ ಯುವಕನೊಬ್ಬನ ಪ್ರಾಣ ಹೋಗಿರುವುದು ನಿಜಕ್ಕೂ ದುರಂತ. ರಾಜ್ಯದಲ್ಲಿ ಬಿಜೆಪಿ ಸರ್ಕಾರದ್ದೇ ಆಡಳಿತವಿದೆ. ಅದರ ಸಹಕಾರ ಪಡೆದು ಪಾಲಿಕೆಯು ಎಂದೋ ಈ ಸಮಸ್ಯೆಯನ್ನು ಬಗೆ ಹರಿಸುವುದು ಸಾಧ್ಯವಾಗಬೇಕಿತ್ತು. ಆದರೆ ಬಿಬಿಎಂಪಿ ಈಗ ಕಸ ವಿಲೇವಾರಿಯ ಸಮಸ್ಯೆಗೆ ಕಂಡುಕೊಂಡಿರುವ ಕಾರಣವೇ ಬೇರೆ. ಕಸ ವಿಲೇವಾರಿಯ ಶುಲ್ಕ ವಸೂಲಾಗುವುದು ಸಾಲುತ್ತಿಲ್ಲ ಎಂದು ಸಾರ್ವಜನಿಕರಿಂದ ವಸೂಲಿ ಮಾಡಲಾಗುವ ಶುಲ್ಕವನ್ನು ಹೆಚ್ಚಿಸಲು ಪಾಲಿಕೆ ಹೊರಟಿದೆ. ಅದೂ ಎಷ್ಟು ? ಶೇ. 100 ರಷ್ಟು. 30*40 ಅಡಿ ಅಳತೆ ನಿವೇಶನದ ಕಟ್ಟಡದಾರರಿಗೆ ಈಗಿರುವ ಮಾಸಿಕ ಶುಲ್ಕ 30.00 ವನ್ನು 60.00 ರೂಪಾಯಿಗೆ ಏರಿಸಲು ಪಾಲಿಕೆ ತುದಿಗಾಲ ಮೇಲೆ ನಿಂತಿದೆ. ಒಟ್ಟಿನಲ್ಲಿ ಜನರಿಗೆ ಬರೆ ಹಾಕಬೇಕು. ಸರ್ಕಾರ, ಪಾಲಿಕೆ ಯಾವುದೇ ಇರಲಿ ಅವುಗಳ ಎಲ್ಲ ಸೇವೆಗಳಿಗೂ ಜನ ಪೂರ್ಣ(?) ಹಣ ಕಕ್ಕಬೇಕು. ಇದು 'ಮನಮೋಹನ'ಯುಗದ ನೀತಿ. ಈ ನೀತಿ ಬಿಜೆಪಿಗೂ 'ಮನಮೋಹಕ'ವೇ ಎಂಬುದು ಎಲ್ಲರಿಗೂ ಗೊತ್ತಿರುವ ಸಮಾಚಾರವೇ.


ಬಿಜೆಪಿ ಮೇಯರ್ ವೆಂಕಟೇಶ್ ಮೂರ್ತಿ

ಗುತ್ತಿಗೆದಾರರು ಕಸವನ್ನು ದೂರದ ನಿಗದಿತ ಜಾಗಗಳಲ್ಲಿ ಹಾಕದೇ ಹತ್ತಿರದ ಜನ ವಸತಿ ಪ್ರದೇಶಗಳಲ್ಲಿ ಸುರಿಯುತ್ತಿರುವ ಬಗೆಗೆ ಬೇಕಾದಷ್ಟು ದೂರುಗಳಿವೆ. ಇವನ್ನೆಲ್ಲ ಗಮನಿಸಲು ಪಾಪ ನಮ್ಮ ಮೇಯರುಗಳಿಗೆ ಬಿಡುವಿಲ್ಲ.

ಅವರು ತುಂಬಾ ಒತ್ತಡಗಳಲ್ಲಿದ್ದಾರೆ. ಏನು ಒತ್ತಡ ಅಂತ ನಾವು ನೀವು ಕೇಳುವಂತಿಲ್ಲ. ಅರ್ಥ ಮಾಡಿಕೊಳ್ಳಬೇಕಷ್ಟೆ. ಇಲ್ಲೊಂದು ಪ್ರಕರಣವಿದೆ. ಅರ್ಥ ಮಾಡಿಕೊಳ್ಳಲು ಸಹಾಯವಾಗಬಹುದಾದದ್ದು.


ಆರ್. ರಾಮಕೃಷ್ಣ

'ಬಗರ್ ಹುಕುಂ' ಭೂಮಿ ಗುಳುಂ ??

ಮೊನ್ನೆ ಮೊನ್ನೆ ತಾನೇ ನಮ್ಮ ಮೇಯರ್ ವೆಂಕಟೇಶ ಮೂರ್ತಿಗಳು ರಾಜ್ಯದ ಘನ ಮುಖ್ಯಮಂತ್ರಿಗಳಿಗೆ ಒಂದು ಸನ್ಮಾನವನ್ನು ಏರ್ಪಡಿಸಿದ್ದರು. ಮುಖ್ಯಮಂತ್ರಿಗಳೋ ರಾಜ್ಯದಲ್ಲಿ ಬರವಿದೆ... ನನಗೆ ಸನ್ಮಾನ ಬೇಡವೇ ಬೇಡ ಎನ್ನುತ್ತಲೇ ಅದನ್ನು ಸ್ವೀಕರಿಸಿದರು. ಇರಲಿ. ಇದಾದ ಮೇಲೆ ಪಾಪ ನಮ್ಮ ಮೇಯರು ಈಗ ನಿರೀಕ್ಷಣಾ ಜಾಮೀನೊಂದರ ಸಲುವಾಗಿ ಓಡಾಟ ಮಾಡಬೇಕಾಗಿ ಬಂತು. ಅಂತೂ ನಿರೀಕ್ಷಣಾ ಜಾಮೀನು ಸಿಕ್ಕಿದೆ ಅಂತ ಇಟ್ಟುಕೊಳ್ಳಿ.

ಏನಿದು ಪ್ರಕರಣ

ಬೆಂಗಳೂರಿನ ಉತ್ತರ ಹಳ್ಳಿ ಹೋಬಳಿಯ ಸೋಮನಹಳ್ಳಿ ರೈತರು ಮೇಯರ್ ವೆಂಕಟೇಶ ಮೂರ್ತಿ ಮತ್ತು ಅವರ ಪತ್ನಿ ಕೆ. ಪ್ರಭಾ ಅವರುಗಳು ತಾವು ಕೃಷಿ ಕೂಲಿಕಾರರು, ತಮ್ಮ ಹೆಸರಿನಲ್ಲಿ ಬೇರೆ ಯಾವುದೇ ಆಸ್ತಿ ಇಲ್ಲ ಎಂದು ಸುಳ್ಳು ದಾಖಲೆ ನೀಡಿ ಸೋಮನಹಳ್ಳಿಯ ಎಂಟು ಎಕರೆ ಬಗರ್ ಹುಕುಂ ಜಮೀನು ಕಬಳಿಸಿದ್ದಾರೆ ಎಂದು ದೂರಿದ್ದಾರೆ. ಅವರ ದೂರಿನ ಆಧಾರದಲ್ಲಿ ತನಿಖೆ ನಡೆದು ವೆಂಕಟೇಶ ಮೂರ್ತಿ ಮತ್ತು ಕೆ. ಪ್ರಭಾ ಅವರು ಸುಳ್ಳು ಘೋಷಣೆ ಮಾಡಿ ದಾಖಲೆ ನೀಡಿರುವುದು ನಿಜ ವರದಿ ಬಂದಿದೆ. ಅದರ ಆಧಾರದಲ್ಲಿ ಬೆಂಗಳೂರು ದಕ್ಷಿಣ ಉಪ ವಿಭಾಗದ ಮ್ಯಾಜಿಸ್ಟ್ರೇಟ್ ಈ ಬಗರ್ ಹುಕುಂ ಮಂಜೂರಾತಿಯನ್ನು ರದ್ದು ಮಾಡಿದ್ದಾರೆ.

ಹೇಗೋ ನಿರೀಕ್ಷಣಾ ಜಾಮೀನು ಸಿಕ್ಕಿರುವುದರಿಂದ ಬಿಜೆಪಿ ಮೇಯರು ಪರಪ್ಪನ ಅಗ್ರಹಾರ ಯಾತ್ರೆ ಮಾಡುವುದು ತತ್‌ಕ್ಷಣಕ್ಕೆ ತಪ್ಪಿದೆ. ಈ ಪ್ರಕರಣದಲ್ಲಿ ನನಗೆ ಈಗಿನ ಬಿಜೆಪಿ ಸರ್ಕಾರದ ಉಪ ಮುಖ್ಯಮಂತ್ರಿ ಮತ್ತು ಗೃಹ ಸಚಿವ ಆರ್. ಅಶೋಕ್ ಅವರು ಸಹಾಯ ಮಾಡಿದ್ದಾರೆ. ಇಂಥದ್ದು ನಾನೊಬ್ಬನೇ ಮಾಡಿರುವುದಿಲ್ಲ. ತುಂಬಾ ಜನ ಇದ್ದಾರೆ ಎಂದಿದ್ದಾರೆ ಮೇಯರ್ ವೆಂಕಟೇಶ್. ಇವರ ಪ್ರಾಮಾಣಿಕತೆ ಮೆಚ್ಚಬೇಕಾದದ್ದೇ!!! ●

ಸಿಪಿಐ(ಎಂ) ಆದಾಯ ಮೂಲ ಇಲ್ಲಸಲ್ಲದ ಅಪಪ್ರಚಾರ

ಜುಲೈ 10, 2012ರ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಸಂಚಿಕೆಯಲ್ಲಿ ಸಿಪಿಐ(ಎಂ)ನ ಆರ್ಥಿಕ ಹಿನ್ನೆಲೆ ಕುರಿತ ಸುಳ್ಳು ಹಾಗೂ ಕಪೋಲಕಲ್ಪಿತ ವರದಿ ಪ್ರಕಟವಾಗಿದೆ. ಈ ವರದಿಯಲ್ಲಿ ಸಿಪಿಐಎಂ ಬೃಹತ್ ಕಂಪೆನಿ ಅಥವಾ ಕಾರ್ಪೋರೇಟ್ ವಲಯದಿಂದ ನಿಧಿಗಳನ್ನು ಪಡೆದುಕೊಳ್ಳುತ್ತಿದೆ ಮತ್ತು ದಾನಿಗಳ ಹೆಸರನ್ನು ಗುಪ್ತವಾಗಿಟ್ಟಿದೆ ಎಂದು ಹೇಳಿದೆ.

ಈ ವರದಿಗೆ ಸ್ಪಷ್ಟೀಕರಣ ನೀಡುತ್ತಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಆದಾಯ, ಆರ್ಥಿಕ ಸಂಪನ್ಮೂಲ ಕ್ರೋಢೀಕರಣದ ನೈಜ ಚಿತ್ರಣವನ್ನು ಪಕ್ಷ ಜನತೆಯ ಮುಂದಿಟ್ಟಿದೆ.

ತತ್ವ, ಆದರ್ಶ ಮತ್ತು ಮೌಲ್ಯಗಳಿಗೆ ಬದ್ಧವಾಗಿರುವ ಶಿಸ್ತುಬದ್ಧ ಸಂಘಟನೆ ಹೊಂದಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ತನ್ನ ಆರ್ಥಿಕ ಲೆಕ್ಕಪತ್ರದ ಆಡಿಟ್‌ನ್ನು ಸಮರ್ಪಕವಾಗಿ ಕಾಲಕಾಲಕ್ಕೆ ನಡೆಸುತ್ತಿದ್ದು, ಆದಾಯ ತೆರಿಗೆ ಇಲಾಖೆ ಹಾಗೂ ಚುನಾವಣಾ ಆಯೋಗಕ್ಕೆ ನೀಡಿದೆ.

ಜನಪ್ರಾತಿನಿಧ್ಯ ಕಾಯ್ದೆ ಹಾಗೂ ಆದಾಯ ತೆರಿಗೆ ಇಲಾಖೆಯ ನಿಯಮದಂತೆ 20 ಸಾವಿರ ಮತ್ತು ಅದಕ್ಕೆ ಹೆಚ್ಚಿನ ಮೊತ್ತದ ನೆರವು ನೀಡಿರುವ ಎಲ್ಲ ದಾನಿಗಳ ಹೆಸರು ಮತ್ತು ವಿವರಗಳನ್ನು ನೀಡಿದೆ. ಆದಾಯ ತೆರಿಗೆ ಇಲಾಖೆ ಮತ್ತು ಚುನಾವಣಾ ಆಯೋಗಕ್ಕೆ ಸಲ್ಲಿಸಿದ 2005ರಿಂದ 2011ರ ವರೆಗಿನ ಕ್ರೋಢೀಕೃತ ವಿವರಗಳು ಹೀಗಿವೆ. ಇದು ಕೇಂದ್ರ ಸಮಿತಿ ಹಾಗೂ ಎಲ್ಲ ರಾಜ್ಯ ಸರ್ಕಾರಗಳ ಆದಾಯವನ್ನೂ ಒಳಗೊಂಡಿದೆ.

ಸಿಪಿಐಎಂನ ಕಾರ್ಯಕ್ರಮ ಮತ್ತು ಸಂವಿಧಾನದ ಪ್ರಕಾರ, ಕೇಂದ್ರ ಸಮಿತಿಯ ನಿಯಮದಂತೆ ಪಕ್ಷ ತನ್ನ ಪ್ರತೀ ಸದಸ್ಯರಿಂದ ವಂತಿಗೆ ಅಥವಾ ಲೆವಿಯನ್ನು ಪಡೆದುಕೊಳ್ಳುತ್ತಿದೆ. ಅಲ್ಲದೆ ಪ್ರತಿ ಸದಸ್ಯರು ಪ್ರತಿ ವರ್ಷ ಸದಸ್ಯತ್ವ ಶುಲ್ಕವಾಗಿ ಎರಡು ರೂಪಾಯಿ ಪಾವತಿಸಬೇಕಿದೆ. ಸಿಪಿಐ(ಎಂ)ನ ಆಡಿಟ್ ಮಾಡಲಾದ ಲೆಕ್ಕಪತ್ರದ ಪ್ರಕಾರ ಶೇ 40ರಷ್ಟು ಆದಾಯ ಲೆವಿ ಸಂಗ್ರಹದಿಂದ ಮತ್ತು ಶೇ. 0.64 ಆದಾಯ ಸದಸ್ಯತ್ವ ಶುಲ್ಕದಿಂದ ಹರಿದುಬರುತ್ತದೆ. 2011ರ ಸಾಲಿನಲ್ಲಿ ಪಕ್ಷದ ಸಂಸದರು ಮತ್ತು ಮಾಜಿ ಸಂಸದರಿಂದ ಕೇಂದ್ರ ಸಮಿತಿಗೆ 1.36 ಕೋಟಿ ರೂಪಾಯಿ ಸಂಗ್ರಹವಾಗಿದೆ.

ಏಳು ವರ್ಷದಲ್ಲಿ ಸಂಗ್ರಹಿಸಲಾದ ಒಟ್ಟು 417.26 ಕೋಟಿ ರೂಪಾಯಿಯಲ್ಲಿ 20 ಸಾವಿರಕ್ಕಿಂತ ಹೆಚ್ಚಿನ ಪ್ರಮಾಣದ ವಂತಿಗೆ ನೀಡಿದ ದಾನಿಗಳಿಂದ ಸಂಗ್ರಹಿಸಿದ ಮೊತ್ತ ಕೇವಲ 3.35 ಕೋಟಿ ರೂಪಾಯಿ. ಇದರಲ್ಲಿ ವ್ಯಕ್ತಿಗಳು, ಕಂಪೆನಿಗಳು ಮತ್ತು ಸೊಸೈಟಿಗಳು ಸೇರಿವೆ. ಅದರ ಒಟ್ಟು ಶೇಕಡಾವಾರು 0.35ರಷ್ಟು ಮಾತ್ರ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಟೈಮ್ಸ್ ಆಫ್ ಇಂಡಿಯಾ ಎಂಬ ಪ್ರತಿಷ್ಠಿತ ಆಂಗ್ಲ ದೈನಿಕ ಸಿಪಿಐ(ಎಂ) ಪಕ್ಷದ ತೇಜೋವಧೆಗೆ ಪ್ರಯತ್ನ ನಡೆಸಿದೆ.

ಇನ್ನೊಂದು ಮಹತ್ವದ ಹಾಗೂ ಗಮನಿಸಬೇಕಾದ ಅಂಶ ಎಂದರೆ, ಸಿಪಿಐ(ಎಂ) ಯಾವತ್ತೂ ಕಾರ್ಪೋರೇಟ್‌ಗಳಿಂದ, ಬೃಹತ್ ಕಂಪೆನಿಗಳಿಂದ ಹಣ ಸಂಗ್ರಹಿಸಿಲ್ಲ. ಇಂತಹ ವಂತಿಗೆಗಳನ್ನು ಖಡಾಖಂಡಿತವಾಗಿ ನಿರಾಕರಿಸಲಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಮಾತ್ರ ಕೆಲವು ಕಂಪೆನಿಗಳು ಸಿಪಿಎಂಗೆ ದೇಣಿಗೆ ನೀಡಿದ್ದು ನಿಜ. ಆದರೆ, ಈ ವಿಷಯ ಕಳೆದ ವರ್ಷ ಸಿಪಿಎಂನ ಪಾಲಿಟ್‌ಬ್ಯೂರೋ ಸಭೆಯ ಮುಂದೆ ಚರ್ಚೆಗೆ ಬಂದಾಗ, ಇಂತಹ ನಿಧಿಗಳು ಎಷ್ಟೇ ಚಿಕ್ಕದಾಗಿರಲಿ, ಅಂಥ ನಿಧಿಗಳನ್ನು, ವಂತಿಗೆಗಳನ್ನು ಸ್ವೀಕರಿಸಬಾರದು ಎಂಬ ನಿರ್ಧಾರ ಕೈಗೊಳ್ಳಲಾಗಿದೆ.

ಇನ್ನೊಂದು ವಿಚಾರ ಎಂದರೆ, ಟೈಮ್ಸ್ ಆಫ್ ಇಂಡಿಯಾದ ಲೇಖನದಲ್ಲಿ ಸಿಪಿಐ(ಎಂ) ತನ್ನ ದಾನಿಗಳ ವಿವರಗಳನ್ನು ಗೌಪ್ಯವಾಗಿ ಇಟ್ಟಿದೆ ಎಂದು ಆಪಾದಿಸಿದೆ. ಆದರೆ, ವಸ್ತುಸ್ಥಿತಿಯೇ ಬೇರೆ. 20 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ದಾನ, ದೇಣಿಗೆ, ವಂತಿಗೆ ನೀಡಿದ ಎಲ್ಲ ವ್ಯಕ್ತಿಗಳು, ಸಂಸ್ಥೆಗಳ ವಿವರವನ್ನು ಚುನಾವಣಾ ಆಯೋಗಕ್ಕೆ ಮತ್ತು ಆದಾಯ ತೆರಿಗೆ ಇಲಾಖೆಗೆ ಸಿಪಿಐ(ಎಂ) ನೀಡಿದೆ. ಇದರಲ್ಲಿ ಸಂಪೂರ್ಣ ಪಾರದರ್ಶಕತೆ ಇದೆ. ಈ ವ್ಯಾಪ್ತಿಯಲ್ಲಿ ಕಂಪೆನಿ, ಸಂಸ್ಥೆ ಅಥವಾ ವ್ಯಕ್ತಿ ಬರಲಿ ಎಲ್ಲ ವಿವರವೂ ಅಧಿಕಾರಿಗಳಲ್ಲಿ ಲಭ್ಯವಿದೆ. ಇನ್ನು 20 ಸಾವಿರಕ್ಕಿಂತ ಕಡಿಮೆ ಮೊತ್ತದ ದೇಣಿಗೆ ಸಂಬಂಧಿಸಿದ್ದು, ಪಕ್ಷದ ಗರಿಷ್ಠ ಪ್ರಮಾಣದ ನಿಧಿ ಹರಿದುಬರುತ್ತಿರುವುದು ಸದಸ್ಯರು ಮತ್ತು ಹಿತೈಷಿಗಳಿಂದ. ಲೆವಿ ಮತ್ತು ಸದಸ್ಯತ್ವದ ಪ್ರಮಾಣ ಶೇ. 40ರಷ್ಟಿದೆ ಎಂಬುದೂ ಗಮನಾರ್ಹ. ಇನ್ನು ಜನಸಾಮಾನ್ಯರಿಂದ ಸಂಗ್ರಹಿಸಲಾದ ಮೊತ್ತವೂ ಸುಮಾರು ಶೇ. 40ರಷ್ಟಿದೆ. ಈ ವಿಚಾರದಲ್ಲಿ ಪಕ್ಷ ಯಾವುದೇ ವಿಷಯಗಳನ್ನು ರಹಸ್ಯವಾಗಿಟ್ಟಿಲ್ಲ.

ಪಕ್ಷದ ಕೇಂದ್ರ ಸಮಿತಿ ಇನ್ನು ಒಂದು ಹೆಜ್ಜೆ ಮುಂದಕ್ಕೆ ಹೋಗಿ 20 ಸಾವಿರಕ್ಕಿಂತ ಹೆಚ್ಚಿನ ಮೊತ್ತ ನೀಡಿದ ದಾನಿಗಳ ವಿವರವನ್ನು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ನಿರ್ಧರಿಸಿದೆ.

2005–11ರ ವರೆಗೆ ಏಳು ವರ್ಷದ ಒಟ್ಟು ಆದಾಯ– 417.26 ಕೋಟಿ ರೂ.

ಪಕ್ಷ ಸದಸ್ಯರ ಲೆವಿ ಸಂಗ್ರಹದಿಂದ ಆದಾಯ	– 166.79 ಕೋಟಿ (ಶೇ. 39.97)
ಸದಸ್ಯತ್ವ ಶುಲ್ಕ	– 2.56 ಕೋಟಿ (ಶೇ. 0.64)
ಜನರಿಂದ ಸಂಗ್ರಹಿಸಿದ ಡೊನೇಷನ್	– 165.66 ಕೋಟಿ (ಶೇ. 39.70)
ಚುನಾವಣಾ ನಿಧಿ	– 48.34 ಕೋಟಿ (ಶೇ. 11.59)
ಇತರೆ ಆದಾಯ	– 8,75 ಕೋಟಿ (ಶೇ. 2.10)
ಡೆಪಾಸಿಟ್ ಮೇಲಿನ ಬಡ್ಡಿ	– 23.40 ಕೋಟಿ (ಶೇ. 5.61)
ವೃತ್ತ ಪತ್ರಿಕೆಗಳು, ಪುಸ್ತಕಗಳ ಮಾರಾಟದಿಂದ ಆದಾಯ	– 1.68 ಕೋಟಿ (ಶೇ. 0.4)
ಪುಸ್ತಕಗಳ ದಾಸ್ತಾನು	– 00.04 ಕೋಟಿ (ಶೇ. 00.01)
ದಾನಿಗಳಿಂದ ಪಡೆದ ಡೊನೇಷನ್ಸ್ (20 ಸಾವಿರ ಮೇಲ್ಪಟ್ಟು)	– 3.35 ಕೋಟಿ (ಶೇ. 00.81)
ಕಂಪೆನಿಗಳು ಮತ್ತು ಸೊಸೈಟಿಗಳಿಂದ ಪಡೆದ ಆದಾಯ	– 1.45 ಕೋಟಿ (ಶೇ. 0.35)

ಪಾಲಿಕೆ ಎದುರು ಬಂಗ್ರಕೂಳೂರು ನಾಗರಿಕರ ಪ್ರತಿಭಟನೆ:

ಪುಟ 6 ರಿಂದ

ಮಂಗಳೂರು ಮಹಾನಗರ ವ್ಯಾಪ್ತಿಯ ಬಂಗ್ರ ಕೂಳೂರು ಪ್ರದೇಶದಲ್ಲಿ ಸರಿಯಾಗಿ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ, ರಸ್ತೆ, ಬೀದಿ ದೀಪ ವ್ಯವಸ್ಥೆ ಸರಿಯಾಗಿಲ್ಲ, ತ್ಯಾಜ್ಯ ವಿಲೇವಾರಿ ಸರಿಯಾಗಿಲ್ಲ, ಒಳಚರಂಡಿಯಿಂದ ಕೊಳಚೆ ನೀರು ಉಕ್ಕಿ ಕೃಷಿ ಬೆಳೆಗಳನ್ನು ಬೆಳೆಯಲಾಗುತ್ತಿಲ್ಲ ಎಂಬುದಾಗಿ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಹೇಳಿದರು. ಅವರು ಮಂಗಳೂರು ಮನಪಾ ಕಚೇರಿ ಮುಂದೆ ಸಿಪಿಐ(ಎಂ) ಕೊಟ್ಟಾರ ಪ್ರದೇಶ ಹೋರಾಟ ಸಮಿತಿಯ ನೇತೃತ್ವದಲ್ಲಿ ಆಗಸ್ಟ್ 13 ರಂದು ನಡೆದ ಬಂಗ್ರಕೂಳೂರು ನಾಗರಿಕರ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಕೂಡಾ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಹೋರಾಟ ಸಮಿತಿಯ ಸಂಚಾಲಕ ಸ್ಯಾಮುವೆಲ್ ಟೈಟಸ್, ಅನ್ನಾ ಫ್ಲೋರಿನ್ ಡಿಸೋಜ ಮತ್ತಿತರರು ಹೋರಾಟದ ನೇತೃತ್ವ ವಹಿಸಿದ್ದರು.

ಬಳಿಕ ನಗರ ಪಾಲಿಕೆಯ ಆಯುಕ್ತರಿಗೆ ಪರಿಹಾರಕ್ಕಾಗಿ ಮನವಿ ಸಲ್ಲಿಸಲಾಯಿತು. ಮನವಿಯನ್ನು ಪರಿಶೀಲಿಸಿದ ಆಯುಕ್ತರು, ಕೆಲವನ್ನು ಅತೀ ಶೀಘ್ರದಲ್ಲಿ ವಿಲೇವಾರಿ ನಡೆಸುವುದಾಗಿ ಭರವಸೆ ನೀಡಿದರು.



ಗೃಹರಕ್ಷಕದಳದ ಸಿಬ್ಬಂದಿಯಿಂದ ಮಂಗಳೂರಿನಲ್ಲಿ 24 ಗಂಟೆ ಧರಣಿ:

ಗೃಹ ರಕ್ಷಕ ದಳದ ಸಿಬ್ಬಂದಿಯ ದಿನಗೂಲಿ ವೇತನ ಹೆಚ್ಚಿಸಬೇಕು, ಖಾಯಂ ಕೆಲಸ ನೀಡಬೇಕು, ಬಸ್‌ಪಾಸ್, ವೈದ್ಯಕೀಯ ಸೌಲಭ್ಯ ನೀಡಬೇಕು, ಸಿಬ್ಬಂದಿಗಳಿಗೆ ಅದರಲ್ಲೂ ಮಹಿಳಾ ಸಿಬ್ಬಂದಿಗಳಿಗೆ ಕಮಾಂಡೆಂಟ್ ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸಬೇಕು, ಸೇವೆಯನ್ನು ಗುತ್ತಿಗೆದಾರರ ವಶದಿಂದ ಜಿಲ್ಲಾಧಿಕಾರಿಯ ಅಧೀನಕ್ಕೆ ತಂದುಕೊಳ್ಳಬೇಕು – ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ದ.ಕ.ಜಿಲ್ಲಾ ಗುತ್ತಿಗೆ ಕಾರ್ಮಿಕರ ಫೆಡರೇಶನ್ (ಸಿಐಟಿಯು) ವತಿಯಿಂದ ಆಗಸ್ಟ್ 13 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಗೃಹರಕ್ಷಕ ದಳ ಸಿಬ್ಬಂದಿಗಳು 24 ಗಂಟೆಗಳ ಧರಣಿ ನಡೆಸಿದರು.



ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಉದ್ಘಾಟಿಸಿ ಮಾತನಾಡಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ದಲಿತ ಹಕ್ಕುಗಳ ಸಂಘಟನೆಯ ಲಿಂಗಪ್ಪ ನಂತೂರು, ಸಮುದಾಯದ ವಾಸುದೇವ ಉಚ್ಚಿಲ, ಆಟೋ ರಿಕ್ಷಾ ಚಾಲಕರ ಸಂಘದ ಎಲ್.ಟಿ.ಸುವರ್ಣ ಮತ್ತಿತರರು ಮಾತನಾಡಿದರು. ಆಗಸ್ಟ್ 14 ರಂದು ಗುತ್ತಿಗೆ ಕಾರ್ಮಿಕರ ಫೆಡರೇಶನ್‌ನ ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಧರಣಿ ಸತ್ಯಾಗ್ರಹದ ಸಮಾರೋಪ ಭಾಷಣ ಮಾಡಿದರು. ಗೃಹರಕ್ಷಕ ದಳ ಸಿಬ್ಬಂದಿ ಮುಖಂಡರಾದ ರೇಣುಕಾ ಕಟೀಲ್, ಕೇಶವ, ರೇಶ್ಮಾ ಮೂಲ್ಕಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗೃಹರಕ್ಷಕದಳದ ಈಗಿನ ಕಮಾಂಡೆಂಟ್ ನಿದರ್ಶ್ ಹೆಗ್ಡೆ ಅವರನ್ನು ವಜಾಗೊಳಿಸಿ, ವಿಶಾಲ ಮನೋಭಾವದ ಅಧಿಕಾರಿಯನ್ನು ಈ ಸ್ಥಾನಕ್ಕೆ ನೇಮಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬ್ಯಾಂಕ್ ನೌಕರರ ದೇಶವ್ಯಾಪಿ ಮುಷ್ಕರ: ಕರ್ನಾಟಕದಲ್ಲೂ ಸಂಪೂರ್ಣ ಯಶಸ್ವಿ


ರಾಷ್ಟ್ರೀಕೃತ ಬ್ಯಾಂಕುಗಳ ಸುಮಾರು 10 ಲಕ್ಷ ನೌಕರರು ಮತ್ತು ಅಧಿಕಾರಿಗಳು ಸಂಘಟಿಸಿರುವ ಎರಡು ದಿನಗಳ ಮುಷ್ಕರ ರಾಜ್ಯದಲ್ಲೂ ಸಂಪೂರ್ಣ ಯಶಸ್ವಿಯಾಗಿದೆ. ಕರ್ನಾಟಕದಲ್ಲಿ ಮೊದಲ ದಿನ (ಅಗಸ್ಟ್ 22) ನಡೆದ ಮುಷ್ಕರದಲ್ಲಿ ಸುಮಾರು 70 ಸಾವಿರ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ಪಾಲ್ಗೊಂಡಿದ್ದಾರೆ. ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ಒಕ್ಕೂಟದ (ಯುಎಫ್‌ಬಿಯು) ಆಶ್ರಯದಲ್ಲಿ ನಡೆದ ಈ ಮುಷ್ಕರದಲ್ಲಿ ಸಾರ್ವಜನಿಕ ವಲಯದ 24 ಬ್ಯಾಂಕ್‌ಗಳ ಮತ್ತು ಖಾಸಗಿ ವಲಯದ 12 ಬ್ಯಾಂಕ್‌ಗಳ ನೌಕರರು ಭಾಗವಹಿಸಿದ್ದಾರೆ. ಐಸಿಐಸಿಐ, ಎಚ್‌ಡಿಎಫ್‌ಸಿ ಮೊದಲಾದ ಹೊಸ ಖಾಸಗಿ ಬ್ಯಾಂಕ್‌ಗಳು ಮುಷ್ಕರದಲ್ಲಿ ಪಾಲ್ಗೊಂಡಿರಲಿಲ್ಲ. ಈ ಬ್ಯಾಂಕ್‌ಗಳ ಬಹುತೇಕ ನೌಕರರು ಮತ್ತು ಅಧಿಕಾರಿಗಳು ಗುತ್ತಿಗೆ ಆಧಾರದಲ್ಲಿ ನೇಮಿಸಲ್ಪಟ್ಟವರಾಗಿದ್ದು ಅವರಿಗೆ




ಕನಿಷ್ಠ ಸೇವಾ ಭದ್ರತೆಯೂ ಇರುವುದಿಲ್ಲ. ಖಂಡೇವಾಲ ವರದಿ ಆಧಾರಿಸಿ ಷೇರುದಾರರ ಮರದಾನದ ಹಕ್ಕನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಸದ್ಯದ ಶೇ 1 ರಿಂದ ಶೇ 10 ಕ್ಕೆ ಮತ್ತು ಖಾಸಗಿ ಬ್ಯಾಂಕ್‌ಗಳಲ್ಲಿ ಶೇ 10 ರಿಂದ 26 ಕ್ಕೆ ಹೆಚ್ಚಿಸಲು ಸರ್ಕಾರ ಮುಂದಾಗಿರುವುದನ್ನು ವಿರೋಧಿಸುವುದು ಈ ಮುಷ್ಕರದ ಪ್ರಮುಖ ಉದ್ದೇಶವಾಗಿದೆ. ಬ್ಯಾಂಕ್‌ಗಳ ರಾಷ್ಟ್ರೀಕರಣದ ಮೂಲ ಉದ್ದೇಶವನ್ನೇ ಸರ್ಕಾರ ಬುಡಮೇಲು ಮಾಡಲು ಹೊರಟಿದೆ ಎನ್ನವುದು ಬ್ಯಾಂಕ್ ನೌಕರರ ಸಂಘಟನೆಗಳ ಪ್ರಮುಖ ಆರೋಪವಾಗಿದೆ. ಹೊಸ ನೇಮಕಾತಿಯನ್ನು ಸ್ಥಗಿತಗೊಳಿಸಿ ಬ್ಯಾಂಕ್ ಸೇವೆಯನ್ನು ಹೆಚ್ಚು ಹೆಚ್ಚಾಗಿ ಹೊರಗುತ್ತಿಗೆಗೆ ನೀಡುವುದನ್ನು ಬ್ಯಾಂಕ್ ನೌಕರರು ವಿರೋಧಿಸುತ್ತಿದ್ದಾರೆ. ಬ್ಯಾಂಕ್ ನೌಕರರ ನ್ಯಾಯಸಮ್ಮತವಾದ ಬೇಡಿಕೆಗಳ ಬಗ್ಗೆ ಮುಷ್ಕರ ನಿರತ ಬ್ಯಾಂಕ್ ನೌಕರರ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸರ್ಕಾರ ಮಾತುಕತೆಗೆ ಮುಂದಾಗದಿರುವುದು ಖಂಡನೀಯ. ●

ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ನೆನಪು - ನಮನ

ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ನೆನಪು–ನಮನ ಕಾರ್ಯಕ್ರಮ **4–ಅಗಸ್ಟ್ 2012** ರಂದು ಬೆಂಗಳೂರಿನ **ಜೈ ಭೀಮ ಭವನದಲ್ಲಿ, ಅಖಿಲ ಭಾರತ ಜನವಾದಿ ಸಂಘಟನೆಯ** ನೇತೃತ್ವದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಕೆ.ಎಚ್.ಶ್ರೀನಿವಾಸ್, ಕೇಂದ್ರದ ಮಾಜಿ ಸಚಿವ ಸಿ.ಕೆ.ಜಾಫರ್ ಷರೀಫ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮದನ್ ಗೋಪಾಲ್, ಬಹು ಭಾಷಾ ಗಾಯಕಿ ವಸುಂಧರಾ ದಾಸ್, ಲೇಖಕಿ ಎನ್. ಗಾಯತ್ರಿ, ಚಿಂತಕಿ ಕೆ.ಸತ್ಯಾ ಮುಂತಾದವರು ಪಾಲ್ಗೊಂಡಿದ್ದರು.





ಮಾಜಿ ಸಚಿವ ಕೆ.ಎಚ್.ಶ್ರೀನಿವಾಸ್, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮದನ್ ಗೋಪಾಲ್ ಭಾರತದ ಜನತೆ ಗೌರವಿಸುವ ವ್ಯಕ್ತಿತ್ವ ಹೊಂದಿದ್ದ ಲಕ್ಷ್ಮಿ ಸೆಹಗಲ್‌ರವರದ್ದು ಚರಿತ್ರೆಯ ಪುಟಗಳಲ್ಲಿ ರಾರಾಜಿಸುವ ಹೆಸರು. ಯಾವ ತತ್ವವಲ್ಲದೆ ಇಡೀ ದೇಶದ ಹಿತಾಸಕ್ತಿ ಹೊಂದಿದ್ದರು ಎಂದರು. ಅತ್ಯಂತ ಶಿಸ್ತಿನ ಜೀವನ ನಡೆಸಿದ ಲಕ್ಷ್ಮಿ ಸೆಹಗಲ್ ಕೊನೆಗಳಿಗೆಯವರೆಗೂ ಮಾನಸಿಕ ದೈಹಿಕ ಕ್ರಿಯಾಶೀಲರಾಗಿದ್ದರು. ಅವರು ಇಡೀ ದೇಶದ ಲಕ್ಷ್ಮಿಯಾಗಿದ್ದರು. ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಲೇಖಕಿ ಎನ್. ಗಾಯತ್ರಿ ನುಡಿದರು. ವಸುಂಧರಾ ದಾಸ್, ಲಕ್ಷ್ಮಿ ಸೆಹಗಲ್‌ರೊಟ್ಟಿಗಿನ ಜೀವನದ ಅತ್ಯಮೂಲ್ಯ ಸಮಯವನ್ನು ನೆನಪಿಸಿಕೊಂಡರು. ನಿರ್ಭಯ ವ್ಯಕ್ತಿತ್ವದ ಹೆಣ್ಣು ಮಗಳ ಸಂಕೇತವಾಗಿದ್ದರು ಲಕ್ಷ್ಮಿ ಸೆಹಗಲ್‌ರವರು ಎಂದ ಅವರು "ಕಭೀ ಅಲ್ವಿದಾ ನಾ ಕೆಹನಾ" ಗೀತೆಯನ್ನು ಹಾಡಿದರು.

ಜಾಫರ್ ಷರೀಫ್‌ರವರು ಲಕ್ಷ್ಮಿ ಸೆಹಗಲ್‌ರವರ ತ್ಯಾಗ ಮತ್ತು ಗಟ್ಟಿತನವನ್ನು ಜ್ಞಾಪಿಸಿಕೊಳ್ಳುತ್ತಾ ಕಾರ್ಮಿಕ–ದುಡಿಯುವ ವರ್ಗದ ಪರ ಒಲವನ್ನು ಅವರು ಹೊಂದಿದ್ದರು ಮತ್ತು ಅವರ ಹೇಳಿದಂತೇ ಕಾರ್ಮಿಕರು ಈ ದೇಶದ ಕೈಬಿಡಲಿಲ್ಲ ಎಂದರು.

ಜಿ.ವಿ.ಶ್ರೀರಾಮ ರೆಡ್ಡಿಯವರು ಲಕ್ಷ್ಮಿ ಸೆಹಗಲ್‌ರವರು ಕ್ಯಾಪ್ಟನ್, ವೈದ್ಯೆ, ಸಾಮಾಜಿಕ ಹೋರಾಟಗಾರ್ತಿ ಆಗಿರುವುದನ್ನು ನೆನೆಯುತ್ತಲೇ ಕಾಮ್ರೆಡ್ ಆಗಿ ಅವರ ವ್ಯಕ್ತಿತ್ವವನ್ನು ತೆರೆದಿಟ್ಟರು. ಬೆಂಗಳೂರಿನಲ್ಲಿ ನಡೆದ ವಿಶ್ವಸುಂದರಿ ಸ್ಪರ್ಧೆಯ ವಿರೋಧಿ ಹೋರಾಟವನ್ನು ನೆನೆದರು.

ನಿರ್ಭೀತ ನಡೆ ಅವರ ನಗುವಿನಲ್ಲಿ ಕಾಣಸಿಗುತ್ತದೆ. ಭಯವೇ ಇಲ್ಲದ ಅವರ ವ್ಯಕ್ತಿತ್ವ ಅವರ ಸೌಂದರ್ಯಕ್ಕೊಂದು ಮೆರಗು ಎಂದು ಹೇಳುತ್ತಾ ಮಾತಿಗಿಳಿದ ಕೆ. ಸತ್ಯಾ, ಹೆಣ್ಣು ಹಲವು ರೀತಿಯ ಶೋಷಣೆ, ತಾರತಮ್ಯ ಅನುಭವಿಸುತ್ತಿರುವ, ಆರೋಗ್ಯ ಸೇವೆಯಿಂದ ವಂಚಿತರಾಗುತ್ತಿರುವ, ಶಿಕ್ಷಣ ದುರ್ಬರವಾಗುತ್ತಿರುವ, ಮಾರಾಟ–ಹತ್ಯೆ–ಕಾಣೆ ಆಗುತ್ತಿರುವ ಸಂದರ್ಭದಲ್ಲಿ ಸ್ವಂತ ವ್ಯಕ್ತಿತ್ವವನ್ನೇ ಕಳೆದುಕೊಂಡು ದುಡಿಯಬೇಕಾದ ಇಂದಿನ ಸನ್ನಿವೇಶಗಳು ಲಕ್ಷ್ಮಿ ಸೆಹಗಲ್‌ರವರು ಪ್ರಸ್ತುತವಾಗುತ್ತಾರೆ, ಆದರ್ಶವಾಗುತ್ತಾರೆ ಎಂದು ಹೇಳಿದರು. 'ಒಂದು ಹೋರಾಟದ ಬದುಕು –ಲಕ್ಷ್ಮಿ ಸೆಹಗಲ್' ಎಂದು **ಪಾರ್ವತಿ ಮೆನನ್** ಬರೆದಿರುವುದನ್ನು ನೆನಪಿಸಿಕೊಂಡ ಅವರು ಲಕ್ಷ್ಮಿ ಸೆಹಗಲ್ ಅನ್ಯಾಯಗಳ ವಿರುದ್ಧದ ದಿಟ್ಟ ಹೋರಾಟಗಾರ್ತಿಯಾಗಿದ್ದರು. ವಿದೇಶೀ ವಸ್ತುಗಳನ್ನು ಸುಡುವ ಬೆಂಕಿಗೆ ಲಕ್ಷ್ಮಿ ಸೆಹಗಲ್‌ರ ತಾಯಿ ವಿವಿಧ ವಿನ್ಯಾಸದ ಬಟ್ಟೆಗಳನ್ನು ಬಾಲ್ಯದಲ್ಲಿ ಸುರುವಿದ್ದರಿಂದ ಬದುಕಿಗೆ ಪ್ರೇರಣೆ ಪಡೆದರು. **ಕೆ.ನೀಲಾ** ಹೇಳುವಂತೆ 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಂದೂಕು ಹಿಡಿದ ಕೈ ನಂತರ ಬಾವುಟ ಹಿಡಿಯಿತು'. ಲಕ್ಷ್ಮಿ ಸೆಹಗಲ್‌ರವರಿಗೆ ಸಿಪಿಐ(ಎಂ) ಪಕ್ಷದ ಸಿದ್ಧಾಂತ, ತತ್ವ, ಆದರ್ಶಗಳೂ ಸರಿಹೊಂದಿದ್ದರಿಂದ ಪಕ್ಷದ ಸಕ್ರಿಯ ಸದಸ್ಯರಾದರು ಎಂದ ಸತ್ಯಾ, ಇಂಥ ಚೆಲುವು ಎಲ್ಲ ಹೆಣ್ಣು ಮಕ್ಕಳಿಗೂ ಸಿಗಲಿ; ನಾವೆಲ್ಲ ಅವರನ್ನು ಆಹ್ವಾನ ಮಾಡಿಕೊಳ್ಳುವ ಅಗತ್ಯ ಇದೆ ಎಂದರು.

ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್‌ರವರ ಭಾವಚಿತ್ರಗಳನ್ನು ವೀಕ್ಷಣೆಗೆ ಇಡಲಾಗಿತ್ತು. ಕ್ಯಾಪ್ಟನ್ ಲಕ್ಷ್ಮಿ ಸಾಕ್ಷ ಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಕಿರು ಹೊತ್ತಿಗೆಯನ್ನು ಜನವಾದಿಯ ಹೋರಾಟಗಾರ್ತಿಯರಾದ ಬಿಡುಗಡೆ ಮಾಡಿಸಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಕೆ.ಎಸ್.ಲಕ್ಷ್ಮಿ ಮಾಡಿದರೆ, ಶಾರದಾರವರು ವಂದಿಸಿದರು.

–ಛಾಯಾ ಐ.ಕೆ.

ಜಗದಗಲ

ಶರತ್‌ಚಂದ್ರ

"ಸಮಾಜವಾದವೇ ಭವಿಷ್ಯ ! ಆದರೆ ನಾವು ಅದಕ್ಕಾಗಿ ಕೈಕಟ್ಟಿ ಕಾದು ಕುಳಿತಿಲ್ಲ ! ಅದನ್ನು ಈಗಲೇ ಇಲ್ಲೇ ಕಟ್ಟಲು ಆರಂಭಿಸಿದ್ದೇವೆ !"

ಇದು ಇತ್ತೀಚೆಗೆ ಕ್ವಾಜುಲು–ನಾಟಾಲ್ ಪ್ರಾಂತ್ಯದ ಒಂಗೊಯೇನಲ್ಲಿ ಸೇರಿದ್ದ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ 13 ನೇ ಮಹಾಧಿವೇಶನದ ಘೋಷಣೆಯಾಗಿತ್ತು. ಒಂಬತ್ತು ದಶಕಗಳಿಗಿಂತಲೂ ಹೆಚ್ಚಿನ ಅದ್ಭುತ ಇತಿಹಾಸ ಇರುವ ಈ ಪಕ್ಷದ ಮಹಾಧಿವೇಶನ ಕಳೆದ ಮಹಾಧಿವೇಶನದ 5 ವರ್ಷಗಳ ನಂತರ ನಡೆಯುತ್ತಿತ್ತು. 3300 ಶಾಖೆಗಳಿಂದ ಆಯ್ಕೆಯಾದ ಸುಮಾರು ಎರಡು ಸಾವಿರ ಪ್ರತಿನಿಧಿಗಳು ಅದರಲ್ಲಿ ಭಾಗವಹಿಸಿದ್ದರು. ಅವರು ಒಂದುವರೆ ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಪ್ರತಿನಿಧಿಸುತ್ತಿದ್ದರು. ಈ ಎರಡು ಮಹಾಧಿವೇಶನಗಳ ನಡುವೆ ಪಕ್ಷದ ಸದಸ್ಯತ್ವ ಮೂರು ಪಟ್ಟು ಆಗಿದ್ದು ಪಕ್ಷಕ್ಕೆ ಹೆಮ್ಮೆಯ ಮತ್ತು ಸಂತೋಷದ ವಿಷಯವಾಗಿತ್ತು.

ಈ ಬಾರಿಯ ಮಹಾಧಿವೇಶನ ಪಕ್ಷದ ಸದಸ್ಯತ್ವ ಮಾತ್ರವಲ್ಲ, ದೇಶದ ಜೀವನದ ಹಲವು ವಿಭಾಗ ಮತ್ತು ಆಯಾಮಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಅಧಿಪತ್ಯದ ಅಗಾಧ ಹೆಚ್ಚಳದ ಹಿನ್ನೆಲೆಯಲ್ಲಿ ನಡೆಯುತ್ತಿತ್ತು. ಹಿಂದಿನ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಅಧ್ಯಕ್ಷ ಮೆಬೆಕಿ ಅವರ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಮೂಲೆಗುಂಪು ಮಾಡುವ ತೀವ್ರ ಪ್ರಯತ್ನವನ್ನು ಯಶಸ್ವಿಯಾಗಿ ಪಕ್ಷ ಹಿಮ್ಮೆಟ್ಟಿಸಿತ್ತು. ಹಲವು ದಶಕಗಳ ತ್ರಿಪಕ್ಷೀಯ ಕೂಟವನ್ನು ಒಡೆಯುವ ಪ್ರಯತ್ನವನ್ನೂ ವಿಫಲಗೊಳಿಸಿತ್ತು. ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ (ಎ.ಎನ್.ಸಿ.), ಕಮ್ಯುನಿಸ್ಟ್ ಪಕ್ಷ (ಎಸ್.ಎ.ಸಿ.ಪಿ.) ಮತ್ತು ಆಫ್ರಿಕನ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಕೊಸಾಟು) ಇವುಗಳ ಒಕ್ಕೂಟಕ್ಕೆ ತ್ರಿಪಕ್ಷೀಯ ಕೂಟ ಎನ್ನುವುದು.

22 ಲಕ್ಷ ಸದಸ್ಯರಿರುವ ಕೊಸಾಟು ಕಾರ್ಮಿಕ ವರ್ಗದ ಪ್ರತಿನಿಧಿಯಾಗಿದ್ದು ಉಳಿದ ಎರಡು ಸಂಘಟನೆಗಳ ಬೆನ್ನೆಲುಬು. 10 ಲಕ್ಷ ಸದಸ್ಯರಿರುವ ಎ.ಎನ್.ಸಿ. ದೇಶದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮುನ್ನಡೆಸುವ ಸಂಘಟನೆ. ವಿಶಾಲ ಪ್ರಜಾಸತ್ತಾತ್ಮಕ ರಂಗ. ಕಮ್ಯುನಿಸ್ಟ್ ಪಕ್ಷದ ಸದಸ್ಯರು ಈ ಎರಡೂ ಸಂಘಟನೆಗಳಲ್ಲಿ ಕೆಲಸ ಮಾಡುವುದಲ್ಲದೆ, ಅವುಗಳ ನೀತಿ ನಿರ್ಧಾರಗಳಲ್ಲಿ ಮತ್ತು ನಾಯಕತ್ವದಲ್ಲಿ ಮಂಚೂಣಿ ಪಾತ್ರ ವಹಿಸುತ್ತಾರೆ. ಈ ತ್ರಿಪಕ್ಷೀಯ ಕೂಟ ಜಗತ್ತಿನ ಅತ್ಯಂತ ದಮನಕಾರಿ ವರ್ಣಭೇದದ ಪ್ರಭುತ್ವವನ್ನು ಸಶಸ್ತ್ರ ಹೋರಾಟ ಮತ್ತು ರಾಜಕೀಯ ಒತ್ತಡಗಳ ಮೂಲಕ ಸೋಲಿಸಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಸಾಧಿಸಿತ್ತು. 1990ರ ದಶಕದಲ್ಲಿ ಅದನ್ನು ವರ್ಣಬೇಧ, ಲಿಂಗಬೇಧ, ಬಡತನ ಮತ್ತು ನಿರುದ್ಯೋಗ ಇಲ್ಲದ ಪ್ರಜಾಪ್ರಭುತ್ವ ವ್ಯವಸ್ಥೆ ಕಟ್ಟುವ ದಿಕ್ಕಿನಲ್ಲಿ ಮುನ್ನಡೆಸುವುದರಲ್ಲಿ ಸಹ ಅದರ ಪಾತ್ರ ಅಮೂಲ್ಯ. ಆದರೆ 1996ರ ನಂತರ ಮೆಬೆಕಿ ನಾಯಕತ್ವದಲ್ಲಿ ಸರ್ಕಾರ ಅಂಗೀಕರಿಸಲಾದ ಹಲವು ನೀತಿಗಳು ಈ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯ ಮುನ್ನಡೆಯಲ್ಲಿ ತೀವ್ರ ಅಡೆತಡೆ ಉಂಟು ಮಾಡಿದ್ದವು. ಅದರ ವಿರುದ್ಧ ಕಮ್ಯುನಿಸ್ಟ್ ಪಕ್ಷ ದಿಟ್ಟ ಹೋರಾಟ ನಡೆಸಿ ಮೆಬೆಕಿಯನ್ನು ಪದಚ್ಯುತಗೊಳಿಸಿ ಆ ದಿಕ್ಕು ಬದಲಿಸಲು ಸಾಧ್ಯವಾಗಿತ್ತು. ಆ ಹೋರಾಟ ಇನ್ನೂ ಮುಂದುವರೆದಿದೆ.



ವರ್ಣಬೇಧ, ಲಿಂಗಬೇಧ, ಬಡತನ ಮತ್ತು ನಿರುದ್ಯೋಗ ಇಲ್ಲದ ಪ್ರಜಾಪ್ರಭುತ್ವ ವ್ಯವಸ್ಥೆ ಕಟ್ಟುವ ದಿಕ್ಕಿನಲ್ಲಿ ಪ್ರಗತಿ ನಿರಾಶಾದಾಯಕವಾಗಿದ್ದು, ಜನತೆಯ ಆಕ್ರೋಶ ಅತೃಪ್ತಿ ಏರುತ್ತಿತ್ತು. ಒಂದು ವಿಶಿಷ್ಟವಾದ ರೂಪದಲ್ಲಿ ವಸಾಹತುವಾದ ಹಲವು ಆಯಾಮಗಳಲ್ಲಿ ಮುಂದುವರೆದಿದೆ. ಇವುಗಳ ಪ್ರತಿಫಲನವಾಗಿ ಕಮ್ಯುನಿಸ್ಟ್ ಪಕ್ಷದೊಳಗೆ ಬದಲಾಗುತ್ತಿರುವ ಸನ್ನಿವೇಶದಲ್ಲಿ ತ್ರಿಪಕ್ಷೀಯ ಕೂಟದಲ್ಲಿ ಮತ್ತು ಎ.ಎನ್.ಸಿ. ಸರ್ಕಾರದಲ್ಲಿ ಮುಂದುವರೆಯಬೇಕೆ ಎಂಬ ಪ್ರಶ್ನೆ ತೀವ್ರವಾಗಿ ಎದ್ದಿತ್ತು. ಕಮ್ಯುನಿಸ್ಟ್ ಪಕ್ಷ ವಿರೋಧ ಪಕ್ಷವಾಗಿ ಕೆಲಸ ಮಾಡುವುದೇ ಎಂಬ ಜಿಜ್ಞಾಸೆ ಆರಂಭವಾಗಿತ್ತು. ಆದರೆ ಪಕ್ಷ ಈ ಹಿನ್ನೆಲೆಯಲ್ಲಿ ತ್ರಿಪಕ್ಷೀಯ ಕೂಟದಲ್ಲಿ ಮತ್ತು ಎ.ಎನ್.ಸಿ. ಸರ್ಕಾರದಲ್ಲಿ ಮುಂದುವರೆಯುವ ಮತ್ತು ಅವನ್ನು ಬಲ ಪಡಿಸುವ ನಿರ್ಧಾರ ತೆಗೆದುಕೊಂಡಿತ್ತು. ಎ.ಎನ್.ಸಿ., ಸರ್ಕಾರ ಮತ್ತು ದೇಶ/ಸಮಾಜದ ಎಲ್ಲಾ ವಿಭಾಗಗಳಲ್ಲೂ ಕಾರ್ಮಿಕ ವರ್ಗದ ಅಧಿಪತ್ಯ ಸ್ಥಾಪಿಸಬೇಕು ಎಂಬ ಬಗ್ಗೆ ಒತ್ತು ಕೊಟ್ಟಿತ್ತು. ಅದನ್ನು ಮಹಾಧಿವೇಶನ ಪುನರುಚ್ಚರಿಸಿದೆ. ಇದು ಮಹಾಧಿವೇಶನದ ಮುಂದಿದ್ದ ಪ್ರಮುಖ ವಿಷಯವಾಗಿತ್ತು. ಅಧಿಪತ್ಯ ಸ್ಥಾಪಿಸುವುದರಲ್ಲಿ ಸಾಧಿಸಲಾಗಿರುವ ಪ್ರಗತಿಯನ್ನು ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನ ಗಂಭೀರವಾಗಿ ವಿಮರ್ಶಿಸಿತು.

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಗಟ್ಟಿಗೊಳಿಸಿ, ಇನ್ನಷ್ಟು ತೀವ್ರಗೊಳಿಸಿ ಸಮಾಜವಾದದತ್ತ ಮುನ್ನಡೆಸಲು ಅದೇ ದಾರಿ ಎಂದು ಸಮ್ಮೇಳನ ಒತ್ತಿ ಹೇಳಿದೆ. ಬಂಡವಾಳಶಾಹಿಯ ತೀವ್ರ ಜಾಗತಿಕ ಬಿಕ್ಕಟ್ಟು, ತ್ರಿಪಕ್ಷೀಯ ಕೂಟದೊಳಗಿನ ಬಲಾಬಲ ಮತ್ತು ತೀವ್ರ ಬದಲಾವಣೆಗೆ ಜನತೆಯ ತೀವ್ರ ಬಯಕೆ ಇದಕ್ಕೆ ಇನ್ನೂ ಹೆಚ್ಚು ಅನುಕೂಲಕರವಾದ ಸನ್ನಿವೇಶ ಉಂಟು ಮಾಡಿದೆ. ಇದಕ್ಕಾಗಿ ತ್ರಿಪಕ್ಷೀಯ ಕೂಟವನ್ನು ಪುನರ್ರಚಿಸುವ ನಿರ್ದಿಷ್ಟ ಪ್ರಸ್ತಾವಗಳನ್ನು ಮುಂದಿಟ್ಟಿದೆ. ಈ ಪ್ರಸ್ತಾವಗಳನ್ನು ಎ.ಎನ್.ಸಿ. ಮತ್ತು ಕೊಸಾಟು ಮುಂದೆ ತಂದು ಕೂಲಂಕಷವಾಗಿ ಚರ್ಚಿಸಿ, ಕೆಲವು ತಿಂಗಳುಗಳಲ್ಲಿ ನಡೆಯಲಿರುವ ಅವುಗಳ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಈ ಬಗ್ಗೆ ವ್ಯಾಪಕ ಸಹಮತ ರೂಪಿಸಬೇಕು ಎಂದು ಮಹಾಧಿವೇಶನ ನಿರ್ದೇಶಿಸಿದೆ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಗಟ್ಟಿಗೊಳಿಸಿ, ಇನ್ನಷ್ಟು ತೀವ್ರಗೊಳಿಸಲು ಎ.ಎನ್.ಸಿ. ಸಹ ತನ್ನ ವಿಶೇಷ



ನೀತಿ ನಿರ್ಧಾರಕ ಸಮ್ಮೇಳನದಲ್ಲಿ ಕರೆ ಕೊಟ್ಟಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ವಿವಿಧ ಹಂತದ ಸರ್ಕಾರಗಳಲ್ಲಿ ಭಾಗವಹಿಸುತ್ತಿರುವ ಪಕ್ಷದ ಸದಸ್ಯರ ಕೆಲಸ, ಪರಿಣಾಮಕಾರಿತನ, ಕಾರ್ಯ ವೈಖರಿ ಇವೆಲ್ಲವನ್ನೂ ಮಹಾಧಿವೇಶನ ವಿಮರ್ಶಿಸಿತು. ಆದರ್ಶಪ್ರಾಯವಾಗಿ ಕೆಲಸ ಮಾಡುತ್ತಿರುವವರನ್ನು ಅಭಿನಂದಿಸುವ ಜತೆಗೆ, ಹಲವು ನಕಾರಾತ್ಮಕ ಬೆಳವಣಿಗೆಗಳನ್ನೂ ಮಹಾಧಿವೇಶನದ ಘೋಷಣೆ ಖಂಡಿಸಿದೆ. ಕೆಲವು ಸಂಗಾತಿಗಳಲ್ಲಿ ವೈಯಕ್ತಿಕವಾದ, ಅಧಿಕಾರ ಸ್ಥಾನಗಳಿಗೆ ಘರ್ಷಣೆ, ಭ್ರಷ್ಟಾಚಾರ ಮುಂತಾದ ಬೆಳವಣಿಗೆಗಳನ್ನು ಖಂಡಿಸಿ, ಅದನ್ನು ತಿದ್ದಿಕೊಳ್ಳದಿದ್ದರೆ ಉಗ್ರ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ವಿಧಿಸಿದೆ. ಎಲ್ಲಾ ಸದಸ್ಯರು ಆದರ್ಶಪ್ರಾಯ ಕ್ರಾಂತಿಕಾರಿ ಮಂಚೂಣಿಯ ಕಾರ್ಯಕರ್ತರಾಗಿರಬೇಕೆಂದು ಕರೆ ಕೊಟ್ಟಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಮಿಕರು ಮತ್ತು ಬಡವರ ಸಮರಶೀಲ ಸಾಮೂಹಿಕ ಸಂಘಟನೆಗಳನ್ನು ಕಟ್ಟುವುದಕ್ಕೆ ಆದ್ಯತೆಗೆ ಒತ್ತು ಕೊಡುತ್ತಾ ಕೆಲವು ಸಂಘಟನೆಗಳ 'ಎನ್.ಜಿ.ಒ.ಕರಣ' ವನ್ನು ಖಂಡಿಸಿದೆ. ಅಗತ್ಯಬಿದ್ದಲ್ಲಿ ಸಾಮಾಹಿಕ ಸಂಘಟನೆಗಳ ಜತೆ ಸಂಬಂಧ ಇಟ್ಟುಕೊಂಡ ಜನತೆಯಲ್ಲಿ ಗಟ್ಟಿ ನೆಲೆ ಇರುವ ಎನ್.ಜಿ.ಒ.ಗಳನ್ನು ಸ್ಥಾಪಿಸಬೇಕೆಂದು ಕರೆ ನೀಡಿದೆ. ಮಹಾಧಿವೇಶನ ಆರ್ಥಿಕದ ಆಯಕಟ್ಟಿನ ಕ್ಷೇತ್ರಗಳಲ್ಲಿ (ತೈಲ, ಗಣಿಗಾರಿಕೆ) ಆಯಕಟ್ಟಿನ ವಿಭಾಗಗಳ ರಾಷ್ಟ್ರೀಕರಣಕ್ಕೆ ಮತ್ತು 2014 ರೊಳಗೆ ಶೇ.30 ಭೂ ಹಂಚಿಕೆ ಮಾಡುವ ಭೂಸುಧಾರಣೆಗೆ ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿದೆ. ಕಮ್ಯುನಿಸ್ಟ್ ಪಕ್ಷ ಮತ್ತು ದಕ್ಷಿಣ

ತ್ರಿಾದ ಪ್ರಭುತ್ವ, ಕ್ರಿಯಾಶೀಲ ಪ್ರಜಾಸತ್ತಾತ್ಮಕ ಭಿವೃದ್ಧಿ-ಪರ ಪ್ರಭುತ್ವ ಕಟ್ಟುವಿಕೆ, ಗ್ರಾರಿಕೀಕರಣ, ಕೃಷಿ ಮತ್ತು ಗ್ರಾಮೀಣ ಭಿವೃದ್ಧಿ, ಹಣಕಾಸು ಕ್ಷೇತ್ರದಲ್ಲಿ ಬದಲಾವಣೆ, ಸಾಮಾಜಿಕ ಭದ್ರತೆ ಮತ್ತು ಆರೋಗ್ಯ ಸೇವೆ, ಪುರುಷ-ಪ್ರಾಧಾನ್ಯತೆ ವಿರುದ್ಧ..... ಇತ್ಯಾದಿ ರ್ಣಯಗಳನ್ನು ಅಂಗೀಕರಿಸಿತು.

ತ್ರಿಪಕ್ಷೀಯ ಕೂಟದಲ್ಲಿ ಮತ್ತು ಎ.ಎನ್.ಸಿ. ರ್ಕಾರದಲ್ಲಿ ಮುಂದುವರೆಯುವ ಬಗ್ಗೆ ತೀವ್ರ ನ್ನಾಭಿಪ್ರಾಯಗಳಿಂದಾಗಿ ನಾಯಕತ್ವದ ಆಯ್ಕೆ ಹಳ ಸಮಸ್ಯೆಗಳನ್ನು ಎದುರಿಸಬಹುದು. ಅದು ೀವ್ರ ಅನೈಕ್ಯತೆಗೆ ಕಾರಣವಾಗಬಹುದು ಎಂದೆಲ್ಲಾ ಾಧ್ಯಮಗಳಲ್ಲಿ ಊಹಾಪೋಹಗಳು ಂದಿದ್ದವು. ಅವನ್ನು ಹುಸಿ ಮಾಡಿ ರ್ವಾನುಮತದಿಂದ ಕೇಂದ್ರ ಸಮಿತಿ ಮತ್ತು ದಾಧಿಕಾರಿಗಳನ್ನು ಆರಿಸಲಾಯಿತು. ಹಿಂದಿನ ಧ್ಯಕ್ಷ ಮತ್ತು ಖಜಾಂಚಿ ಮುಂದುವರೆಯದಿರುವ ಚ್ಛೆ ವ್ಯಕ್ತಪಡಿಸಿದ್ದರು. ಆ ಸ್ಥಾನಗಳಿಗೆ ಇಬ್ಬರು ೊಸಬರನ್ನು ಆಯ್ಕೆ ಮಾಡಲಾಯಿತು. ಹಿಂದಿನ ಧಾನ ಕಾರ್ಯದರ್ಶಿ ಮತ್ತು ಒಬ್ಬ ಉಪ ಧಾನ ಕಾರ್ಯದರ್ಶಿ ಪುನರಾಯ್ಕೆಯಾಗಿದ್ದಾರೆ. ೊಸದಾಗಿ ರಚಿಸಲಾದ ಎರಡನೇ ಉಪ ಧಾನ ಕಾರ್ಯದರ್ಶಿ ಮತ್ತು ಉಪಾಧ್ಯಕ್ಷ ್ಥಾನಗಳಿಗೆ ಪೂರ್ಣ ಅವಧಿಗೆ ಪಕ್ಷದ ಪ್ರಧಾನ ಚೇರಿಯಲ್ಲಿ ಇದ್ದು ಕೆಲಸ ಮಾಡಲಿರುವ ಬ್ಬರು ಹೊಸಬರನ್ನು ಆಯ್ಕೆ ಮಾಡಲಾಗಿದೆ. ಳಿದ ಪದಾಧಿಕಾರಿಗಳು ಸರ್ಕಾರ, ಎ.ಎನ್.ಸಿ., ಾರ್ಲಿಮೆಂಟು ಅಥವಾ ಇತರ ಸಂಘಟನೆಗಳಲ್ಲಿ ಹೀಗೆ ಒಂದಲ್ಲ ಒಂದು ಇತರ ವಾಬ್ದಾರಿಯನ್ನೂ ಹೊತ್ತವರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಎಲ್ಲಾ ದಾಧಿಕಾರಿಗಳು ಪೂರ್ಣಾವಧಿಯಲ್ಲಿ ಪಕ್ಷದ ಕಛೇರಿಗಳಿಗೆ ಲಭ್ಯವಿರಬೇಡವೇ ಎಂಬ ಬಗ್ಗೆ ಮಹಾಧಿವೇಶನ ಗಂಭೀರವಾಗಿ ಚರ್ಚಿಸಿತು. ಪಕ್ಷಿಯ ಕೂಟವನ್ನು ಪುನರ್ರಚಿಸುವ ಮತ್ತು ಆ ಪಡಿಸುವ ಅಗತ್ಯದ ಪ್ರಸ್ತುತ ಸನ್ನಿವೇಶದಲ್ಲಿ ರೀತಿಯ ಎರಡು ಜವಾಬ್ದಾರಿಗಳು ನಿವಾರ್ಯ ಎಂದು ಮಹಾಧಿವೇಶನ ರ್ಧರಿಸಿತು. ಮುಂಬರುವ ಎ.ಎನ್.ಸಿ. ಮ್ಮೇಳನದಲ್ಲಿ ಈಗಿನ ಅಧ್ಯಕ್ಷರ ಪುನರಾಯ್ಕೆಗೆ ಕ್ಷ ಬೆಂಬಲಿಸುವುದೇ ? ಅಥವಾ ಇನ್ನೂ ಚ್ಚು 'ತೀವ್ರಗಾಮಿ' ಮತ್ತು 'ಪಕ್ಷದ ನೀತಿಗಳಿಗೆ ತ್ತಿರ ಇದ್ದಾರೆ' ಎನ್ನಲಾದ ಈಗಿನ ಉಪಾಧ್ಯಕ್ಷರನ್ನು ಬೆಂಬಲಿಸುವುದೇ ಎಂಬ ಊಹಾಪೋಹಗಳೂ ಮಾಧ್ಯಮದಲ್ಲಿ ಣಿಸಿಕೊಂಡಿದ್ದವು. ಮಹಾಧಿವೇಶನದ ನಂತರ ಾಧ್ಯಮಗಳನ್ನು ಉದ್ದೇಶಿಸಿ ಮಾತಾಡುತ್ತಾ ಧಾನ ಕಾರ್ಯದರ್ಶಿ, ಇದು ಎ.ಎನ್.ಸಿ.ಯ ಂತರಿಕ ಸಂಘಟನಾ ಪ್ರಶ್ನೆ. ಕಮ್ಯುನಿಸ್ಟ್ ಪಕ್ಷ ರಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ. .ಎನ್.ಸಿ.ಯ ಸದಸ್ಯರಾಗಿ ಮಾತ್ರ ಕಮ್ಯುನಿಸ್ಟರು ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ ಎಂದು ಷ್ಟ ಪಡಿಸಿದ್ದಾರೆ. ●

ಕವನ

ಕ್ರೂರ ಮೃಗಗಳು ಇವರು ಕೋಮುವಾದಿಗಳು

ಕ್ರೂರ ಮೃಗಗಳೂ
ಇವರು ಕೋಮುವಾದಿಗಳು !!

ವೇದದ ಹೆಸರಲಿ ವೇದಿಕೆ ಮಾಡಿ
ಧರ್ಮಶಾಸ್ತ್ರಗಳ ಭಾಷಣ ಬಿಗಿದು
ಬಡ ಜನರಿಗೆ ಮಂಕು ಬೂದಿಯ ಎರಚಿ
ಮೌಢ್ಯವ ತುಂಬಿ ಭ್ರಾಂತಿ ಮಾಡುವರು. !! ಥೂ ಥೂ !!

ಪರಸ್ತ್ರೀಯರನು ಮುಟ್ಟದ ರಾಮನು ಪರಸ್ತ್ರೀಯರನು ಮಾತೆ
ಎಂದ ಹನುಮನು !
ಹನುಮನ ಬಂಟರು ರಾಮನ ಹೆಸರಲಿ
ಮಾತೆಯ ಮಾನ ಭಂಗ ಮಾಡುವರು. !! ಥೂ ಥೂ !!

ಗೋಮಾತೆ ಹೆಸರಲಿ ಹಫ್ತ ವಸೂಲಿ
ವಸೂಲಿಯ ಹಣದಲಿ ಮೋಜನು ಮಾಡಿ !
ಧರ್ಮ ರಕ್ಷಣೆಯ ಹೆಸರಿನಲ್ಲಿ
ಲೂಟಿ ಮಾಡುವ ಕೋಮುವಾದಿಗಳು. !! ಥೂ ಥೂ !!

ಮಾತೆಮಾತೆ ಎನ್ನುವರಿವರು
ಒಂಟಿ ಸಿಕ್ಕ ಮಾತೆಯನು ಬಿಡರು !
ಸಂತೆ ವಾಹನ ವಿಧಾನಸೌಧದಲ್ಲೂ
ಕಾಮದ ಕಣ್ಣಿನ ಮನೋವಿಕಾರಿಗಳು. !! ಥೂ ಥೂ !!

ಎಡವಟ್ಟಾದರೂ ಶೋಭೆಯ ಬಿಡನು
ಚಿಕಿತ್ಸೆ ನೀಡಿದ ನರ್ಸನು ಬಿಡನು !
ಎಂಎಲ್ಎ ಆಗಲಿ ಸಂಚಾಲಕನಾಗಲಿ
ಕಾಮ ಬಯಕೆಯ ಕೋಮುವಾದಿಗಳು. !! ಥೂ ಥೂ !!

ಕೇಸರಿ ಶಾಲು ಉದ್ದನ ನಾಮ
ಮಠಾಧಿಪತಿಗೂ ಕೋಮುವಾದಿಗೂ ಬಾಯಲಿ
ಮಂತ್ರ ರಾಮರಾಮ
ಮನಸಿನ ತುಂಬಾ ತೀರದ ಕಾಮ !! ಥೂ ಥೂ !!



– ಸಮುದಾಯ, ಬೆಳ್ತಂಗಡಿ

ಎಲ್ಲಾ ಓಕೆ! ಮಾಸ್ಟರ್ ಕಾರ್ಡಿನಲ್ಲಿ ಮಾರ್ಕ್ಸ್ ಯಾಕೆ ?

ಜರ್ಮನಿಯ ಬ್ಯಾಂಕೊಂದು (ಸ್ಪಾರ್ಕಸ್ಸೆ ಚೆಮನಿಟ್ಸ್ ಬ್ಯಾಂಕ್) ತನ್ನ ಮಾಸ್ಟರ್ ಕಾರ್ಡಿನ ಹಲವು ವಿನ್ಯಾಸಗಳಲ್ಲಿ ಒಂದನ್ನು ಆಯ್ಕೆ ಮಾಡಲು ತನ್ನ ಗ್ರಾಹಕರ ಅಭಿಪ್ರಾಯ ಸಂಗ್ರಹ ಮಾಡಿತ್ತು. ಭಾರೀ ಬಹುಮತದಿಂದ ಮಾರ್ಕ್ಸ್ ಶಿಲ್ಪ ಇರುವ ವಿನ್ಯಾಸವನ್ನು ಆಯ್ಕೆ ಮಾಡಿದ್ದು ಜರ್ಮನಿಯಲ್ಲಿ ದೊಡ್ಡ ಸುದ್ದಿಯಾಗಿದೆ. ಹಣಕಾಸು ಬಂಡವಾಳಶಾಹಿ ಮಾರ್ಕ್ಸ್‌ನನ್ನು ನುಂಗಿ ನೀರು ಕುಡಿದಿದೆ ಎಂದು ಮೂದಲಿಸುವವರಿಂದ ಹಿಡಿದು, ಮಾಸ್ಟರ್ ಕಾರ್ಡಿನಿಂದಲೂ ಮಾರ್ಕ್ಸ್‌ನನ್ನು ಹೊರಗಿಡಲು ಅವರಿಗೆ ಸಾಧ್ಯವಾಗಿಲ್ಲ ಎಂದು ಸಂಭ್ರಮ ಪಡುವವರೆಗೆ ಈ ಬಗ್ಗೆ ಸ್ಪಂದನ ಬಂದಿದೆ.

ಈ ಬ್ಯಾಂಕು ಹಿಂದಿನ ಸಮಾಜವಾದಿ ಪೂರ್ವ ಜರ್ಮನಿಯ ಚೆಮನಿಟ್ಸ್ ನಗರದಲ್ಲಿ ಮುಖ್ಯ ಕಚೇರಿ ಇರುವ ಬ್ಯಾಂಕು. 1947 ರಿಂದ 1990 ರ ವರೆಗೆ ಈ ನಗರಕ್ಕೆ ಕಾರ್ಲ ಮಾರ್ಕ್ಸ್ ನಗರ ಎಂದು ಹೆಸರಿಡಲಾಗಿತ್ತು. ಮಾಸ್ಟರ್ ಕಾರ್ಡಿನ ವಿನ್ಯಾಸದಲ್ಲಿ ಇದ್ದಿದ್ದು, ಈ ನಗರದ ಪ್ರಮುಖ ಕುರುಹುಗಳಲ್ಲಿ ಒಂದಾದ 'ಮಾರ್ಕ್ಸ್ ಶಿಲ್ಪ. ಮಾರ್ಕ್ಸ್‌ನ ಜನಪ್ರಿಯತೆ ಇಂದಿನ ಜರ್ಮನಿಯಲ್ಲಿ ಅಪರೂಪದ ಸಂಗತಿ ಏನಲ್ಲ. ಇತ್ತೀಚೆಗೆ ಹಿಂದಿನ ಪೂರ್ವ ಜರ್ಮನಿಯಲ್ಲಿ ನಡೆಸಿದ ಸಮೀಕ್ಷೆ ಒಂದರಲ್ಲಿ ಶೇ.52 ಜನ ಮುಕ್ತ ಮಾರುಕಟ್ಟೆ ಆರ್ಥಿಕ ಒಳ್ಳೆಯ ವ್ಯವಸ್ಥೆ ಅಲ್ಲ ಎಂದು ಹೇಳಿದ್ದಾರೆ. ಶೇ. 43 ಜನ ಹಿಂದಿನ ಸಮಾಜವಾದಿ ಪದ್ಧತಿ ವಾಪಸು ಬೇಕು ಎಂದೂ ಅಭಿಪ್ರಾಯ ಪಟ್ಟಿದ್ದಾರೆ.



ಇದೇ ಕಾರ್ಡಿನಲ್ಲಿ ಈ ವಿನ್ಯಾಸದಲ್ಲಿ ಮಾರ್ಕ್ಸ್ ಶಿಲ್ಪದ ಜತೆ ಘೋಷಣೆ ಕೊಡಲೂ ಸ್ಪರ್ಧೆ ಏರ್ಪಡಿಸಲಾಗಿದೆ. ಇದಕ್ಕೆ ಬಂದ ಕೆಲವು ಘೋಷಣೆಗಳು ಹೀಗಿವೆ:

"ಪ್ರತಿ ಒಬ್ಬರಿಂದಲೂ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ, ಪ್ರತಿಯೊಬ್ಬರಿಗೂ ಅವರ ಅಗತ್ಯಕ್ಕೆ ಅನುಗುಣವಾಗಿ..ಉಳಿದದ್ದಕ್ಕೆಲ್ಲಾ ಮಾಸ್ಟರ್ ಕಾರ್ಡ ಇದೆ!".

"ಪ್ರತಿಯೊಬ್ಬರಿಂದಲೂ ಅವರ ಅಗತ್ಯ ಇರುವವರೆಗೆ, ಕೆಲವರಿಗೆ ಅವರ ದುರಾಸೆಯಷ್ಟು"

"ಆದರ್ಶ ಕಮ್ಯುನಿಸ್ಟ್ ಸಮಾಜದಲ್ಲಿ ಸಂತೋಷವನ್ನು ಗ್ರಾಹಕ ವಸ್ತುಗಳಿಂದ ಅಳೆಯಲಾಗುವುದಿಲ್ಲ. ಬೇರೆಲ್ಲಾ ಸಮಾಜಗಳಿಗೆ ಮಾಸ್ಟರ್ ಕಾರ್ಡು ಇದೆ!"

ಯಾವ ಘೋಷಣೆ ಆಯ್ಕೆ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ಸಿಕ್ಕಿಲ್ಲ. ●

JANASHAKTHI KANNADA VARA PATRIKE SEP 22, 2012 Price : Rs. 5/- RNI No. KARKAN /2006/17926 Posted on every Saturday
Postal Reg. No. RNP/KA/BGS/2078/2010-12 Posted at MBC Bangalore GPO

ಮರೆತೇನೆಂದರ ಮರೆಯಲಿ ಹ್ಯಾಂಗ ಮಾವೋ ತ್ಸೇ ತುಂಗ

ಅರಿವಿಗಾಗಿ ತಹತಹ ಮತ್ತು ಸಂಘರ್ಷ

ಭಾಗ-3

ಜಿ.ಎನ್. ನಾಗರಾಜ್




ಕುಟುಂಬ ಸದಸ್ಯರೊಂದಿಗೆ ಬಾಲಕ ಮಾವೋ

ಮಾವೋರವರು ಎಂಟನೆಯ ವರ್ಷದಲ್ಲಿದ್ದಾಗ ಅವರ ಊರು ಶಾವೋಶಾನ್‌ನಲ್ಲಿದ್ದ ಒಂದು ಹಳೆಯ ಮಾದರಿಯ ಪ್ರಾಥಮಿಕ ಶಾಲೆಗೆ ಸೇರಿಸಲಾಯಿತು. ಅದೊಂದು ಚೀನಾದ ಶಾಸ್ತ್ರೀಯ ಗ್ರಂಥಗಳನ್ನು ಬೋಧಿಸುವ ಶಾಲೆ. (ನಮ್ಮ ವೇದ ಶಾಲೆಗಳಂತೆ) ಅಲ್ಲಿಯ ಮಾಸ್ತರರು ಕಠಿಣ ಶಿಕ್ಷೆ ನೀಡುವುದಕ್ಕೆ ಹೆಸರಾದವರು. ಮಾವೋರವರು ಈ ಶಾಲೆಯಲ್ಲಿ ಶಾಸ್ತ್ರೀಯ ಗ್ರಂಥಗಳನ್ನು ಚೆನ್ನಾಗಿ ಕಲಿತರೂ ಕೂಡ ಅವುಗಳಲ್ಲಿ ಅವರಿಗೆ ಆಸಕ್ತಿಯಿರಲಿಲ್ಲ, ಬದಲಾಗಿ ಚೀನಾದ ಇತಿಹಾಸದಲ್ಲಿ ನಡೆದ ದಂಗೆಯ ಕಥಾನಕಗಳನ್ನು ಓದುವುದರಲ್ಲಿ ಬಹಳ ಆಸಕ್ತಿ. ಈ ಕಥೆಗಳು ಜನಜನಿತವಾದವು. ಆದರೆ ಇವುಗಳನ್ನು ಅಂದಿನ ಚೀನಾ ಸಾಮ್ರಾಟರು ನಿಷೇಧಿಸಿದ್ದರು. ಅವರ ಶಾಲೆಯ ಶಿಕ್ಷಕರೂ ಕೂಡ ಇವುಗಳನ್ನು ಓದುವುದಕ್ಕೆ ಕಟ್ಟಾವಿರೋಧಿಯಾಗಿದ್ದರು. ಇಂತಹ ಪರಿಸ್ಥಿತಿಯಲ್ಲಿ ಮಾವೋ ಶಾಲೆಯಲ್ಲಿ ಶಾಸ್ತ್ರೀಯ ಗ್ರಂಥಗಳ ಒಳಗೆ ಈ ಕಥಾನಕಗಳ ಪುಸ್ತಕವನ್ನು ಬಚ್ಚಿಟ್ಟು ಓದುತ್ತಿದ್ದರು. ಮನೆಯಲ್ಲಿ ಕೂಡ ಅವರ ತಂದೆಗೆ ಮಗ ಇಂತಹ ಪುಸ್ತಕಗಳನ್ನು ಓದಿ ಸಮಯ ಹಾಳು ಮಾಡುವುದು ಇಷ್ಟವಿರಲಿಲ್ಲ. ಮನೆಯಲ್ಲಿ ಹೊಲದ ಕೆಲಸಗಳನ್ನು, ತಂದೆಯ ವ್ಯಾಪಾರದ ಲೆಕ್ಕಗಳನ್ನು ಬರೆದು ಮುಗಿಸಿದ ಮೇಲೆ ರಾತ್ರಿ ಬಹಳ ಹೊತ್ತಿನವರೆಗೂ ಈ ಕಥಾನಕಗಳನ್ನು ಓದುತ್ತಿದ್ದರು. ತಂದೆಗೆ ಗೊತ್ತಾಗಬಾರದೆಂದು ತಮ್ಮ ಕೊಠಡಿಯ ಕಿಟಕಿಯ ಮೇಲೆ ಬಟ್ಟೆ ಮುಚ್ಚಿ ಓದಬೇಕಾಗುತ್ತಿತ್ತು. ಇನ್ನು ಹತ್ತೊಂಬತ್ತನೆಯ ಶತಮಾನದ ಕೊನೆಯ ಆ ಕಾಲದಲ್ಲಿ ಎಣ್ಣೆ ಬುಡ್ಡಿ ದೀಪದ ಬೆಳಕಿನಲ್ಲಿ ಈ ಓದು ನಡೆಯುತ್ತಿತ್ತು. ತಾವು ಓದಿದ ಈ ಕಥೆಗಳನ್ನು ತಮ್ಮ ಗೆಳೆಯರೊಡನೆ ಹಂಚಿಕೊಳ್ಳುತ್ತಿದ್ದರು. ಹೀಗೆ ಅತಿ ಸಣ್ಣ ವಯಸ್ಸಿನಲ್ಲಿಯೇ ಮನೆಯಲ್ಲಿ, ಶಾಲೆಯಲ್ಲಿ ವಿರೊಧವನ್ನೆದುರಿಸಿ ತಮ್ಮ ಅರಿವನ್ನು ಗಳಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಯಿತು.

ಮೊದಲ ಸಂಘರ್ಷ

ಶಾಲೆಯಲ್ಲಿನ ಹಾಗೂ ಮನೆಯಲ್ಲಿನ ವಾತಾವರಣ ಎಳೆಯ ಮಾವೋರವರಲ್ಲಿ ಒಳಗೊಳಗೇ ಅಸಮಧಾನವನ್ನು ಹುಟ್ಟು ಹಾಕುತ್ತಿತ್ತು.

ಅದು ಒಂದು ದಿನ ಕುದಿತದ ಬಿಂದುವನ್ನು ತಲುಪಿ ಸ್ಫೋಟಿಸಿತು. ಅಂದಿನ ಪಾಳೆಯಗಾರಿ ದಬ್ಬಾಳಿಕೆಯ ಪರಿಸರದಲ್ಲಿ ವಿದ್ಯಾರ್ಥಿಗಳು ತಾವು ಕಲಿತ ಪಾಠವನ್ನು ಒಪ್ಪಿಸಲು ಒಂದು ಪದ್ಧತಿಯನ್ನು ಅವರ ಮಾಸ್ತರರು ರೂಢಿಗೆ ತಂದಿದ್ದರು. ಮಾಸ್ತರರು ವಿದ್ಯಾರ್ಥಿಯನ್ನು ಪಾಠ ಒಪ್ಪಿಸಲು ಕರೆದ ಕೂಡಲೆ ಅವನು ತನ್ನ ಸ್ಥಾನದಿಂದ ಎದ್ದು ಮಾಸ್ತರರ ಪೀಠದ ಮುಂದೆ ಹೋಗಿ ನಡು ಬಗ್ಗಿ ವಂದಿಸಿ ಮತ್ತೆ ಹಿಂತಿರುಗಿ ವಿದ್ಯಾರ್ಥಿಗಳಿಗೆ ಮುಖಮಾಡಿ ನಂತರ ಪಾಠ ಒಪ್ಪಿಸಲು ಆರಂಭಿಸಬೇಕಾಗಿತ್ತು. ಹೀಗೆ ಪಾಠ ಒಪ್ಪಿಸಲು ಮಾವೋರವರನ್ನು ಕರೆದಾಗ ಅವರು ಮಾಸ್ತರರ ಪೀಠದ ಬಳಿ ಹೋಗಲು ನಿರಾಕರಿಸಿದರು. ತಾವು ಇದ್ದ ಜಾಗದಿಂದಲೇ ಪಾಠ ಒಪ್ಪಿಸಲು ಮುಂದಾದರು. ಮಾಸ್ತರರು ರೂಢಿಯಲ್ಲಿದ್ದ ಪದ್ಧತಿಯನ್ನು ಅನುಸರಿಸಲು ಆಜ್ಞೆ ಮಾಡಿದಾಗ ಪ್ರತಿಭಟಿಸಿದರು. ಮನೆಯಲ್ಲಿ ತಮ್ಮ ಪ್ರತಿಭಟನೆಯ ಪರಿಣಾಮ ಏನಾಗಬಹುದೆಂದು ಊಹಿಸಿಕೊಂಡ ಅವರು ಮನೆಗೆ ಹೋಗದೆ ಊರು ಬಿಟ್ಟರು. ಅವರು ಕೇಳಿದ್ದ ಹತ್ತಿರದ ಪಟ್ಟಣಕ್ಕೆ ಹೋಗಬೇಕೆಂದು ಬಯಸಿದರು. ಅವರು ಮೂರು ದಿನ ಊರ ಹತ್ತಿರದ ಬೆಟ್ಟಗಳ ನಡುವೆ ಸುತ್ತಾಡಿದರು. ಮಾವೋರ ತಂದೆ ಮತ್ತು ಬಂಧುಗಳು ಗಾಬರಿಯಾಗಿ ಅವರನ್ನು ಹುಡುಕುತ್ತಾ ಹೊರಟಾಗ ಅವರು ಈ ಬೆಟ್ಟಗಳ ತಪ್ಪಲಿನಲ್ಲಿ



ಮಾವೋರವರ ಬಾಲ್ಯದ ಮನೆಯ ಮಲಗುವ ಕೊಠಡಿ

ಸಿಕ್ಕಿದರು. ದಾರಿ ತಿಳಿಯದೆ ಊರ ಸುತ್ತ ಮತ್ತೆ ಮತ್ತೆ ಸುತ್ತಿ ಮೂರು ದಿನಗಳಲ್ಲಿ ಊರಿಗೆ ಕೇವಲ ಮೂರು ಮೈಲಿ ದೂರದಲ್ಲಿ ಸಿಕ್ಕಿಬಿದ್ದರು. ಅದರೆ ಪಲಾಯನದ ಈ ವಿಫಲ ಪ್ರಯತ್ನವೂ ಕೂಡ ಮಾವೋರ ಮಾತಿನಲ್ಲಿಯೇ ಹೇಳುವುದಾದರೆ ಈ ಮುಷ್ಕರ ಕೂಡ ಫಲ ಕೊಟ್ಟಿತು. ಮನೆಯಲ್ಲಿ; ಶಾಲೆಯಲ್ಲಿ ಹೊಡೆತಗಳು ಕಡಿಮೆಯಾದವು.

ಮತ್ತೊಂದು ಬಾರಿ ಅವರ ಮನೆಯ[ಲ್ಲಿ] ಸಮಾರಂಭವೊಂದಕ್ಕೆ ಬಂದ ಅತಿಥಿಗ[ಳ] ಮುಂದೆ ಅವರ ತಂದೆ ಮಾವೋರ ಬ[ಗ್ಗೆ] ಹೀನಾಯವಾಗಿ ಮಾತನಾಡಿದಾಗ ಅವ[ರು] ತಕ್ಷಣವೇ ಪ್ರತಿಭಟಿಸಿ ಮನೆಯಿಂ[ದ] ಹೊರಬಂದರು. ಅವರ ತಂದೆ ಹಾಗು ಬಂಧುಗಳು ಹಿಂಬಾಲಿಸಿದಾಗ ಮನೆಯ ಮುಂದಿನ ಕೊಳದಲ್ಲಿ ಬೀಳುತ್ತೇನೆಂದ[ು] ಹೆದರಿಸಿದರು. ಮನೆಯಲ್ಲಿ ಪಾಳೆಯಗಾ[ರಿ] ಮೌಲ್ಯಗಳ ವಿರುದ್ಧ ನಡೆಸಿದ ಇಂತಹ ಪ್ರತಿಭಟನೆಗಳಲ್ಲಿ ಮುಂದೆ ಅವ[ರ] ಜೀವನದುದ್ದಕ್ಕೂ ಸಾಗಿಸಿದ ಹೋರಾಟ[ದ] ಮನೋಭಾವದ ಬೀಜ ರೂಪವನ್ನು ಕಾಣಬಹುದು.

ಹಳ್ಳಿಯ ಆ ಶಾಲೆಯ ಶಿಕ್ಷ[ಣ] ಮಾವೋರವರು ಹದಿಮೂರು ವರ್ಷ[ದ] ಬಾಲಕರಾಗಿದ್ದಾಗ ಮುಗಿಯಿತು. ಅವರ ತಂ[ದೆ] ಅವರನ್ನು ಪೂರ್ಣವಾಗಿ ಹೊಲದ[ಲ್ಲಿ] ದುಡಿಯಲು ಹಚ್ಚಿದರು. ಹಗಲೆಲ್ಲಾ ಹೊ[ಲ] ಗದ್ದೆಗಳಲ್ಲಿ, ಸಂಜೆಯಾದೊಡನೆ ಅಪ್ಪ[ನ] ವ್ಯಾಪಾರದ ಲೆಕ್ಕಾಚಾರ ಬರೆಯುವುದು ಇದ[ು] ಅವರ ಜೀವನವಾಯಿತು. ರಾತ್ರಿಯ ವೇ[ಳೆ] ಅಪ್ಪನಿಗೆ ಕಾಣದಂತೆ ತನ[ಗೆ] ಸಮಾಜದ ಅರಿವನ್ನು ನೀಡು[ವ] ಕೆಲವು ಪುಸ್ತಕಗಳನ್ನು ಓದುವುದೊಂದೇ ಸಂತೋಷವನ್ನು ನೀಡು[ವ] ಅವರ ಚಟುವಟಿಕೆ.

ಈ ನಡುವೆ ಅವರಿ[ಗೆ] ಒಂದು ಪುಸ್ತಕ ದೊರಕಿತ[ು]. 'ಎಚ್ಚರಿಕೆಯ ಘಂಟೆ' ಎನ್ನು[ವ] ಇದು ಹಲ[ವು] ಸುಧಾರಣಾವಾದಿ ಲೇಖಕ[ರು] ಬರೆದ ಲೇಖನಗಳ ಸಂಗ್ರ[ಹ]. ಚೀನಾದ ಅಂದಿನ ದೌರ್ಬಲ್[ಯ] ಆಧುನಿಕ ಸಾರಿಗೆ ಹಾಗ[ೂ] ಸಂವಹನದ ಸಾಧನಗಳು ಇಲ್ಲದ್ದೇ ಕಾರ[ಣ] ಎಂದು ಅದರಲ್ಲಿ ವಿಶ್ಲೇಷಿಸಲಾಗಿತ್ತು. [ಈ] ವಿಚಾರಗಳು ಮಾವೊರವರ ಓದಿನ ಹಸಿವ[ನ್ನು] ಮತ್ತಷ್ಟು ಹೆಚ್ಚಿಸಿದವು. ಶಾಲೆಯಲ್ಲಿ ಅಧ್ಯಯ[ನ] ಮುಂದುವರೆಸಲು ಹಾತೊರೆದರು. ಆದ[ರೆ] ಅವರ ಅಪ್ಪ ಒಪ್ಪಿಕೊಳ್ಳಬೇಕಲ್ಲ. ಅಪ್ಪ ಮಗ[ನ] ನಡುವೆ ಈ ವಿಷಯದಲ್ಲಿ ವ್ಯಾಜ್ಯವಾಯಿ[ತು]. ಕೊನೆಗೆ ಮತ್ತೊಮ್ಮೆ ಮನೆ ತೊರೆದು ಓ[ಡಿ] ಹೋದರು.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH